



## Tracking:

| Sr | Date | Remarks | By |
|---|---|---|---|
| 1 | 20.03.2018 | Typing Started on | H K Srinivasa Rao |
| 2 | 25.03.2018 | Typing Ended on | H K Srinivasa Rao |
| 3 | 26.03.2018 | Editing by | H K Srinivasa Rao &<br>BS Prithvi Sanjay |

## ॥ ಶ್ರೀ ಹಯವದನ ರಂಗವಿಠ್ಠಲ ಗೋಪೀನಾಥೋ ವಿಜಯತೇ ॥

*Blessed by Lord and with His divine grace, we are pleased to publish this Magnanimous Work of Sri Vadiraja Theertharu. It is a humble effort to make available this Great work to Sadhakas who are interested in the noble path of propagating Acharya Madhwa's Philosophy.*

*With great humility, we solicit the readers to bring to our notice any inadvertant typographical mistakes that could have crept in, despite great care. We would be pleased to incorporate such corrections in the next versions. Users can contact us, for editable version, to facilitate any value additions.*

*Contact: H K SRINIVASA RAO, N0 26, 2ND FLOOR, 15TH CROSS, NEAR VIDHYAPEETA CIRCLE, ASHOKANAGAR, BANGALORE 560050. PH NO. 26615951, 9901971176, 8095551774, Email :*
**srkarc@gmail.com***ಕೃತಜ್ಞತೆಗಳು*




ಜನ್ಮಾಂತರದ ಸುಕೃತದ ಫಲವಾಗಿ ಮಧ್ವಮತದಲ್ಲಿ ಜನಿಸಲು, ಪ್ರೇಮಮೂರ್ತಿಗಳಾಗಿ ನನ್ನ ಅಸ್ತಿತ್ವಕ್ಕೆ ಕಾರಣರಾದ, ಈ ಸಾಧನೆಗೆ ಅವಕಾಶಮಾಡಿದ, ನನ್ನ ಪೂಜ್ಯ ಮಾತಾ ಪಿತೃಗಳಾದ, ದಿವಂಗತರಾದ ಲಲಿತಮ್ಮ ಮತ್ತು ಕೃಷ್ಣರಾವ್ ಹೆಚ್ ಆರ್ ಅವರ ಸವಿ ನೆನಪಿನಲ್ಲಿ ಈ "ಜ್ಞಾನ ಯಜ್ಞ"

"ಮಾತೃದೇವೋ ಭವ-ಪಿತೃದೇವೋಭವ-ಆಚಾರ್ಯದೇವೋಭವ"

## ಗ್ರಂಥ ಋಣ ಹಂಪಿ ವಿಶ್ವವಿದ್ಯಾನಿಲಯದಿಂದ ಪ್ರಕಾಶಿತವಾದ ಶ್ರೀಕೃಷ್ಣ ಬಾಲಲೀಲೆ





# ಶ್ರೀ ಕೃಷ್ಣಬಾಲಲೀಲೆ

## ಪೂರ್ವಾರ್ಧ

ಕಮಲನಾಭನ ಪಾದಕಮಲಗಳಿಗೆ ನಮೋ ಎಂಬೆ
ಅಮಲಮತಿಯ ಕೊಡುವುದೆಂದು ಕಮಲೆಗೆರಗುವೆ ॥1॥

ವಾಯು ಹನುಮ ಭೀಮ ಶ್ರೀಮದಾನಂದತೀರ್ಥರ
ಪಾದಪದ್ಮಗಳಿಗೆರಗುವೆ ಪರಮ ಹರುಷದಿಂದಲೀ ॥2॥

ಸಕಲ ವಿದ್ವತ್ ಪ್ರೌಢರಾದ ಸುಖತೀರ್ಥರ ಮತವ
ಪ್ರಕಟಿಸಿದ ವ್ಯಾಸಮುನಿಯ ಚರಣಕೆರಗುವೆ ॥3॥

ನ್ಯಾಯ ಸುಧೆಯ ವ್ಯಾಖ್ಯಾನ ಮಾಡಿ ಮಾಯವಾದಿಗಳ ಗೆಲಿದ
ರಾಯ ರಾಮಚಂದ್ರರ ಚರಣಕೆರಗುವೆ ॥4॥

ಪ್ರಾಣನಾಥ ವಿರಿಂಚರಿಗೆ ರಾಣಿವಾಸವಾಗಿರಲು
ವೇದ ವರ್ತಮಾನಿಗಳಿಗೆ ವಂದಿಪೆ ನಾನು ॥5॥

ಮುಕ್ಕಣ್ಣ ಹರನು ಜಗಕ್ಕೆ ಗುರು ಎಂದೆನಿಸಿ
ಶಕ್ರ ಸುರಾಭೀಷ್ಟರಿಗೆ ಶರಣೆಂದೆನೂ ॥6॥

ಮಧ್ವಮತಾಬ್ಧಿಪೂರ್ಣಚಂದ್ರನಾದ ಜಯಮುನಿಯ
ಪಾದಗಳಿಗೆರಗುವೇ ಪರಮ ಹರುಷದಿ ॥7॥

ಹಿರಿಯರಿಗೆ ಗುರುಗಳಿಗೆ ಮುನಿಗಳಿಗೆ ಋಷಿಗಳಿಗೆ
ಎರಗಿ ಪೇಳ್ವೆ ರಾಮಕೃಷ್ಣರ ಬಾಲಲೀಲೆಯ ॥8॥

ಚಿತ್ತದೊಲ್ಲಭನ ಪಾದಚಿತ್ತದಲ್ಲಿ ಇಟ್ಟು ನಾನು
ಭಕ್ತಿಯಿಂದ ಪೇಳ್ವೆ ರಾಮಕೃಷ್ಣ ಚರಿತೆಯ ॥9॥

ಘಟ್ಟ ಬೆಟ್ಟ ಸಾಗರ ಸುತ್ತಲಿದ್ದ ಅಸುರರ|
ಹೊತ್ತಿರಲಾರೆನೆಂದು ಪೃಥ್ವಿ ಅತ್ತಳು ॥10॥

ರಾಜ ದೈತ್ಯರನ್ನು ತಾಳಲಾರದೆ ಭೂಮಿದೇವಿ
ಪೋಗಿ ಮೊರೆಯಿಟ್ಟಳು ದೇವತೆಗಳಿಗೆ ॥11॥

ದೇವತೆಗಳೆಲ್ಲರು ಭೂಮಿದೇವಿಯೊಡಗೊಂಡು
ಕ್ಷೀರಸಾಗರಶಯನನೆದುರು ಬಂದರಾಗಲೆ ॥12॥

ಗೋವುರೂಪ ಧರಿಸಿ ಭೂಮಿದೇವಿ ಅಜನ ಬಳಿಗೆ ಬರಲು
ದೇವಾದಿದೇವನ ಸ್ತುತಿಸುತ್ತಿದ್ದರು ॥13॥

ಅಂಬುಧಿಶಯನನಾಗಿ ಅಂಬುಜಾಕ್ಷ ಮಲಗಿರಲು
ಬಂದು ದೇವತೆಗಳೆಲ್ಲ ಸ್ತುತಿಯ ಮಾಡಲು ॥14॥

| |
|---|
| ವಾರಿಧಿಶಯನನಾಗಿ ಅಂಬುಜಾಕ್ಷ ಮಲಗಿರಲು<br>ಬಂದು ದೇವತೆಗಳೆಲ್ಲ ಸ್ತುತಿಯ ಮಾಡಲು ‖15‖ |
| ದೇವತೆಗಳ ಮಾತ ದೇವ ಚಿತ್ತದಲ್ಲಿಟ್ಟು ಬಂದು<br>ದೇವಕಿಯಲ್ಲವತರಿಸುವೆನೆಂದನು ‖16‖ |
| ವಸುದೇವನಲ್ಲಿ ಹುಟ್ಟಿ ಅಸುರರ ಕೊಲ್ಲುವೆನೆಂದು<br>ವಸುಧೆಭಾರ ಇಳುಹುವೆನೆಂದ ವಾಸುದೇವನು ‖17‖ |
| ಹಾಸಿಗೆಯಾಗಿರುವ ಶೇಷದೇವರನ್ನ ಕರೆದು<br>ಜ್ಯೇಷ್ಠನಾಗಿ ಮುಂಚ್ಯವತರಿಸು ಎಂದನು ‖18‖ |
| ಅದಿತಿ ಕಾಶ್ಯಪರು ಮರುತ ಗಂಧರ್ವರೂ<br>ಸನಕಾದಿ ಯೋಗಿಗಳು ಜನಿಸಿರೆಂದನೂ ‖19‖ |
| ಮುನಿಗಳೆಲ್ಲ ತರು ಪಕ್ಷಿ ಮೃಗಗಳಾಗಿ ಜನಿಸಿದರು<br>ಅನಿಮಿಷರೆಲ್ಲ ಗೋಪಾಲರಾದರು ‖20‖ |
| ಸನಕಾದಿ ಯೋಗಿಗಳು ಪಶುಗಳಾಗಿ ಜನಿಸಿದರು<br>ತುರುವ ಕಾಯ್ವ ಗೊಲ್ಲನಾದ ಪರಮಾತ್ಮನು ‖21‖ |
| ದೇವರ ಬಾಲಲೀಲೆ ನೋಡಬೇಕೆಂದೆನುತ<br>ದ್ರೋಣನೆಂಬ ವಸು ನಂದಗೊಪನಾದನು ‖22‖ |
| ಕೃಷ್ಣನ ಬಾಲಲೀಲೆ ನೋಡಬೇಕೆಂದೆನುತ<br>ಆಗ ಧರಾದೇವಿ ಯಶೋದೆಯಾದಳು ‖23‖ |
| ಶೂರನಲ್ಲಿ ಕಾಶ್ಯಪ ವಸುದೇವನಾಗಿ ಜನಿಸಿದನು<br>ದೇವಕನಲ್ಲಿ ಅದಿತಿದೇವಿ ದೇವಕಿಯಾದಳು ‖24‖ |
| ದೇವಕಿ ವಸುದೇವರಿಗೆ ವಿವಾಹದುತ್ಸವವ ಮಾಡೆ<br>ದೇವದುಂದುಭಿಗಳಾವಾಗಲೆಸೆದುವು ‖25‖ |
| ನಾಕು ಬೀದಿಯಲ್ಲಿ ಕಂಸ ಅನೇಕ ಸಂಭ್ರಮವ ಮೆರಸಿ<br>ಆಕಾಶವಾಣಿ ಅವನ ಕುರಿತು ನುಡಿಯಿತು ‖26‖ |
| ತಂಗಿಯಾ ಮದುವೆ ಎಂದು ಸಂಭ್ರಮಗೊಳಲು ಬೇಡ<br>ಕೊಲ್ಲುವನು ಆಕೆಯ ಕಂದ ನಿನ್ನನೂ ‖27‖ |
| ಅಷ್ಟಮಿಯ ರೋಹಿಣಿಯಲ್ಲಿ ಹುಟ್ಟಿದಾ ಮಗನು ನಿನಗೆ<br>ಮೃತ್ಯುವಾಹನೆಂದು ಆವಿರ್ಭೂತ ನುಡಿಯಿತು ‖28‖ |
| ಆಕಾಶವಾಣಿ ನುಡಿಯೆ ಆಕೆಯಾ ಕೊಲುವೆನೆಂದು<br>ವ್ಯಾಕುಲದಿಂದ ಕಂಸ ನಡೆದು ಬಂದನು ‖29‖ |

ಭಗಿನಿಯ ಕೊಲ್ಲುವೆನೆಂದು ಬಹಳ ಕೋಪದಿಂದ ಬಂದ

ಆಯುಧವನ್ನೆ ಹಿಡಿದು ಕಂಸ ಕಡಿವೆನೆನುತಲಿ ||30||

ಕೂಡೆ ಹುಟ್ಟಿದವಳ ಕೊಂದು ದುಷ್ಕರ್ಮವನು ಮಾಡುವರೆ

ಬೇಡ ಕಂಸ ಸ್ತ್ರೀ ಹತ್ಯ ಬೇಗ ಬಾಹುದು ||31||

ಎನ್ನ ಪ್ರಾಣಕೆ ಮುನಿದ ತಂಗಿ ಇದ್ದು ಪ್ರಯೋಜನವೇನು

ಕಣ್ಣ ಹೋದ ಹುಬ್ಬು ತನಗೆ ಬೇಡವೆಂದನು ||32||

ಆನಕದುಂದುಭಿ ಕಂಸಗಾನೇಕ ವಿಧವಾಗಿ ತಿಳುಹಿ

ಆದ ಸುತರನೆಲ್ಲ ನಿನಗೆ ಈವೆನೆಂದನು ||33||

ಎಂದ ಮಾತ ಕೇಳಿ ತಾನು ನಂಬಲಾರೆನೆಂದ ಕಂಸ

ಆಯುಧವನಿಟ್ಟು ಅಡ್ಡ ದಾಟು ಎಂದನು ||34||

ಹೇಳಿದಾ ಮಾತು ಕೇಳಿ ತಾನು ತಾಳಲಾರೆನೆಂದ ಕಂಸ

ಗಾಂಡೀವ ಇಟ್ಟು ಅಡ್ಡ ದಾಟು ಎಂದನು ||35||

ಆನೆ ಇಳಿದು ವಸುದೇವ ರಾಣಿಯಾ ಕೈಯಾ ಹಿಡಿದು

ಆಯುಧವ ದಾಟಿ ಅರಮನೆಗೆ ನಡೆದನು ||36||

ಅಂದಣವನಿಳಿದು ವಸುದೇವ ಹಂಡತಿ ಕೈಯ ಹಿಡಿದು

ಗಾಂಡೀವವ ದಾಟಿ ಅರಮನೆಗೆ ನಡೆದನು ||37||

ಆಗ ಅರಮನೆಯೊಳಗೆ ಭಾಮೆ ದೇವಕಿದೇವಿ

ಬೇಗದಿಂದ ಋತುಮತಿಯಾಗುತ್ತಿದ್ದಳು ||38||

ಕೇಳಿ ಉಗ್ರಸೇನರಾಯ ಬಹಳ ಸಂತೋಷದಿಂದ

ಶೋಭನವ ಮಾಡಿಸಿದ ಅಷ್ಟು ಹರುಷದಿ ||39||

ಅಷ್ಟ ಋಷಿಗಳನ್ನೆ ಕರೆಸಿ ಅಷ್ಟ ಫಲಗಳನ್ನೆ ತರಿಸಿ

ಪುತ್ರಿಯ ಕೈಯಲ್ಲಿ ಫಲದಾನವ ಕೊಡಿಸಿದ ||40||

ಆಗ ಅರಮನೆಯೊಳಗೆ ಭಾಮೆ ದೇವಕಿ ದೇವಿಗೆ

ಬೇಗದಿಂದ ಪ್ರಥಮ ಗರ್ಭವಾಗುತಿದ್ದಿತು ||41||

ಕೇಳಿ ಉಗ್ರಸೇನ ರಾಯ ಬಹಳ ಸಂತೋಷದಿಂದ

ಸೀಮಂತವ ಮಾಡಿಸಿದ ಅಷ್ಟು ಹರುಷದಿ ||42||

ಬಾಲಕನು ಹುಟ್ಟುತ್ತಿರಲು ಬೇಗದಿಂದ ವಸುದೇವ

ಕಂಸನ ಮುಂದೆ ಇಟ್ಟು ಕರವ ಮುಗಿದು ನಿಂತನೂ ||43||

ಬಾಲಕನ ನೋಡುತ ಬಹಳ ಸಂತೋಷದಿಂದ

ನೀನು ನಿನ್ನ ಮನೆಗೆ ಬೇಗ ಹೋಗು ಎಂದನೂ ||44||

| |
|---|
| ಅಂದ ಮಾತು ಕೇಳಿ ತಾನು ಬಂದನಾಗ ವಸುದೇವ<br>ಹೆಂಡತಿಯ ಕೈಲಿ ಶಿಶುವ ತಂದು ಕೊಟ್ಟನೂ ॥45॥ |
| ಹೇಳಿದ ಮಾತು ಕೇಳಿ ತಾನು ಹೋದ ವಸುದೇವ<br>ರಾಣಿಯ ಕೈಲಿ ಶಿಶುವ ತಂದು ಕೊಟ್ಟನೂ ॥46॥ |
| ಅಂಬರದಿಂದಲಿ ಬಂದರೀಗ ನಾರದರು<br>ಇಂದಿರಾಪತಿ ಈತ ಸಂದೇಹವಿಲ್ಲವೂ ॥47॥ |
| ದೇವಕಿ ವಸುದೇವರಿಗೆ ಸೆರೆಯ ಸಂಕೋಲೆ ಹಾಕ್ಸಿ<br>ಬಾಗಿಲ ಮುಂದೆ ಭಟರ ತಂದು ಕಾವಲಿಟ್ಟನು ॥48॥ |
| ನಾರದನ ಮಾತ ಕೇಳಿ ಬಹಳ ಕೋಪವನ್ನೆ ತಾಳಿ<br>ಆಯುಧವನ್ನು ಹಿಡಿದು ಅರಮನೆಗೆ  ಬಂದನು ॥49॥ |
| ಆರು ಮಂದಿ ಪುತ್ರರ ದೇವಕಿಯು ಪಡೆದಿರಲು<br>ಆಗ ಕಂಸ ಶಿಲೆಯೊಳಪ್ಪಳಿಸಿ ಕೊಂದನೂ ॥50॥ |
| ಏಳನೆಯ ಗರ್ಭ ದೇವಕಿಗೆ ಮೂರು ತಿಂಗಳಾಗುತಿರಲು<br>ಮಾಯೆ ಸೆಳೆದುಕೊಂಡು ರೋಹಿಣಿಯಲ್ಲಿಟ್ಟಿತೂ ॥51॥ |
| ಸೆಳೆಯಪಟ್ಟು ಶೇಷನಾಗಿ ಸಂಕರ್ಷಣನೆಂದೆನಿಸಿ<br>ಜನಿಸಿದನೆ ರೋಹಿಣಿಯ ಗೃಹದೊಳಾಗಲೇ ॥52॥ |
| ದೇವಕಿಗೇಳನೆಯ ಗರ್ಭ ಶುರುವಾದವೆಂದು<br>ಬಹಳ ವಾಕ್ಯದಿಂದ ಜನರು ಆಡಿಕೊಂಬರು ॥53॥ |
| ದೇವಕಿಯ ಗರ್ಭದೊಳಗೆ ದೇವ ಶ್ರೀಹರಿಯು ಜನಿಸೆ<br>ಬಹಳ ವಾಕ್ಯದಿಂದ ಜನರು ಆಡಿಕೊಂಬರು ॥54॥ |
| ಅಕಳಂಕಚರಿತ ದೇವಕಿಯ ಬಸುರೊಳಗೆ ಬಂದಿರಲು<br>ವಿಕಸಿತವಾದುದು ಅವಳ ಮುಖ ಕಮಲವು ॥55॥ |
| ಮೂರು ಲೋಕವ ತಿರುಗಿ ನಾರದ ಮುನಿಯು ಬರಲು<br>ಬುದ್ಧಿಕ್ಷಮೆಯಿಂದ ಮಾತನಾಡುತಿದ್ದನು ॥56॥ |
| ಪೂರ್ವಕಾಲದಲ್ಲಿ ಕಾಲನೇಮಿ ವಿಷ್ಣು ಕೈಲಿ ಮರಣ ನಿನಗೆ<br>ಈ ಜನ್ಮದಲಿ ಹರಿಯ ಕೈಯ ಮರಣವೆಂದನು ॥57॥ |
| ಒಂದು ದಿವಸ ದೇವಕಿಯ ಮಂದಿರಕ್ಕೆ ಬಂದ ಕಂಸ<br>ತಂಗಿಯ ಮುಖದ ಕಾಂತಿಯ ನೋಡಿ ಬೆರಗು ಬಿದ್ದನು ॥58॥ |
| ಎಂದಿನಂತಲ್ಲ ಗರ್ಭ ಚೆಂದವಾಗಿ ತೋರುತಿದೆ<br>ಕೊಂದೀತು ಎನ್ನ ಸಂದೇಹವಿಲ್ಲವು ॥59॥ |

| |
|---|
| ದೇವಕಿಗೆಂಟನೆಯ ಗರ್ಭ ಬಹಳ ಎಚ್ಚರಿಕೆ ಎಂದು<br>ಹೇಳಿದನೆ ಕಂಸ ತನ್ನ ಆಳು ಮಂದಿಗೆ ॥60॥ |
| ದೇವಕಿ ವಸುದೇವರಿಗೆ ಸೆರೆಯ ಸಂಕೋಲೆ ಹಾಕ್ಸಿ<br>ಬಾಗಿಲ ಮುಂದೆ ಭಟರ ತಂದು ಕಾವಲಿಟ್ಟನು ॥61॥ |
| ಪುರದ ಬಾಗಿಲುಗಳಿಕ್ಕಿ ಜನರು ಎಲ್ಲ ನಿದ್ರೆಗೈವ ಸಮಯದಲಿ<br>ದೇವಕಿ ದೇವಿಯ ನಡು ನೊಂದುವು ॥62॥ |
| ಅಷ್ಟಮೀ ರೋಹಿಣಿಯಲ್ಲಿ ಅರ್ಧರಾತ್ರಿ ವೇಳ್ಯದಲ್ಲಿ<br>ಅಚ್ಯುತನ ಚರಿತವಾವಿರ್ಭೂತವಾಯಿತು ॥63॥ |
| ಶ್ರಾವಣ ಬಹುಳ ಅಷ್ಟಮಿಯಲ್ಲಿ ಚಂದ್ರ ಉದಯ ಕಾಲದಲ್ಲಿ<br>ಭೂಮಿಯ ಮೇಲೆ ಕೃಷ್ಣನವತರಿಸಿದನು ॥64॥ |
| ಶುಕ್ಲ ಶೋಣಿತ ಸಂಬಂಧ ಪ್ರಸಕ್ತಿ ತನಗಿಲ್ಲವೆಂದು<br>ಶಂಖ ಚಕ್ರ ಚತುರ್ಭುಜದಲವತರಿಸಿದನು ॥65॥ |
| ಜಗದೊಡೆಯ ದೇವಕಿಯ ಗೃಹದೊಳಗೆ ಜನಿಸಿರಲು<br>ಧರಣಿದೇವಿ ತನ್ನ ಭಾರವಿಳುಹಿತೆಂದಳು ॥66॥ |
| ಪಟ್ಟಣದ ಕೇರಿಯೊಳಗೆ ಸುತ್ತೇಳು ಗೃಹದೊಳಗೆ<br>ಪಕ್ಷಿವಾಹನ ಕೃಷ್ಣನ ಬೆಳಕು ತುಂಬಿತು ॥67॥ |
| ರಾಜ ಬೀದಿಯೊಳಗೆ ನಾಲ್ಕೇಳು ಗೃಹದೊಳಗೆ<br>ವಾರಿಜನಾಭನ ಬೆಳಕು ತುಂಬಿತು ॥68॥ |
| ಪಟ್ಟಣದ ಬೆಳಕು ಕಂಡು ದುಷ್ಟ ಕಂಗೆಟ್ಟು ಅಂಜಿ<br>ಮೃತ್ಯು ಬಂದಿತು ಸಂದೇಹವಿಲ್ಲವು ॥69॥ |
| ದೇವಕಿಯ ಗೃಹದೊಳಗೆ ದೇವ ಶ್ರೀಹರಿಯು ಜನಿಸಿ<br>ಆಗ ಅಜನು ಬಂದು ತುತಿಯ ಮಾಡಿ ಹೋದನು ॥70॥ |
| ದೇವಾದಿದೇವನೇ ವೇದಪಾಲಕನೇ<br>ಮಾವಮರ್ದನನೆಂದು ಬ್ರಹ್ಮ ತುತಿಸಿದ ॥71॥ |
| ಅಸುರ ಸಂಹಾರ ನೀನೆ ಶಿಶುಪಾಲ ವೈರಿ ನೀನೆ<br>ಕಂಸ ಮರ್ದನನೆಂದು ಬ್ರಹ್ಮ ತುತಿಸಿದ ॥72॥ |
| ಶಂಖ ಚಕ್ರ ಗದಾ ಪದ್ಮ ಅಂಕಿತ ಪೀತಾಂಬರ ಉಟ್ಟ<br>ಪಂಕಜಾಕ್ಷನ ಕಂಡು ಅವರು ಶಂಕಿಸಿದರು ॥73॥ |
| ಪೀತಾಂಬರ ಉಟ್ಟುಕೊಂಡು ಲಕ್ಷ್ಮೀದೇವಿಯರು ಸಹಿತ<br>ಶಂಖ ಚಕ್ರ ಚತುರ್ಭುಜದಲವತರಿಸಿದ ॥74॥ |

| |
|---|
| ಶಂಖ ಚಕ್ರ ಗದಾ ಪದುಮ ಮುಕುಟ ಕೌಸ್ತುಭಹಾರ<br>ಶ್ರೀವತ್ಸ ಕುಂಡಲವು ನೊಸಲ ತಿಲಕವು ‖75‖ |
| ಉಟ್ಟ ಪೊಂಬಟ್ಟೆಯು ಹೊದ್ದ ಪೀತಾಂಬರವು<br>ಹೊಳೆಯೆ  ಕತ್ತಲೆಗಳೆಲ್ಲ ಹರಿದವಾಗಲೇ ‖76‖ |
| ಹೃದಯದಿ ತುಲಸಿಯ ಸರ ವೈಜಯಂತಿ ಮಾಲೆಗಳು<br>ಅಸುರ ಮರ್ದನನತಿ ಮುದ್ದು ಮುಖವ ಕಂಡರು ‖77‖ |
| ಎಸಳು ಕಂಗಳು ತುದಿನೋಟದ ಕರುಣ ರಸವು<br>ಸುರಿಯೆ ಹಲವು ಕುರುಳು ಚೆಲುವ ಮುದ್ದು ಕೃಷ್ಣ ಜನಿಸಿದ ‖78‖ |
| ಚತುರ್ಭುಜದಿಂದ ವ್ಯಕ್ತನಾದ ಶಂಖ ಚಕ್ರ ಗದಾ ಧರಿಸಿ<br>ಪ್ರಾಕೃತಭಾವನಾಗಿ ಮುಂದೆ ಬಂದು ನಿಂತನು ‖79‖ |
| ನಿಂತಿರುವ ಹರಿಯ ಕಂಡು ಅಂಜಿ ದೇವಕಿದೇವಿ<br>ಬಂದು ವಸುದೇವನ ಅಪ್ಪಿಕೊಂಡಳು ‖80‖ |
| ಅಂಜಬೇಡ ತಾಯೆ ಎಂದು ರಂಗ ಅಭಯವನ್ನು ಕೊಟ್ಟ<br>ಹಿಂದಿನಾ ತಪಕೆ ಮೆಚ್ಚಿ ಬಂದೆನೆಂದನು ‖81‖ |
| ಹೆದರಬೇಡ ತಾಯೆ ಎಂದು ಹರಿಯು ಅಭಯವನ್ನು ಕೊಟ್ಟ<br>ಹಲವು ಕಾಲದ ತಪಕೆ ಮೆಚ್ಚಿ ಬಂದೆನೆಂದನು ‖82‖ |
| ಹಿಂದಕೆ  ವರವನಿತ್ತು ಬಂದೆ ನಿನ್ನ ಗರ್ಭದಲ್ಲಿ<br>ನಂದಗೋಪ ಗೊಪಿಯರರ್ತಿ ಸಲಿಸ ಬಂದೆನು ‖83‖ |
| ಅದ್ಭುತವಾದ ಶಿಶುವ ಕಂಡು ಆದಿಪುರುಷನೆಂದು<br>ಮೈ ಉಬ್ಬಿ ವಸುದೇವ ಸ್ತುತಿಯ ಮಾಡಿದ ‖84‖ |
| ಕೇಶವ ನಾರಾಯಣ ಮಾಧವ ಗೋವಿಂದ<br>ವಾಸುದೇವ ಕರುಣಿಸೆಂದು ಸ್ತುತಿಸುತಿದ್ದನು ‖85‖ |
| ಸ್ತುತಿಗಳೇ ಬಹಳ ಬೇಡ ಕಂಸನ ಭಯವು ನಿಮಗೆ<br>ಶಿಶುವಾಗಿ ನಿಮ್ಮನು ಸಲುಹುವೆನೆಂದ ‖86‖ |
| ಮಗುವಾಗಿ ಮೊರದೊಳಗೆ ಮಲಗಿ ನಿಮ್ಮ ಸಲುಹುವೆ<br>ಬಲರಾಮನ ಕೂಡೆ ಹೋಗಿ ಬೆಳೆವೆನೆಂದನು ‖87‖ |
| ಪೃಶ್ನಿಜನ್ಮದಲ್ಲಿ ನಿಮ್ಮ ಉದರದಲ್ಲಿ ಪುಟ್ಟಿದೆ<br>ಅದಿತಿ ಕಾಶ್ಯಪರಲ್ಲಿ ವಾಮನನಾಗಿ ಪುಟ್ಟಿದೆ ‖88‖ |
| ಮೂರು ಜನ್ಮದಲ್ಲಿ ನಿಮ್ಮ ಉದರದಲ್ಲಿ ಪುಟ್ಟಿದೆ<br>ಮುಕ್ತಿಗೆ ಯೋಗ್ಯಳಾದೆ ದೇವಕಿ ಎಂದನು ‖89‖ |

| |
|---|
| ಮೂರು ಜನ್ಮದಲ್ಲಿ ತಪಸು ಮಾಡಿದೆಲ್ಲ ಗಳಿಸಿತು<br>ಮುಕ್ತಿಗೆ ಐದು ದೇವಕಿ ಎಂದನು ॥90॥ |
| ಆಗ ಸೆರೆಮನೆಯೊಳಗೆ ಭಾಮೆ ದೇವಕಿದೇವಿ<br>ಸೋದರಾಗೆ ಅಂಜಿ ಮಾತನಾಡುತ್ತಿದ್ದಳು ॥91॥ |
| ಮಂದಿಯ ಒಳಗೆ ಎನ್ನ ಕಂದನೆಂದು ತಿಳಿಸಬೇಡ<br>ಒಂದು ಮಾಡಿಸೆಂದು ರಂಗಗೆ ಬೇಡಿಕೊಂಡಳು ॥92॥ |
| ಮಾತೆಯ ಸ್ತೋತ್ರವನೆ ಕೇಳಿ ದೇವ ಪ್ರೀತನಾಗಿ ನುಡಿದ<br>ಸೋದರನ ಭಯವು ನಿಮಗೆ ಬೇಡವೆಂದನು ॥93॥ |
| ಪುತ್ರ ಹುಟ್ಟಿದನೆಂದು ಅರ್ತಿಯಿಂದ ವಸುದೇವ<br>ಹತ್ತು ಸಾವಿರ ಗೋವುದಾನ ಸಂಕಲ್ಪ ಮಾಡಿದ ॥94॥ |
| ಬಾಲ ಹುಟ್ಟಿದನೆಂದು  ಹರುಷದಿಂದಲಿ ವಸುದೇವ<br>ನೂರು ಲಕ್ಷ ಗೋವುದಾನ  ಸಂಕಲ್ಪ ಮಾಡಿದ ॥95॥ |
| ವಸುದೇವನ ಸ್ತುತಿಯ ಕೇಳಿ ಅಸುರಮರ್ದನ ಕೃಷ್ಣ<br>ಶಿಶುರೂಪವ ಧರಿಸಿದನಾಕ್ಷಣದಲಿ ॥96॥ |
| ಕಾಳಿಂದಿಯ ತೀರದಲ್ಲಿ ನಂದಗೋಪನ ಪಳ್ಳಿ<br>ಮಂದಿರದೊಳಿಟ್ಟು ಹೆಣ್ಣು ಮಗಳ ತಂದುಕೋ ॥97॥ |
| ದೇವನಾಡಿದ ಮಾತ ಕೇಳಿ ವಸುದೇವನೆತ್ತಿ ನಡೆಯುತಿರಲು<br>ಬೀಗ ಮುದ್ರೆಗಳು ಸಡಿಲಿ ದ್ವಾರ ತೆರೆದುವು ॥98॥ |
| ಗಸ್ತು ಎಚ್ಚರಿತು ಕೂಗೆ ಆಗ ವಸುದೇವನು<br>ಕವಳವ ಕೊಟ್ಟು ಬೇಗ ಬೇಡಿಕೊಂಡನು ॥99॥ |
| ಹನಿಯ ಮಳೆಗೆ ಶೇಷ ತನ್ನ ಹೆಡೆಯ ಕೊಡೆಯ ಮಾಡಿದ<br>ಯಮುನೆ ಈರ್ಭಾಗವಾಗಿ ದಾರಿ ಕೊಟ್ಟಳು ॥100॥ |
| ದುರ್ಗೆ ಜನಿಸಿ ನಂದಗೋಕುಲದಿ ಇದ್ದ ಜನರಿಗೆಲ್ಲ<br>ನಿದ್ರೆಯನ್ನೆಸೆದಳಜ್ಞಾನ ವಶದಿ ॥101॥ |
| ವಾಸುದೇವನ ವಸುದೇವ ಯಶೋದೆ ಹಾಸಿಕೆಯಲಿಟ್ಟು<br>ಶಿಶುರೂಪು ಧರಿಸಿದಿ ಹೆಣ್ಣು ತಂದನು ॥102॥ |
| ತಿರುಗಿ ಬಂದು ವಸುದೇವ ಸೆರೆಯ ಸಂಕೋಲೆಯಲ್ಲಿರಲು<br>ತಾವಾಗಿ ಮುಚ್ಚಿದಾವೆ ತೆರೆದ ಬಾಗಿಲು ॥103॥ |
| ಹೆಣ್ಣು ತಂದು ವಸುದೇವ ಹೆಂಡತಿಯ ಕೈಲಿ ಕೊಡಲು<br>ಕಣ್ಣು ತೆರೆದು ಕಾವುಕಾವೆಂದತ್ತಿತ್ತಾಗಲೇ ॥104॥ |

| |
|---|
| ದೇವಕಿ ಪ್ರಸವವಾದಳೆಂದು ಆಗ ಎಚ್ಚರಿತು ಜನರು<br>ಬೇಗದಿಂದಲಿ ಕಂಸಗೆ ಹೋಗಿ ಹೇಳಲು ॥105॥ |
| ಹಾಸಿಕೆ ಬಿಟ್ಟೆದ್ದು ಕಂಸ ಕೇಶ ಕೆದರಿ ಹಸನ ಉಗುಳಿ<br>ಆ ಕ್ಷಣದಿ ಶಿಶುವ ಸೆಳೆದುಕೊಂಡನಾಗಲೇ ॥106॥ |
| ಚೆಣ್ಣನಲ್ಲ ಹೆಣ್ಣಿದು ಅಣ್ಣ ನಿನ್ನ ಕೊಲ್ಲುವುದೆ<br>ಕಣ್ಣಿನೊಳ್ನೋಡಿಕೊಂಬೆ ಕರುಣಿಸೆಂದಳು ॥107॥ |
| ಹೆಣ್ಣಿನಿಂದ್ಹಲವು ಉಂಟು ಹೆಣ್ಣಿನಿಂದಲೇ ಲಯವು ಉಂಟು<br>ಹೆಣ್ಣು ಸೀತೆ ಹುಟ್ಟಿ ಲಂಕೆ ಹಾಳು ಆಯಿತು ॥108॥ |
| ಸೀತೆ ಹುಟ್ಟಿದ ಕಾರಣದಿಂದ ಲಂಕೆಗೆ ಅಳಿತವಾಯ್ತು<br>ನಿನ್ನ ಕಾರಣದಿಂದ ಎನ್ನ ಕೊಂದಿತೆಂದನು ॥109॥ |
| ರೋಷದಿಂದ ಶಿಶುವ ಸೆಳೆದು ಹಾಸಿದ ಕಲ್ಲಿನ ಮೇಲೆ<br>ಬೀಸಿ ಅಪ್ಪಳಿಸಲಂಬರದಲಿದ್ದಳೂ ॥110॥ |
| ಅಂತರಿಕ್ಷದೊಳು ದುರ್ಗೆ ಆಯುಧವ ಧರಿಸಿಕೊಂಡು<br>ಅಷ್ಟ ಭುಜಗಳನ್ನು ತೋರಿ ನಿಂತಳಾಗಲೇ ॥111॥ |
| ಬೀಳಲಿದ್ದಿ ಎಲವೂ ಕಂಸ ಆಳಿಗಾರ ನಿನ್ನ ವೈರಿ<br>ಬಾಲಕೃಷ್ಣ ನಂದನ ಮನೇಲಿ ಬೆಳೆವುತಿದ್ದನೆ ॥112॥ |
| ನಿನ್ನ ಕೊಲ್ಲುವ ವೈರಿ ಅನ್ಯತ್ರ ಬೆಳೆಯುತಾನೆ<br>ಉನ್ಮತ್ತನಾಗಿ ನೀನು ಎನ್ನ ಕೊಲ್ಲುವಿಯೊ ॥113॥ |
| ದುರ್ಗೆಯಾಡಿದ ಮಾತ ಕೇಳಿ ಕಡುನೊಂದು ಮನದಲ್ಲಿ<br>ಕಂಸನಂದು ಬಿಡಿಸಿದಿ ದೇವಕಿಯ ಬಂಧನಂಗಳ ॥114॥ |
| ಮಾಯದ ಸೀತೆಯಲ್ಲಿ ಸಾಯಲಿಕ್ಕೆ ಅಂಜುವರೆ<br>ತಾಯೆ ನಮ್ಮನ್ಯಾರು ಮುಂದೆ ರಕ್ಷಿಸುವರು ॥115॥ |
| ಇತ್ತ ಗೋಕುಲದೊಳಗೆ ಎಚ್ಚರಿತು ಜನರು ಎಲ್ಲ<br>ಪುತ್ರನ ಪಡೆದಳೆ ಯಶೋದೆ ಎಂದರೂ ॥116॥ |
| ಗಂಡು ಮಗನ ಪಡೆದಳೆಂದು ನಂದಗೋಪಗ್ಹೇಳಲು<br>ಕಾಳಿಂದಿಯಲ್ಲಿ ಸ್ನಾನ ಮಾಡಿ ಬಂದನು ಅವನು ॥117॥ |
| ಹೇಳಿದ ಪರಿಚಾರಕರಿಗೆ ಬಹಳ ಉಡುಗರೆಯ ಕೊಟ್ಟು<br>ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲವಿತ್ತನು ॥118॥ |
| ಪುತ್ರ ಹುಟ್ಟಿದನೆಂಬ ಅರ್ತಿಯಿಂದಲಿ ನಂದಗೋಪ<br>ಹತ್ತು ಸಾವಿರ ಗೋವು ದಾನ ಕೊಟ್ಟನು ॥119॥ |

| |
|---|
| ಬಾಲ ಹುಟ್ಟಿದನೆಂದು ಬಹಳ ಹರುಷದಿಂದಲಿ ಗೋಪ<br>ಹತ್ತು ಸಾವಿರ ಗೋವು ದಾನ ಕೊಟ್ಟನು ॥120॥ |
| ವತ್ಸಪೈರು ಸಹಿತಲಾಗಿ ಚೊಚ್ಚು ಸಾಧು ಮಣಕವನ್ನು<br>ರತ್ನ ಹೇಮ ಚಿನ್ನದಿಂದ ಅಲಂಕರಿಸಿದ ॥121॥ |
| ಮಧು ಎಂಬ ದೈತ್ಯನ ಸದೆಬಡಿದ ಶ್ರೀಹರಿಗೆ<br>ಮಧುವ ತಂದು ವದನದಲ್ಲಿ ತೊಡೆದರಾಗಲೇ ॥122॥ |
| ಬಾಯಿಗೆ ಮಧುವನಿಟ್ಟು ನಾಭಿಯ ಛೇದಿಸಿದರು<br>ಭಾಗೀರಥಿ ಜನಕಗೆ ಮಜ್ಜನಕೆರೆದರು ॥123॥ |
| ತೊಡೆಯ ತೊಳೆದು ಮುಡಿಯ ಕಟ್ಟಿ ನಡುವೆ ಸುತ್ತಿಕ್ಕಿದರು<br>ಭರದಿ ಗೂಡಾರಗಳ ಕಟ್ಟುತಿದ್ದರು ॥124॥ |
| ಅಚ್ಯುತಾನಂತಗೆ ಹತ್ತವತಾರಗೆ ಅನಂತಗೆ<br>ಬಚ್ಚಂಬಲೆಯ ತಂದು ಬಿಸಿ ಮಾಡಿ ಎರೆದರು ॥125॥ |
| ಮತ್ಸ್ಯಗೆ ಕೂರ್ಮಗೆ ವರಾಹಗೆ ನರಹರಿಗೆ<br>ವಾಮನ ಭಾರ್ಗವಗೆ ನೀರ ಎರೆದಾರು ॥126॥ |
| ರಾಮಗೆ ಕೃಷ್ಣಗೆ ಬೌದ್ಧಗೆ ಕಲ್ಕಿಗೆ<br>ಬಚ್ಚಂಬಲೆಯ ತಂದು ಬಿಸಿ ಮಾಡಿ ಎರೆದರು ॥127॥ |
| ಶಂಬರಾರಿ ಪಿತನು ಹರಿಯು ಜನಿಸದನು ಸಕ್ಕರೆ<br>ತಂದು ಬೀರಿರೆಂದು ನಂದಗೋಪ ಹೇಳನು ॥128॥ |
| ಚೆಲುವ ಚೀನಿ ಸಕ್ಕರೆ ಭೇರಿ ಭಂಡಿಯಲಿ ತುಂಬಿ<br>ಬೀರಿದರು ಯಮುನೆ ಗೋಕುಲದ ಕೇರಿಗೆ ॥129॥ |
| ಪುತ್ರ ಹುಟ್ಟಿದನೆಂದು ಅರ್ತಿಯಿಂದ ನಂದಗೋಪಗೆ<br>ಮುತ್ತಿನಾರತಿ ಎತ್ತಿದರೆ ಮುತ್ತೈದೆಯರು ॥130॥ |
| ಗೋಕುಲದ ನಾರಿಯರು ಓಕುಳಿಯನಾಡಿದರು<br>ಅನೇಕ ಹಾಲು ಮೊಸರು ಬೆಣ್ಣೆ ಹೈನಗಳಿಂದ ॥131॥ |
| ಜಾತ ಶ್ರೀಹರಿಗೆ ಗೋಪ ಜಾತಕರ್ಮವನೆ ಮಾಡಿ<br>ಅನೇಕ ಭೂಷಣಂಗಳ ದ್ವಿಜರಿಗಿತ್ತನು ॥132॥ |
| ಹರುಷದಿಂದ ನಂದಗೋಪ ಕರೆಸಿದ ಜೋಯಿಸರ ಬೇಗ<br>ತರಿಸಿ ಉಡುಗಿರೆ ಕೊಟ್ಟು ಜಾತಕ ಬರೆಸು ನೀನೆಂದ ॥133॥ |
| ಜ್ಯೋತಿಶ್ಯಾಸ್ತ್ರಿಗಳು ಬಂದು ಜಾತಕವನು ಹೇಳಿದರು<br>ಅನೇಕ ಸ್ತ್ರೀಯರಿಗೆ ಪತಿಯಾಗುವನೀತನು ॥134॥ |

ಹುಟ್ಟಿದ ವೇಳ್ಯದಿ ಬಹು ದುಷ್ಟರ ಸಂಹರಿಸುವ

ಸೃಷ್ಟಿ ಪಾಲಿಸುವಂಥ ದಿಟ್ಟನೀತನು ॥135॥

ದಶರಾತ್ರಿಯೊಳಗೊಬ್ಬ ಳಸುರೆಯಾ ಸಂಹರಿಸುವ

ಕೆಲ ಶೂರರರ್ತಿಯಲಿ ಕೊಲುವ ಅಸುರರ ॥136॥

ಅತ್ತೆಯಾ ಮಕ್ಕಳಿಗತ್ಯಂತ ಪ್ರಿಯನಾಗುವ

ಪಾರ್ಥನ ರಥಕೆ ಸಾರಥಿಯನಾಗುವ ॥137॥

ರೋಹಿಣಿ ನಕ್ಷತ್ರದಲಿ ಜನನವಾದ ಕಾರಣದಿ

ಸೋದರಮಾವಗೆ ಗಂಡಾಂತರ ಸಂದೇಹವಿಲ್ಲವು ॥138॥

ಜಾತಕವ ಕೇಳಿದ ನಂಗೋಪ ಹರುಷದಿಂದ

ಪಟ್ಟಾವಳಿಯ ಉಡುಗಿರೆಯ ಕೊಟ್ಟು ಕಳುಹಿದ ॥139॥

ರಂಗನುದಿಸಿ ಕೊಂಗೊಳಿಸೆ ಹಿಂಗಿತು ಪಾಪಂಗಳೆಲ್ಲ

ತಿಂಗಳುದಿಸಿದಂತೆ ನಮ್ಮ ಜನ್ಮ ಸಫಲವಾಯಿತು ॥140॥

ರಾಮಗೆ ಜಾತಕವ ಹೇಳಿ ಹೋದರು ಜೋಯಿಸರು

ಕಾಮಿತವಾಯ್ತು ಜನ್ಮ ಸಫಲವೆಂದರು ॥141॥

ಮೂರು ದಿನದ ಕೊಯ್ಲುಗಳ ನೋಡಬೇಕೆಂದೆನುತ

ಬೀರಿದರು ಯಮುನೆ ಗೋಕುಲದ ಕೇರಿಲಿ ॥142॥

ಕೇರಿಯ ಮುತ್ತೈದೆಯರು ಬಾಗಿಲ ತೆಗೆದುಕೊಂಡು

ದೇವರ ಕೊಯ್ಲು ನೋಡಬಂದರು ಅಂದು ॥143॥

ಶಶಿಮುಖಿಯರೆಲ್ಲರು ಶ್ರೀಕೃಷ್ಣನ ಕೊಯ್ಲು ಎಂದು

ಹೊಸ ಮುತ್ತಿನಾಭರಣವಿಟ್ಟು ಮುಂಜುಡಿಗೆಯುಟ್ಟರು ॥144॥

ಕುಸುರು ಕಡೆಗೋಲು ಬೇವು ಯಶೋದೆ ರೋಹಿಣಿ ಕೈಯ

ಶಶಿಮುಖಿಯರು ಕೊಯ್ಲುಗಳ ಪೂಜಿಸಿದರು ॥145॥

ಗೆದ್ದು ವಿಳ್ಯವನೆ ಕೊಂಡು ಪದ್ಮನಾಭ ಹರಿಯು ಎನಲು

ಎದ್ದು ಸ್ತುತಿಯ ಮಾಡಿ ಕರವ ಮುಗಿದು ನಿಂತರು ॥146॥

ಎಂಟು ದಿನಗಳಾದುವು ಚಿಂತಿಸಿ ಅವನ ಯಂತ್ರದಿಂದ

ಕೊಲುವ ಹದನ ಎನಗೆ ತಿಳಿಯದೆಂದನು ॥147॥

ಬೇಗದಿಂದಲಿ ತನ್ನ ಮಂತ್ರಿಗಳ ಕರೆಕಳುಹಿ

ಆಲೋಚನೆಯ ಮಾಡಿ ಹೇಳಿರೆಂದನು ॥148॥

ಆತನ ಮಂತ್ರಿಗಳು ಪೂತನಿಯ ಕರೆಯ ಕಳುಹಿ

ದಶರಾತ್ರಿಯೊಳಗೆ ಶಿಶುವ ಕೊಲ್ಲು ಎಂದರು ॥149॥

| |
|---|
| ಅಸುರೆ ಪೂತನಿಯು ತಾನು ಆತ್ಮದಲಿ ವಿಷವ ಧರಸಿ<br>ಶಿಶುಗಳಾರಿಸುತ್ತ ಗೋಕುಲಕೆ ಬಂದಳು ‖150‖ |
| ಸಾರಾವಳಿಯನುಟ್ಟು ಸರದ ಮುತ್ತುಗಳ ತೊಟ್ಟು<br>ಪುತ್ರರಸುತ್ತ ಗೋಕುಲಕೆ ಅಸುರೆ ಬಂದಳು ‖151‖ |
| ಯಶೋದೆ ಕೈಯಲೆತ್ತುತಿದ್ದ ಶಿಶುವ ಸೆಳೆದುಕೊಂಡು<br>ವಿಷದ ಮೊಲೆಯ ಕೊಟ್ಟಳೆ ಅಸುರವೈರಿಗೆ ‖152‖ |
| ಅಸುರಾರಿ ಪೂತನಿಯ ಅಸು ಸಹಿತಲೆ ಹೀರೆ<br>ವಸುಧೆಯೊಳಗೆ ಬಿದ್ದಳೆ ಅಸುರ ರೂಪಿಲಿ ‖153‖ |
| ಅಸುರ ರೂಪವನೆ ಕಂಡು ಅಂಜಿ ಕಂಗೆಟ್ಟು ಜನರು<br>ಶಿಶುವು ಬದುಕಿದ್ದುದು ಆಶ್ಚರ್ಯವೆಂದರು ‖154‖ |
| ಪೂತನಿಯ ವಿಷವನುಂಡ ಭೂತನಾಥಯ್ಯಗೆ<br>ಭೀತಿಪಟ್ಟನೆಂದು ವಿಭೂತಿ ಇಟ್ಟರು ‖155‖ |
| ಅಂದ ಮಾತ ಕೇಳಿ ಬೇಗ ಬಂದನಾಗ ನಂದಗೋಪ<br>ಬಂದು ಕೋರೆದಾಡೆಯ ಅಸುರೆಯ ಕಂಡನವನು ‖156‖ |
| ವಸುದೇವನ ಮಾತು ಹುಸಿಯಾದುದಿಲ್ಲವು<br>ತ್ರಿಕಾಲ ಜ್ಞಾನಿಯೆ ತಿಳಿದು ಹೇಳಿದ ‖157‖ |
| ಗೋಮಯ ಪಂಚಗವ್ಯದಿಂದ ಬಾಲಕಗೆ ರಕ್ಷೆ ಕಟ್ಟಿ<br>ಗೋಧೂಳಿ ಅಭಿಷೇಕವರೆರೆದರು ‖158‖ |
| ಅಂದು ಕಂಸಗೆ ಕಪ್ಪವ ನಂದಗೋಪ ಸಲಿಸುತಿರಲು<br>ಬಂದು ಶೂರರಾಯನ ಸುತನು ಕಂಡನು ‖159‖ |
| ಗೋಕುಲದೊಳಗುತ್ಪಾತವನೇಕವಾಗಿ ತೋರುತಿವೆ<br>ಈ ಕ್ಷಣದಿಂದಿಲ್ಲಿರದೆ ಪೋಗು ಎಂದನು ‖160‖ |
| ಪೂತನಿಯ ಸುಡುತಿರಲು ಜಾತಿ ಪರಿಮಳವೆ ಬಂತು<br>ವಾಸುದೇವನ ಸ್ತುತಿಸಲು ಸದ್ಗತಿಯಾಯಿತು ‖161‖ |
| ಕವಡೆ ಬಜ್ಜರ ದಾರಗಳ ಹೊನ್ನ ಕಂಕಣದ ನಡುವೆ<br>ಕಮಲನಾಭನ ತೋಳು ತೊಡೆಯಲೊಪ್ಪುತಿದ್ದಿತು ‖162‖ |
| ಹಂಚಿ ಕಡುಬು ಪಾಯಸ ಹೊನ್ನ ಹರಿವಾಣದ ಪೂಜೆ<br>ಕೆಂಚೆಯರು ಮಾಡಿದರು ಸಂತೋಷಗಳಿಂದ ‖163‖ |
| ಸಾರಿಸಿ ಮುತ್ತಿನ ಕಾರಣೆಗಳನ್ನೆ ರಚಿಸಿ<br>ತೋರಣವ ಕಟ್ಟಿದರೆ ಶಿಖರ ಮಕರಕೆ ‖164‖ |

| |
|---|
| ಜ್ಞಾತಿಗಳೆಲ್ಲ ದಶರಾತ್ರಿಗಳಾಗುತಿರಲು<br>ಸೂತಕಂಗಳನೆ ಕಳೆದು ಸುಖದಲಿದ್ದರು ॥165॥ |
| ಚೆನ್ನದ ಕೊಪ್ಪರಿಗೆಯೆಳಗೆ ಕನ್ನೆಯರು ನೀರು ಬೆರಸಿ<br>ಪನ್ನಂಗಶಯನಗೆ ಯಶೋದೆಗೆ ಮೊದಲೆ ಎರೆದರು ॥166॥ |
| ಹವಳದಾ ಕೊಪ್ಪರಿಗೆಯೊಳಗೆ ಹರದಿಯರು ನೀರು ಬೆರಸಿ<br>ಬಲರಾಮಗೂ ರೋಹಿಣಿಗೂ ಮುನ್ನ ಎರೆದರು ॥167॥ |
| ಹರುಷದಿಂದ ನಂದಗೋಪ ಮಂಗಳ ಸ್ನಾನವ ಮಾಡಿ<br>ಇಂದ್ರಮಾಣಿಕದ ಮಣೆಯ ಮೇಲೆ ಬಂದು ಕುಳಿತನು ॥168॥ |
| ಮಂಗಳ ಸ್ನಾನವ ಮಾಡಿ ನಂದಗೋಪ ಕುಳ್ಳಿರಲು<br>ಕಂದರವೆತ್ತಿ ಯಶೋದೆ ರೋಹಿಣಿ ಬಂದು ಕುಳಿತರು ॥169॥ |
| ಗಾರ್ಗ್ಯರೇ ಮೊದಲಾದ ಅಲ್ಲಿದ್ದ ಬ್ರಾಹ್ಮಣರ ಕರೆಸಿ<br>ಪುಣ್ಯಾಹವ ಮಾಡಿದರೆ ವಿಧ್ಯುಕ್ತದಿ ॥170॥ |
| ಮಿಸುಣಿಯ ಹರಿವಾಣದಲ್ಲಿ ಹೊಸ ಮುತ್ತು ದಾಣಿ ತುಂಬಿ<br>ಯಶೋದೆಯ ಸುತನ ನಾಮಾಂಕಿತವ ಬರೆದನು ॥171॥ |
| ಚೆನ್ನದಾ ಹರಿವಾಣದಲ್ಲಿ ಮುತ್ತು ರತ್ನ ದಾಣಿ ತುಂಬಿ<br>ರೋಹಿಣಿಯ ಸುತನ ನಾಮಾಂಕಿತವ ಬರೆದನು ॥172॥ |
| ಬಲ ಜ್ಞಾನದಿಂದ ಆದಿತ್ಯನಾದ ಕಾರಣದಿಂದ<br>ಹಲಾಯುಧಕೆ ಬಲರಾಮನೆಂದು ಕರೆದರು ॥173॥ |
| ಮೃತ್ಯು ಜ್ಞಾನ ಆನಂದ ಗುಣಪೂರ್ಣನಾದ ಕಾರಣದಿಂದ<br>ಕೃಷ್ಣನೆಂದು ಕರೆದರೆ ಸಂತುಷ್ಟ ಹರಿಯ ॥174॥ |
| ಗೋವುಗಳು ನಮ್ಮನು ರಕ್ಷಿಸುವನೀತನು<br>ಗೋವಿಂದನೆಂದರು ಅವರು ಸದಾನಂದನ ॥175॥ |
| ವಾಸುದೇವ ಜಗತಿನಲ್ಲಿ ಒಳಗೆ ಹೊರಗೆ ವ್ಯಾಪ್ತನಾದ<br>ವಾಸುದೇವನೆಂದರು ದೋಷರಹಿತನ ॥176॥ |
| ವಾಸುದೇವನ ಮಾಸನಾಮ ಜನ್ಮನಾಮ ವಿಶ್ವರೂಪ<br>ನಡೆವ ನಾಮದಿಂದ ಕೃಷ್ಣನೆಂದು ಕರೆದರು ॥177॥ |
| ನಾಮಕರಣ ಮಾಡಿದ ನಂದಗೋಪ ಹರುಷದಿಂದ<br>ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲವನಿತ್ತನು ॥178॥ |
| ಶಾಲ್ಯಾನ್ನ ಸೂಪ ಭಕ್ಷ್ಯ ಪಾಯಸ ದಧಿ ಘೃತವು<br>ಭಾಮೆಯರು ಮಾಡಿದರೆ ಸಂತೋಷಗಳಿಂದ ॥179॥ |

| |
|---|
| ಮೃಷ್ಟಾನ್ನ ಭೋಜನ ನೆಂಟರಿಗೆ ಇಷ್ಟರಿಗೆ<br>ವಿಪ್ರರಿಗೆ ಮಾಡಿಸಿ ಕೃತಕೃತ್ಯನಾದನು ‖180‖ |
| ನಂದಗೋಪ ಕೃಷ್ಣ ನಿನ್ನ ಕಂದನೆಂದು ತಿಳಿಯಬೇಡ<br>ಇಂದಿರಾಪತಿಯೆ ಅವನು ಸಂದೇಹವಿಲ್ಲವು ‖181‖ |
| ಹತ್ತೆಂಟು ವರುಷ ನೀನು ಕಷ್ಟಪಟ್ಟು ತಪವಿರಲು<br>ಮತ್ತೆ ನಿನ್ನ ಮನೆಗೆ ಪುರುಷೋತ್ತಮನೆ ಬಂದನು ‖182‖ |
| ಹನ್ನೆರಡು ವರುಷ ನೀನು ಅರ್ತಿಯಿಂದ ತಪವಿರಲು<br>ನಿನ್ನ ಬಯಕೆ ಸಲಿಸಲೆಂದು ಪನ್ನಂಗ ಬಂದನು ‖183‖ |
| ನರನೆ ಬಲರಾಮನಾದ ನಾರಾಯಣನೆ ಕೃಷ್ಣನಾದ<br>ಭೂಮಿಭಾರ ಇಳುಹಲೆಂದು ಅವತರಿಸಿದರು ‖184‖ |
| ಪನ್ನಂಗ ಬಲರಾಮ ಪರಮಾತ್ಮ ಶ್ರೀಕೃಷ್ಣ<br>ನಿನ್ನ ಪುತ್ರರೆಂಬ ಬುದ್ಧಿ ಮನದಲ್ಲಿ ಮೂಡದೆ ‖185‖ |
| ಆಚಾರ್ಯರ ಮಾತು ವಿಶ್ವಾಸದಿಂದ ತಿಳಿದು ಗೋಪ<br>ಈತನೀಗ ಮುಕ್ತಿಗೆ ಪ್ರಖ್ಯಾತನೆಂದನು ‖186‖ |
| ರಾಮಕೃಷ್ಣರಿಬ್ಬರಿಗೂ ರೋಹಿಣಿ ಯಶೋದೆಯರು<br>ಮಾಣಿಕದ ಮುತ್ತಿನಾಭರಣವಿಟ್ಟರು ‖187‖ |
| ಖಳಜನರ ತುಳಿದು ಸಂಹರಿಸುವ ಪಾದಗಳಿಗೆ<br>ಕಿರುಗೆಜ್ಜೆ ಕಾಲಪೆಂಡ್ಯವನಿಟ್ಟರು ‖188‖ |
| ಸರ್ಪನ ಹೆಡೆಯ ಮೇಲೆ ನಾಟ್ಯವಾಡಿದ ಹರಿಗೆ<br>ನೂಪುರವನಿಟ್ಟರೆ ಜಾತಿರತುನದ ‖189‖ |
| ಜಾನೂರು ಜಂಘೆಯಲ್ಲಿ ಮೇಲೆ ಕಟಿ ಮಧ್ಯದಲ್ಲಿ<br>ಮಾಣಿಕದ ಮಣಿಯನುಡುದಾರವಿಟ್ಟರು ‖190‖ |
| ಉಡಿಗೆ ಗಂಟೆ ಕಿರುಗೆಜ್ಜೆ ಜಡಿವ ಕಾಂಚಿದಾಮ<br>ಬಡನಡುವಿಗಿಟ್ಟರು ಮೃಡನ ಪ್ರಿಯೆಗೆ ‖191‖ |
| ಮಲಕು ರತ್ನ ಮಾಣಿಕದ ಹರಳು ಕೆಂಪು ಕೆತ್ತಿಸಿದ<br>ಹಂಸ ಮಾಟದರಳೋಲೆ ಶ್ರೀಹರಿಗೆ ಇಟ್ಟರು ‖192‖ |
| ಆರು ಮುತ್ತಿನ ಬಾವಲಿ ಆಣಿಮುತ್ತಿನ ಚೌಕುಳಿ<br>ರಾಮನ ಕಿವಿಗೆ ಜರಿವ ಕುಂಡಲವನಿಟ್ಟರು ‖193‖ |
| ಎಂಟು ಮುತ್ತಿನ ಬಾವಲಿ ಎಂಟು ಮುತ್ತಿನ ಚೌಕುಳಿ<br>ಕೃಷ್ಣನ ಕಿವಿಗೆ ಜರಿವ ಕುಂಡಲವನಿಟ್ಟರು ‖194‖ |

| |
|---|
| ಬಾಲಕಿಯರೆಲ್ಲರು ಮೋಹಿಸಬೇಕೆನುತ<br>ಮೂಗುತಿಯನಿಟ್ಟರು ಮುದ್ದು ಕೃಷ್ಣಗೆ ॥195॥ |
| ಕುಸುಮನಾಭಗೆ ಬಾಲಕಿಯರು ಹಸುರಂಗಿಯ ತೊಡಿಸಿದರು<br>ಬಲರಾಮಗೆ ತೊಡಿಸಿದರು ಕರಿಯ ಅಂಗಿಯ ॥196॥ |
| ಮಿತ್ರೆಯರು ರಾಮಕೃಷ್ಣರಿಗೆ ತೊಟ್ಟಿಲಿಕ್ಕಬೇಕೆನುತ<br>ಎಚ್ಚರಿಸಿದರೆ ಬೇಗ ಅಂದು ವಿಶ್ವಕರ್ಮನ ॥197॥ |
| ಎಂದಿನ ಪುಣ್ಯವೋ ಎಂದಿನ ಸುಕೃತವೋ<br>ಗೋವಿಂದನ ಸೇವೆ ತನಗೆ ಬಂದಿತೆಂದನು ॥198॥ |
| ದೇವರ ಸೇವೆ ಎಂದು ಬಹಳ ಸಂತೋಷದಿಂದ<br>ವೀಳ್ಯವ ಪಿಡಿದನು ಅಂದು ವಿಶ್ವಕರ್ಮನು ॥199॥ |
| ಪ್ರೇಮದ ಪ್ರತಿಮೆಯಿಂದ ಚೀನಿ ಕೆಲಸದಿಂದ<br>ಮಾಣಿಕದ ಮಿಳಿತಾದ ಹಲಿಗೆಗಳಿಂದ ॥200॥ |
| ವಿಶ್ವಕರ್ಮ ತಾನು ಕಲಿತ ಹಸ್ತಕೆಲಸವನೆಲ್ಲ ಹಾಕಿ<br>ವಿಚಿತ್ರದಿಂದ ತೊಟ್ಟಿಲ ರಚಿಸಿದನಾಗ ॥201॥ |
| ತಂದು ತೊಟ್ಟಿಲ ವಿಶ್ವಕರ್ಮನಿಂದು ಕರಗಳ ಮುಗಿದು<br>ನಂದಗೋಪ ಯಶೋದೆಯ ಮುಂದೆ ಇಳುಹಿದ ॥202॥ |
| ತೊಟ್ಟಿಲ ನೋಡಿ ಗೋಪ ಮೆಚ್ಚಿ ಸಂತೋಷದಿಂದ<br>ಪಟ್ಟಾವಳಿ ಉಡುಗಿರೆಯ ಕೊಟ್ಟು ಕಳುಹಿದ ॥203॥ |
| ಆರು ಖಂಡುಗದ ಅಕ್ಕಿ ನೂರು ಖಂಡುಗದ ಬೇಳೆ<br>ಅರ್ತಿಯಿಂದ ಹಾಕಿದಾರೆ ವಿಶ್ವಕರ್ಮಗೆ ॥204॥ |
| ಮುತ್ತಿನ ತೊಟ್ಟಿಲಿಗೆ ರತ್ನದ ಕೀಲು ಬಿಗಿದು<br>ಮಿತ್ರೆಯರು ತೊಟ್ಟಿಲ ಕಟ್ಟುತ್ತಿದ್ದರು ॥205॥ |
| ತೊಟ್ಟಿಲ ಮನೆಗೆ ಮೇಲ್ಗಟ್ಟುಗಳ ಕಟ್ಟಿದರು<br>ಮುತ್ತಿನ ಚಂಡು ತಂದು ನಡುವೆ ಕಟ್ಟಲು ॥206॥ |
| ಕೃಷ್ಣರ ತೊಟ್ಟಿಲಿಗೆ ಪಟ್ಟೆ ಮುಂಜುಡಿಗೆ ಹಾಸಿ<br>ಮುತ್ತಿನ ಲೋಡು ತಲೆಗಿಂಬನಿಟ್ಟರು ॥207॥ |
| ರಾಮರ ತೊಟ್ಟಿಲಿಗೆ ಶಾಲು ಮೃದುಡುಗೆ ಹಾಸಿ<br>ನೀಲದ ಲೋಡು ತಲೆಗಿಂಬನಿಟ್ಟರು ॥208॥ |
| ದೀಪಗಳನೆ ಹಚ್ಚಿ ಧೂಪದ ಹೊಗೆಯನ್ನಾಕಿ<br>ನಾಕು ಕಡೆ ಸಿಕ್ಕಿಸಿದರೆ ನಂದನಂಬುವ ॥209॥ |

| |
|---|
| ಮಂದರೋದ್ಧರ ಹರಿಯ ಇಂದಿರೇಶನ ತೊಟ್ಟಿಲೆಂದು<br>ನಂದಗೋಪಿ ಹೇಳಿದಳೆ ಬಂಧುಗಳಿಗೆ ॥210॥ |
| ಕೇರಿಯ ಮುತ್ತೈದೆಯರು ಬಾಗಿಲ ತೆಗೆದುಕೊಂಡು<br>ದೇವರ ತೊಟ್ಟಿಲೆಂದು ನೋಡಬಂದರು ॥211॥ |
| ನಂದಗೋಪನ ರಾಣಿಯರು ಮಿಂದು ಅರಿಸಿನ ಪೂಸಿ<br>ಚಂದ್ರಗಾವಿಯನುಟ್ಟು ರವಕೆ ತೊಟ್ಟರೂ ॥212॥ |
| ಕೇಶಗಳನ್ಹಿಕ್ಕಿ ಕಟ್ಟಿ ಸೂಸುವ ಮೊಗ್ಗೆಗಳಿಂದ<br>ಜಾತಿ ಮಲ್ಲಿಗೆ ಸಂಪಿಗೆಯ ಮುಡಿದರೂ ॥213॥ |
| ಕಂಗಳಿಗಂಜನ ಹಚ್ಚಿ ಕಸ್ತೂರಿಯ ತಿದ್ದಿದಾರು<br>ಮುತ್ತಿನ ಬೊಟ್ಟು ಮೂಗುತಿಯನಿಟ್ಟರೂ ॥214॥ |
| ಚಿಂತಾಕು ಮಲಕು ಪೆಂಡ್ಯವೆಂಬ ರತ್ನದ ಸರವು<br>ಕೆಂಪಿನ ಹವಳದ ಸರವನಿಟ್ಟರೂ ॥215॥ |
| ಹಾರ ಸರಗಳನೆ ಹಾಕಿ ತೋಳು ಬೊಟ್ಟುಗಳನೆ ಕಟ್ಟಿ<br>ಧೋರವಾದ ಮುಂಗೈಯ ಮುರಾರಿಗಿಟ್ಟರು ॥216॥ |
| ಕಡಗ ಕಂಕಣಗಳು ರವೆಯ ಉಂಗುರುಗಳು<br>ನಡವಿನೊಡ್ಯಾಣ ಜಲಕಮಲವಿಟ್ಟರು ॥217॥ |
| ಅಂದುಗೆ ಪಾಯ್ಬೊಟ್ಟು ಕಾಲುಂಗುರ ವೀರಮುದ್ರಿಕೆ<br>ಚೆಂದವಾದ ಮಿಂಚು ಮಿಂಟಿಗೆಯನಿಟ್ಟರು ॥218॥ |
| ಕೃಷ್ಣರಾಮರ ತೊಟ್ಟಿಲಿಗೆ ರೋಹಿಣಿ ಯಶೋದೆಯರು<br>ಮುತ್ತಿನಾಭರಣವಿಟ್ಟು ಶೃಂಗಾರವಾದರು ॥219॥ |
| ರಾಮಕೃಷ್ಣರನೆತ್ತಿಕೊಂಡು ರೋಹಿಣಿ ಯಶೋದೆಯರು<br>ನೀರ ಹೊಳೆಯ ಮೆಟ್ಟಿ ಪೂಜೆ ಮಾಡುತ್ತಿದ್ದರು ॥220॥ |
| ಅಂಗಳವ ಸಾರಿಸಿ ರಂಗವಿಲ್ಲಿಯನಿಕ್ಕಿ<br>ರಂಭೆಯರು ಕೊಡನ ಪೂಜೆ ಮಾಡುತ್ತಿದ್ದರು ॥221॥ |
| ಹೊಸ್ತಿಲ ಸಾರಿಸಿ ಸುತ್ತ ಕಾಲೆಳೆಯ ತೆಗೆದು<br>ಮಿತ್ರೆಯರು ಕೊಡನ ಪೂಜೆ ಮಾಡುತ್ತಿದ್ದರು ॥222॥ |
| ನಾರಿಯರೆಲ್ಲರು ಲಾಲಿಯ ಪೂಜೆ ಮಾಡಿ<br>ಮೀರದಿರು ಮೂರು ವರುಷಕೆಂದು ನುಡಿದರು ॥223॥ |
| ಮಿತ್ರೆಯರೆಲ್ಲರು ತೊಟ್ಟಿಲ ಪೂಜೆ ಮಾಡಿ<br>ತಪ್ಪದಿರು ಮೂರು ವರುಷಕೆಂದು ನುಡಿದರು ॥224॥ |

| |
|---|
| ಪಟ್ಟಾವಳಿಯ ಸೀರೆ ಬಟ್ಟ ಮುತ್ತಿನ ಕುಪ್ಪಸವ<br>ಕೃಷ್ಣನ ತಾಯಿಗುಡುಗಿರೆಯ ಕೊಟ್ಟರು ॥225॥ |
| ಸಾರಾವಳಿಯ ಸೀರೆ ಸರದ ಮುತ್ತಿನ ಕುಪ್ಪಸವ<br>ಬಲರಾಮನ ತಾಯಿಗುಡುಗಿರೆಯ ಕೊಟ್ಟರು ॥226॥ |
| ಅಂಗನೆಯರೆಲ್ಲರು ಅಂಗಿ ಟೋಪಿಯ ತಂದು<br>ಬಲರಾಮನ ತಾಯಿಗುಡಿಲ ತುಂಬುತ್ತಿದ್ದರು ॥227॥ |
| ಸಾರಾವಳಿಯ ಅಂಗಿ ಸರದ ಮುತ್ತಿನ ಟೋಪಿ<br>ಕೃಷ್ಣರಾಯನ ತಾಯಿಗುಡಿಲ ತಂಬುತ್ತಿದ್ದರು ॥228॥ |
| ಮಿತ್ರೆಯರಿಬ್ಬರು ಮುತ್ತಿನಾರತಿ ಪಿಡಿದು<br>ಕೃಷ್ಣರಾಮರಿಗೆ ಎತ್ತಿ ಬೆಳಗುತ್ತಿದ್ದರು ॥229॥ |
| ನಾರಿಯರಿಬ್ಬರು ನೀಲದಾರತಿಯ ಪಿಡಿದು<br>ಕೃಷ್ಣರಾಮರಿಗೆ ಎತ್ತಿ ಬೆಳಗುತ್ತಿದ್ದರು ॥230॥ |
| ಕಂದನ ಕಾಲ ದಿಶೆಯಲಿ ಕಡಲೆ ಗುಗ್ಗರಿ ಇಟ್ಟು<br>ಅಂಗನೆಯರು ತಂದು ತೊಟ್ಟಿಲೊಳಗೆ ಇಟ್ಟರು ॥231॥ |
| ಅಡಿಗೆಯ ಮನೆಯೊಳಗೆ ಅರೆವ ಗುಂಡಪ್ಪನ<br>ಹರದಿಯರು ತಂದು ತೊಟ್ಟಿಲೊಳಗೆ ಇಟ್ಟರು ॥232॥ |
| ಕೇಶವಯ್ಯನ ಕೊಳ್ಳಿ ಮಾಧವಯ್ಯನ ತನ್ನಿರೆಂದು<br>ಕಾಂತೆಯರು ಕಂದನ ಆಡಿಸಿದರು ॥233॥ |
| ಹೃಷಿಕೇಶನ ಕೊಳ್ಳಿ ಪದ್ಮನಾಭನ ತನ್ನಿರಂದು<br>ಪದ್ಮಿನಿಯರು ಕಂದನ ಆಡಿಸಿದರು ॥234॥ |
| ಪ್ರಳಯ ಕಾಲದ ಜಲಧಿಯಲಿ ಆಲದೆಲೆಯಲಿ ಮಲಗಿದ್ದ<br>ಕಮಲನಾಭನ ತಂದು ತೊಟ್ಟಿಲೊಳಗೆ ಇಟ್ಟರು ॥235॥ |
| ಕ್ಷೀರಸಾಗರದಲ್ಲಿ ಲಕ್ಷ್ಮೀಲೋಲನಾಗಿದ್ದ<br>ಶ್ರೀ ಹರಿಯ ತಂದು ತೊಟ್ಟಿಲೊಳಗೆ ಇಟ್ಟರು ॥236॥ |
| ಮುದ್ದು ರಾಮಕೃಷ್ಣರ ವೃದ್ಧ ಮತ್ತೈದೆಯರು<br>ವಿಧ್ಯುಕ್ತದಿಂದ ತೊಟ್ಟಿಲೊಳಗೆ ಇಟ್ಟರು ॥237॥ |
| ಶಶಿಮುಖಿಯರೆಲ್ಲರು ಮುಸಲಾಯುಧನ ತೊಟ್ಟಿಲೆಂದು<br>ಕುಶಲ ರಾಗಂಗಳಿಂದ ಪಾಡುತ್ತಿದ್ದರು ॥238॥ |
| ರೋಹಿಣಿ ಯಶೋದೆಯರು ಮಿಸುಣಿ ಸರಪಣಿಯ ಪಿಡಿದು<br>ದಶಾವತಾರಗಳಿಂದ ಪಾಡುತ್ತಿದ್ದರು ॥239॥ |

ಮತ್ಸ್ಯನಾಗಿ ಮುನ್ನ ಬಂದಿ ಕುಕ್ಷಿಚೋರನ ಕೊಂದಿ
ಪುತ್ರನಾದ ಅಜಗೆ ವೇದವಿತ್ತ ಹರಿಗೆ ಜೋ ||240||

ಸುರರು ಅಸುರರು ಕೂಡಿ ಶರಧಿಯ ಮಥನ ಮಾಡೆ
ಇಳಿಬೆಟ್ಟ ಬೆನ್ನಿಲೆತ್ತಿದ ಕೂರ್ಮರೂಪ ಜೋ ||241||

ಸುರುಳಿಯಾಗಿ ಸುತ್ತಿದ ಭೂಮಿ ಕೋರೆದಾಡೆಯಿಂದ ತಂದಿ
ಹರಿ ಹಿರಣ್ಯಾಕ್ಷನ ಕೊಂದಿ ವರಾಹರೂಪಗೆ ಜೋ ||242||

ಮಗನ ಮುಂದೆ ಹಿರಣ್ಯಕನ ಕರುಳ ಬಗದು ಉಗುರಿನಿಂದ
ನರಮೃಗರೂಪನಾದ ನರಹರಿಯೆ ಜೋ ||243||

ಬಲಿಯ ಪಾತಾಳಕ್ಕೆ ಮೆಟ್ಟಿ ನೆಲನ ಈರಡಿಯ ಮಾಡಿದಿ
ಚೆಲುವ ವಾಮನನೆ ತ್ರಿವಿಕ್ರಮನೆ ಜೋ ||244||

ಎರಡು ಹತ್ತೊಂದು ಬಾರಿ ವೀರ ಕ್ಷತ್ರಿಯರ ಕೊಂದಿ
ಧಾರುಣಿಯ ವಿಪ್ರರಿಗಿತ್ತ ಪರಶುರಾಮ ಜೋ ||245||

ವಾರಿಧಿ ಕಟ್ಟಿ ದಶಗ್ರೀವನ ಶಿರವ ತರಿದಿ
ಜಾನಕಿಯತಂದಿ ದಶರಥ ರಾಮನೆ ಜೋ ||246||

ನಂದಗೋಕುಲದಲ್ಲಿ ಪೂರ್ಣಚಂದ್ರನಾಗಿ ಜನಿಸಿದಿ
ಕಂದನಾಗಿ ಪೂತನಿಯ ಕೊಂದಿ ಕೃಷ್ಣ ಜೋ ||247||

ಮುದ್ದು ಸ್ತ್ರೀಯರ ವ್ರತವನು ಬುದ್ಧರೂಪದಿಂದ ಅಳಿದಿ
ವೃದ್ಧ ವೇಷದಿಂದ ತ್ರಿಪುರರ ಗೆದ್ದ ಹರಿಯೆ ಜೋ ||248||

ಹಯವನೇರಿ ದಾಳಿ ಮಾಡಿ ಸುಜನರಿಗೆ ಸುಖವನಿತ್ತಿ
ಹಿಡಿದ ಕತ್ತಿಯಾಯುಧವನು ಪಡೆದ ಕಲ್ಕಿ ಜೋ ||249||

ಜಗವನೆಲ್ಲ ಬಸುರೊಳಗೆ ಅಡಗಿಸಿದ ಶ್ರೀಹರಿಯ
ಮಗುವೆಂದು ತೂಗಿದರೆ ಕಮಲನಾಭನ ||250||

ಹತ್ತವತಾರದಿಂದ ವಿಸ್ತರಿಸಿ ಹರಿಯ ಗುಣವ
ಮುಕ್ತಳಾದೆನೆಂದು ಗೋಪಿ ನಗುತ್ತಲಿದ್ದಳು ||251||

ಮುತ್ತೈದೆಯರು ಮುಂದೆ ಬಂದು ಮುತ್ತಿನ ಕದವ ಪಿಡಿದು
ಹೊಸ್ತಿಲೊಳಗೆ ಗಂಡನ್ಹೆಸರ ಹೇಳು ಎಂದರು ||252||

ಅಕ್ಕ ಕೇಳೆ ನಮ್ಮ ಬಾಣಂತಿ ನಿಲ್ಲಲಾರಳು
ಹತ್ಯಾವು ಶೀತ ಅಂಗಾಲಿಗೆಂದರು ||253||

ತಾಯಿ ಕೇಳೆ ನಮ್ಮ ಬಾಣಂತಿ ನಿಲ್ಲಲಾರಳು
ಏರ್ಯಾವು ಶೀತ ಅಂಗಾಲಿಗೆಂದರು ||254||

| |
|---|
| ನಂದಗೋಪನ ರಾಣಿಯರು ನಿಂದು ಅರಸಿನವ ಪೂಸಿ<br>ನಂದಗೋಪನ ಕುಟುಂಬವಿದಕೆ ಬಂದಿತೆಂದರು ॥255॥ |
| ಮಿತ್ರೆಯರಿಬ್ಬರು ಹೊಸ್ತಿಲ ಪಿಡಿದು ನಿಂತು<br>ಅರ್ತಿಯಿಂದ ಗಂಡನ್ಹೆಸರ ಹೇಳುತ್ತಿದ್ದರು ॥256॥ |
| ನಾರಿಯರಿಬ್ಬರು ಬಾಗಿಲ ಪಿಡಿದು ನಿಂತು<br>ಬೇಗದಿಂದ ಗಂಡನ್ಹೆಸರ ಹೇಳುತ್ತಿದ್ದರು ॥257॥ |
| ತುಂಬಿದ ಕೊಡನ ತಂದು ಕಂದನ ಕಾಲ ದಿಶೆಯಲಿಟ್ಟು<br>ಅಂಗನೆಯರು ಕದವ ನಂಬಿ ನಿಂತರು ॥258॥ |
| ಕಡಲೆ ಗುಗ್ಗರಿ ಉಪ್ಪು ರೊಟ್ಟಿ ಒಡೆದಳೀಕೆ ಬಿಳಿಯಲೆ<br>ಕಡು ಬೇಗದಿಂದ ಬಾಗಿನವ ಕೊಟ್ಟರು ॥259॥ |
| ಚಕ್ಕುಲಿ ಕರುಜೆಯಕಾಯಿ ಹಪ್ಪಳ ಸೆಂಡಿಗೆಯು<br>ಎಪ್ಪತ್ತು ಬಗೆಯ ಬಾಗಿನವ ಕೊಟ್ಟರು ॥260॥ |
| ಬಾಲಕಿಯರೆಲ್ಲರು ಬಾಗಿನಗಳ ತೆಗೆದುಕೊಂಡು<br>ಬೇಗದಿಂದ ತಮ್ಮ ಮನೆಗೆ ಪೋಗುತ್ತಿದ್ದರು ॥261॥ |
| ಕರ್ಮಬಂಧನಿಲ್ಲದವಗೆ ಜನ್ಮನಕ್ಷತ್ರವೆಂದು<br>ತನ್ನ ಬಂಧುಗಳ ಕೂಡಿ ಉತ್ಸಾಹ ಮಾಡಿದರು ॥262॥ |
| ಆಗ ಕಂಸ ಶಕಟನ ಬೇಗದಿಂದ ಕರೆಯ ಗಳುಹಿ<br>ಬಂಡಿಯರೂಪವನೆ ಧರಿಸಿ ಬಾ ಎಂದನು ॥263॥ |
| ಕೇಳಿದ ಶಕಟ ತಾನು ಬಹಳ ಕೋಪವನ್ನೆ ತಾಳಿ<br>ಬಂಡಿರೂಪವನ್ನೆ ಧರಿಸಿ ಬಂದು ನಿಂತನು ॥264॥ |
| ಮಾವ ಕಳುಹಿಸಿದ ಒಂದುಚೂರ್ಣ ಕೆಲಸದ ಬಂಡಿ<br>ರಾಯ ರಾಮ ಕೃಷ್ಣರಿಗೆ ಆಡ ಕಳುಹಿದ ॥265॥ |
| ಬಂಡಿಯ ಕೆಳಗೆ ಗೋಪಿ ಪುಂಡರೀಕಾಕ್ಷನಿಟ್ಟು<br>ಬ್ರಾಹ್ಮಣರ ಸಂತರ್ಪಣೆಯ ಮಾಡ ಹೋದಳು ॥266॥ |
| ಸ್ತನ್ಯಪಾನ ತಡೆಯಿತೆಂದು ತನ್ನ ಕೋಪದಲಿ ಬಂಡಿ<br>ಚುಮ್ಮಿವಡೆಯೆ ಹರಿಯು ಭಂಡಿ ಚೂರ್ಣವಾಯಿತು ॥267॥ |
| ಶಕಟದ ಒಳಗೆ ಒಬ್ಬ ವಿಕಟ ಅಸುರ ಕೆಳಗೆ ಬಿದ್ದ<br>ಅಕಟ ಶಿಶು ಅಂಜಿತೆಂದು ಅಪ್ಪಿಕೊಂಡಳು ॥268॥ |
| ಬ್ರಾಹ್ಮಣರ ಕೈಯಿಂದ ವೇದ ಮಂತ್ರಗಳಿಂದ<br>ಬಾಲಕಗೆ ರಕ್ಷೆಯನ್ನೆ ಮಾಡಿಸಿದಳು ॥269॥ |

| |
|---|
| ಮೂರು ತಿಂಗಳಾಗುತ್ತಿರಲು ರೋಹಿಣಿ ಯಶೋದೆಯರು<br>ನೀರ ಹೊಳೆಯ ಮೆಟ್ಟಿ ಪೂಜೆ ಮಾಡುತ್ತಿದ್ದರು ॥270॥ |
| ಕೃಷ್ಣರಾಮರಂಗಿಗಳ ರೋಹಿಣಿ ಯಶೋದೆಯರು<br>ಮುತ್ತಿನ ಕೊಡದೊಳದ್ದಿ ಒಗೆಯುತ್ತಿದ್ದರು ॥271॥ |
| ರಾಮಕೃಷ್ಣರಂಗಿಗಳ ಯಶೋದೆ ರೋಹಿಣಿಯರು<br>ನೀರ ಕೊಡದೊಳಗೆ ಅದ್ದಿ ಒಗೆಯುತ್ತಿದ್ದರು ॥272॥ |
| ಪ್ರಳಯ ಕಾಲದ ಜಲಧಿಯಲ್ಲಿ ಆಲದೆಲೆಯಲಿ ಮಲಗಿದ್ದ<br>ಕಮಲನಾಭನ ತೊಡೆಯಲಿಟ್ಟು ಮೊಲೆಯ ಕೊಟ್ಟಳು ॥273॥ |
| ಕ್ಷೀರ ಸಾಗರದಲ್ಲಿ ಲಕ್ಷ್ಮೀಲೋಲನಾಗಿದ್ದ ಹರಿಯ<br>ಕಾಲ ಮೇಲೆ ಮಲಗಿಸಿ ಹಾಲ ಎರೆದಳು ॥274॥ |
| ಮಂದಾಕಿನೀ ಜನಕಗೆ ಮೈಲಿ ಧೂಳಾಯಿತೆಂದು<br>ಒಂದು ಕೊಪ್ಪರಿಗೆ ನೀರ ತಂದು ಎರೆದಳು ॥275॥ |
| ಕಂದರ್ಪಕೋಟಿ ಲಾವಣ್ಯವನ್ನು ಜರಿವವಗೆ<br>ಚೆಂದವಡಿಸಿದೆಂದು ಗೋಪಿ ಶೃಂಗರಿಸಿದಳು ॥276॥ |
| ಬೆನ್ನ ಹಿಂದೆ ನಿಂತುಕೊಂಡು ಕಣ್ಣು ಮುಚ್ಚಿ ತಿರುಗಿ ನೋಡಿ<br>ಚೆನ್ನ ನಿನ್ನ ಮುದ್ದು ತಾರೆಂದಳೆಶೋದೆ ॥277॥ |
| ಹಾಲು ಸುರಿವ ಗಲ್ಲದಲ್ಲಿ ನೀಲದ ಸರಪಣಿಯ ತುಂಬಿ<br>ಬಾಲ ನಿನ್ನ ಜೊಲ್ಲು ಎನ್ನ ಮೇಲೆ ಸುರಿಯಿತು ॥278॥ |
| ಅಂಗಳದೊಳಗೆಲ್ಲ ಅಂಬೆಗಾಲನಿಕ್ಕುತ<br>ರಂಗ ನಿನ್ನ ತೊಂಗಾಲ ತೋರಿಸೆಂದಳು ॥279॥ |
| ಪಕ್ಷಿವಾಹನನಾಗಿ ಮುನ್ನ ಮತ್ತಗಜನ ತಾಪವಳಿದಿ<br>ಅಚ್ಯುತ ನೀ ಆನೆ ಆಡೆಂದಳೆಶೋದೆ ॥280॥ |
| ತಾರಕ ಬ್ರಹ್ಮನ ಪಡೆದ ಆದಿಮೂರ್ತಿ ನೀನು<br>ತಾರಮ್ಮಯ್ಯನಾಡೆಂದಳೆಶೋದೋ ॥281॥ |
| ಒಪ್ಪದಿಂದ ಸುರರಿಗೆ ಸುಧೆಯ ನೀಡಿದ ಕೈಯೊಳಗೆ<br>ಚಪ್ಪಳಿಕ್ಕೊ ರಂಗನೆಂದಾಡಿಸಿದಳೂ ॥282॥ |
| ಪ್ರೇಮದಿಂದ ಶ್ರೀದೇವಿಯರ ಆಲಿಂಗನೆಯ ಮಾಳ್ಪ ಕೈಲಿ<br>ತೋಳನಾಡೋ ರಂಗನೆಂದಾಡಿಸಿದಳೂ ॥283॥ |
| ಅಷ್ಟು ಹೇಳಲೆಶೋದೆ ಅಷ್ಟನೆಲ್ಲ ಆಡಿದ<br>ಕೃಷ್ಣನ ದಯವು ನಮಗೆ ಕೀರ್ತಿ ಸಲಹಲೀ ॥284॥ |

| |
|---|
| ಪುತ್ರನೆಂದು ಯಶೋದೆ ಎತ್ತಿ ತೊಡೆಯ ಮೇಲಿಡಲು<br>ಬೆಟ್ಟದಂತೆ ಜರಿಯೆ ಕೆಳಗೆ ಇಟ್ಟಳಾಗಲೆ ll285 ll |
| ಅದ್ಭುತವಾದ ಶಿಶುವ ಕಂಡು ಆದಿಪುರುಷನೆಂದು ಮೈ<br>ಉಬ್ಬಿ ಸ್ತುತಿಯ ಮಾಡೆ ಕೃಷ್ಣ ಬಲೆಯ ಬೀಸಿದ ll286 ll |
| ನಿತ್ಯತೃಪ್ತ ವಾಸುದೇವ ಹಸಿದನೆಂದನ್ನವಾ<br>ತುತ್ತು ಮಾಡಿ ಉಣಿಸಿದಳು ಮೃಷ್ಟಾನ್ನವಾ ll287 ll |
| ತುತ್ತು ದೊಡ್ಡ ಮಾಡೆ ಅಮ್ಮ ಅಷ್ಟನೆಲ್ಲ ಉಂಬೆನೆನಲು<br>ಎನ್ನಪ್ಪ ನೀ ಉಣುವಿಯಾ ಎಂದಪ್ಪಿಕೊಂಡಳು ll288 ll |
| ಹಸಿದೆನೆಂದು ಶ್ರೀಕೃಷ್ಣ ಮುಸುಕ ಪಿಡಿದು ಎಳೆಯುತಿರಲು<br>ಹಸನಾದ ತನು ಮೇವುಗಳ ಕೊಟ್ಟಳು ll289 ll |
| ತನುವ ಒಲ್ಲೆನೆಂದು ಛಲವ ಮಾಡಿ ಅಳುತಿರಲು<br>ಬಾಲ ರಮಾರೂಪನಿಗಿನ್ನೆಂತು ಮಾಡಲೀ ll290 ll |
| ಅಮ್ಮ ಹರಿದೆನೆಂಬನು ಅಮ್ಮಿಯಾ ಒಲ್ಲೆನೆಂಬ<br>ಸಮ್ಮನೆ ಹೊರ ಅಂಗಳಕೆ ತಂದಳೂ ll291 ll |
| ಪೂರ್ಣಚಂದ್ರ ಉದಿಸಿರಲು ಮೇಲೆ ಇದ್ದ ಚಂದ್ರನನ್ನು<br>ತಾರೆ ಎನ್ನ ಕೈಯಲೆಂದು ತಾಯ ಕಾಡಿದಾ ll292 ll |
| ಏನ ಹೇಳುವಿಯೊ ರಂಗ ಮೇಲೆ ಇದ್ದ ಚಂದ್ರನನ್ನು<br>ಹ್ಯಾಗೆ ತರಲಿ ಅಳವಲ್ಲ ಎಂದಳೆಶೋದೆ ll293 ll |
| ಶಂಬರಾರಿಪಿತನ ಗೋಪಿ ಅಂಬರಕ್ಕೆ ಪಿಡಿದೆತ್ತ<br>ಬಂದು ಇಳಿದ ಕರತಳದಿ ಚಂದ್ರನಾಗಲೆ ll294 ll |
| ಬಂದು ಇಳಿದ ಚಂದ್ರನ ಇಂದಿರೇಶ ನೋಡಿ ನಕ್ಕು<br>ಕನ್ನಡಿಯಂತೆ ತಾಯ್ಗೆ ತೋರಿ ಮೇಲಕ್ಕೆತ್ತಿದ ll295 ll |
| ಕರದಲ್ಲಿದ್ದ ಚಂದ್ರನ ಕನ್ನಡಿಯಂತೆ ನೋಡಿ<br>ಪುರುಷೋತ್ತಮ ಮುಗುಳು ನಗೆಯ ನಗುತಲಿದ್ದನು ll296 ll |
| ಹಸ್ತಗತನಾದ ಚಂದ್ರನ ಹಾರಿಸಿದನಂಬರಕ್ಕೆ<br>ಕೃಷ್ಣನ ನೋಡಿ ಗೋಪಿ ಬೆರಗು ಬಿದ್ದಳು ll297 ll |
| ಪಟ್ಟೆ ಮಂಚದ ಮೇಲೆ ಪರಮಾತ್ಮ ಪವಡಿಸೆಂದು<br>ಮುತ್ತಿನಾ ಲೋಡು ತಲೆದಿಂಬನಿಟ್ಟಳು ll298 ll |
| ಪಟ್ಟೆಮಂಚ ಇಳಿದು ಕೃಷ್ಣ ಹೊಕ್ಕು ಊರು ಮನೆಗಳ<br>ಅಟ್ಟುಳಿಯ ಮಾಡುವನು ಸುತ್ತ ನರೆಗಳಾ ll299 ll |

| |
|---|
| ಹೆತ್ತ ತುಪ್ಪ ಹಾಲು ಬೆಣ್ಣೆ ಮತ್ತೆ ಕೆನೆಮೊಸರ ಗಿಣ್ಣ<br>ಕೃಷ್ಣರಾಮ ಮೆಲ್ಲಿರೆಂದು ಕೈಲಿ ಕೊಟ್ಟರು ॥300॥ |
| ಕಾಲ ಅಂದುಗೆಯನಿಟ್ಟು ಕಮಲದ್ಹೂವ ಕೈಲಿ ಕೊಟ್ಟು<br>ಬಾಲ ಎನ್ನ ಕಾಡದಿರೆಂದಳೆಶೋದೆ ॥301॥ |
| ರಂಗ ಎನ್ನ ಮಾತ ಕೇಳು ಹೆಂಗಳ ಕಾಡದಿರು<br>ಇಂತೆಂದು ಬುದ್ಧಿ ಹೇಳಿ ಮಂದಿರ ಪೊಕ್ಕಳು ॥302॥ |
| ಜನನಿ ಪೋಗುತಿರಲು ಕಂಡು ಮುಗುಳು ನಗೆಯ ನಗುತ ಕೃಷ್ಣ<br>ತಿರುಗಿ ಬಾಹೆನೆಂದು ಬೀದಿ ಹೊರಗೆ ಬಂದನು ॥303॥ |
| ರನ್ನದ ತಳಿಗೆಯ ಬಿಡಿಸಿಕೊಂಡು ಚೆನ್ನ ಕೃಷ್ಣ ಓಡಿ ಹೋದ<br>ಕನ್ನೆಯರ ಕೂಡೆ ಸರಸವಾಡುತ್ತಿದ್ದನು ॥304॥ |
| ಅಂಗನೆಯರ ಮನೆಯ ಮುಂದೆ ಚೆಂದವಾದ ದ್ರಾಕ್ಷಿ ಬೀಳು<br>ಮುಂದೆ ಸೆರಗ ಪಿಡಿದು ಅವರ ಭಂಗಪಡಿಸಿದ ॥305॥ |
| ಅಂಗನೆಯರೆಲ್ಲರು ರಂಗನ್ಹಾವಳಿಗಾರನೆಂದು<br>ನಂದಗೋಪನ ರಾಣಿ ಮುಂದೆ ಬಂದು ಹೇಳಲು ॥306॥ |
| ಫುಲ್ಲನಾಭನ ಧಾಳಿಗಂಜಿಪಳ್ಳಿ ಬಿಟ್ಟು ಓಡಿ ಪೋಗಿ<br>ಗೊಲ್ಲನಿಲ್ಲದ ವೃಕ್ಷದಾ ವನವ ಸೇರುವಾ ॥307॥ |
| ಏನೆಂತ ತಾಳುವೆವು ನಾವು ಕೃಷ್ಣನ ಹಾವಳಿಯ<br>ನಂದಗೋಪನ ರಾಣಿ ಮುಂದೆ ಬಂದು ದೂರಲು ॥308॥ |
| ಬಾಲಕಿಯರೆಲ್ಲರು ದೂರು ಹೇಳ ಬಂದಿರೀ<br>ಅದೇನು ಮಾಡಿದ ಕೃಷ್ಣನೆನಗೆ ಹೇಳಿರೆಂದಳು ॥309॥ |
| ದಟ್ಟಡಿ ಇಡುವ ಬಾಲ ಬಟ್ಟಲ ತಾಲಿಗೆ ಇಡುವ<br>ಅಟ್ಟುಳಿಯ ಮಾಡುವನು ಸುತ್ತ ನೆರೆಗಳ ॥310॥ |
| ಅರುಣ ಉದಯದಲ್ಲಿ ಎದ್ದು ಸಪ್ಪಳಿಲ್ಲದ್ಹಾಂಗೆ<br>ಒಳಗೆ ಪೊಕ್ಕು ನಮ್ಮ ಬಡಿದು ಬವಣೆಬಡಿಸುವ ॥311॥ |
| ಕರಿಯದ ಮುನ್ನ ಬಂದು ಕರುಗಳ ಕಣ್ಣೆ ಬಿಡಿಸಿ<br>ತುರುಗಳ ಉಣಿಸಿ ಕೃಷ್ಣ ಹೋಗುತ್ತಿದ್ದನು ॥312॥ |
| ಹಾಲು ಕರಿವಲ್ಲಿಗೆ ನೀಲವರ್ಣ ಕೃಷ್ಣ ಬಂದು<br>ಹಾಲು ಕುಡಿದು ಗಡಿಗೆ ಒಡೆದು ಓಡಿ ಹೋದನು ॥313॥ |
| ಮೊಸರ ಕಡೆಯುವಲ್ಲಿಗೆ ಕುಸುಮನಾಭ ಕೃಷ್ಣ ಬಂದು<br>ಮೊಸರ ಕುಡಿದು ಗಡಿಗೆ ಒಡೆದು ಓಡಿ ಹೋದನು ॥314॥ |

| |
|---|
| ಕಡೆಯುವಲ್ಲಿಗೆ ಬಂದು ಕಡಗೋಲ ಪಿಡಿದು ನಿಂತು<br>ಕಡಗೋಲ ಮುರಿದು ಗಡಿಗೆ ಒಡೆದು ಹೋದನು ॥315॥ |
| ಏಸು ದೈವಕ್ಕೆ ನಾವು ಮೀಸಲೆಂದು ಮಾಡಿದೆವು<br>ವಾಸುದೇವ ಬಂದು ಮೀಸಲಳಿದು ಪೋದನು ॥316॥ |
| ಗಂಡ ಹೆಂಡಿರು ಮಲಗಿರಲು ಭಂಡು ಮಾಡಿ ಪೋದನು<br>ಪುಂಡರೀಕಾಕ್ಷನ್ನಾವಳಿಯ ತಾಳಲಾರೆವು ॥317॥ |
| ಕತ್ತಲೆ ಮನೆಯು ಎಂದು ಬಚ್ಚಿಟ್ಟು ಬರಲು ನಾವು<br>ಕೃಷ್ಣ ಒಳಗೆ ಹೊಕ್ಕು ಹಾಲು ಬೆಣ್ಣೆ ಕದ್ದನು ॥318॥ |
| ಮಣಿಗಳ ಪ್ರಭೆಗಳಿಂದ ಒಳಗೆ ಹೊಕ್ಕು ಬೆಳಕು ಮಾಡಿ<br>ಮದನನಯ್ಯ ಹಾಲು ಮೊಸರ ಕುಡಿಯುತ್ತಿದ್ದನು ॥319॥ |
| ಕೋಲು ಕೊಂಡು ಕೊಲ್ಲ ಪೋದರೆ ಬಾಲೆಯರ ಬಿಗಿದಪ್ಪಿ<br>ಮೇಲಿನ ಸೆರಗು ತೆಗೆದು ಒಡಿ ಹೋದನು ॥320॥ |
| ನೆಲುವು ನಿಲುಕದಿದ್ದರೆ ವರಳ ಮೇಲೆ ಏರಿಕೊಂಡು<br>ವರಳ ಮೆಟ್ಟಿ ಹಾಲು ಹರವಿಗೆ ಬಾಯನೊಡ್ಡಿದ ॥321॥ |
| ಸುದಾಮನ ಹೆಗಲ ಮೇಲೆ ಏರಿಕೊಂಡು ಶ್ರೀಕೃಷ್ಣ<br>ಚೋರನಂತೆ ಶಿಕ್ಕದಳಿಗೆಯ ಬೆಣ್ಣೆಯ ಕದ್ದ ॥322॥ |
| ಅಷ್ಟು ಎಂಜಲು ಮಾಡಿದ ಒಂದಿಷ್ಟು ಮೀಸಲಿಲ್ಲದ್ಹಾಂಗೆ<br>ಅಷ್ಟಭಾಗದ ದೇವತೆಯೆ  ನಮ್ಮ ಕೃಷ್ಣನೆ ॥323॥ |
| ವತ್ಸದ ಬಾಲಕ್ಕೂ ಮಕ್ಕಳ ಚಂಡಿಕೆಗೂ<br>ಹತ್ತ ಕಟ್ಟಿ ಹರಿಯು ಕುಣಿದು ನಗುತ ನಿಂತನು ॥324॥ |
| ಹದ್ದನೇರಿ ತಿರುಗುವವಗೆ ಬುದ್ಧಿ ಹೇಳಬಾರದೆ<br>ಮುದ್ದು ಮಾಡಿ ಕೆಡಿಸಿ ಬಸವನ ಮುದ್ರೆ ಒತ್ತಿದಿ ॥325॥ |
| ನಿಮ್ಮ ಕೂಡೆ ನಿಷ್ಠುರ ಇನ್ನ ಧರ್ಮವಲ್ಲ ನಮಗೆ<br>ಸುಮ್ಮನಿರಲು ನೆರೆಯ ರಂಗನಿನ್ನು ತಾಳಲಾರೆವು ॥326॥ |
| ಗೊಲ್ಲತಿಯರ ಹೊಂತತನವ ಎಲ್ಲ ನಾನು ಬಲ್ಲೆನು<br>ಫುಲ್ಲನಾಭನ ದೂರು ನಿಮಗೆ ಸಲ್ಲದೆಂದಳು ॥327॥ |
| ಬಾಲಕಿಯರ ಮಾತುಗಳ ಕೇಳಿ ನಾನು ಬಲ್ಲೆನು<br>ಬಾಲಕೃಷ್ಣನ ದೂರು ನಿಮಗೆ ಸಲ್ಲದೆಂದಳು ॥328॥ |
| ಕೊಳಿಕೆಯಲಿ ಎನ್ನ ಮನೆಲಿ ಹಾಲು ಕೊಸರು ಇಟ್ಟಿರಲು<br>ಕೂಡೆ ಹಾಕಿದುಳಿದ ಮೊಸರ ಕುಡಿದನೆಂಬಿರಿ ॥329॥ |

| |
|---|
| ಕಳಸಿಗೆ ಬೆಣ್ಣೆ ಎನ್ನ ಮೆಲಿ ಕಂಡ ಕಡಯಲಿಟ್ಟು<br>ಕೂಡೆ ಹಾಕಿದ ಬೂದ ಬೆಣ್ಣೆಯ ಮೆದ್ದನೆಂಬಿರಿ ‖330‖ |
| ಇಕ್ಕಿದ ಹಾಲು ಮೊಸರು ಬೆಕ್ಕಿಗೆ ಇಕ್ಕಿ ಹೋದ<br>ಚಿಕ್ಕವನ ದೂರುವಿರಿ ಮಕ್ಕಳಲ್ಲವೆ ‖331‖ |
| ಅಂಗನೆಯರೆಲ್ಲರು ರಂಗನ ದೂರುವಿರಿ<br>ಬಾಲಕನ ದೂರುವಿರಿ ಕಂದರಿಲ್ಲವೆ ‖332‖ |
| ಬಾಲಕಿಯರೆಲ್ಲರು ಬರಿದೆ ದೂರು ಮಾಡುವಿರಿ<br>ನೀವು ಕೃಷ್ಣನ ಹಿಡಿದುಕೊಂಡು ಬನ್ನಿರೆಂದಳು ‖333‖ |
| ಆಗಲೀ ಕೇರಿಯೊಳಗೆ ಬಾರದಿದ್ದಾನೊ ಕೃಷ್ಣ<br>ಬೇಗದಿಂದ ತಮ್ಮ ಮನೆಗೆ ಪೋಗುತ್ತಿದ್ದರು ‖334‖ |
| ಅವರು ಬರುವುದನು ಕಂಡು ಅವರ ಮನೆಗಳಿಗೆ ಹೊಕ್ಕು<br>ಕೊಡದ ಮೊಸರು ಹಾಲು ಬೆಣ್ಣೆ ಸವಿಯುತ್ತಿದ್ದನು ‖335‖ |
| ಕೈಯಲಿ ಬೆಣ್ಣೆ ಬಾಯಲ್ಲಿ ಬೆಣ್ಣೆ ಮನೆಯೊಳಗೆ ಸುರಿದ ಹಾಲು<br>ನಿಮ್ಮಮ್ಮಗೆ ತೋರ್ಪೆವೆಂದು ಕೊಂಡು ಬಂದರು ‖336‖ |
| ಒಬ್ಬರರಿಯದ್ದಾಂಗೆ ಮತ್ತೊಬ್ಬಳು ಎತ್ತಿಕೊಂಡು<br>ಮಿತ್ರೆ ಗೋಪಿದೇವಿಯ ಮನೆಗೆ ಬಂದರು ‖337‖ |
| ಮಿತ್ರೆ ಗೋಪಿದೇವಿ ತನ್ನ ಕೃಷ್ಣನ ತೆಗೆದು ತೊಡೆಯಲ್ಲಿಟ್ಟು<br>ಮೊಲೆಯ ಕೊಟ್ಟು ಮುದ್ದಾಡಿ ನಗುತಲಿದ್ದಳು ‖338‖ |
| ಅವರ ಕೈಯಲಿಲ್ಲ ಕೃಷ್ಣ ಯಶೋದೆ ದೇವಿ ತೊಡೆಯಲಿರಲು<br>ಎಲ್ಲರೂ ಕಂಡು ಅಂದು ಆಶ್ಚರ್ಯ ಪಟ್ಟರು ‖339‖ |
| ಬಾಲಕಿಯರೆಲ್ಲರೂ ಕೈಲಿ ಕೃಷ್ಣನಿಲ್ಲದೆ<br>ನಾಚಿ ನುಡಿಯಲಾರದೆ ಸುಮ್ಮನ್ನೋದರು ‖340‖ |
| ಅವರ ಮನೆಗಳಿಗೆ ಕಳುಹಿ ದಧಿಮಥನವ ಮಾಡುತಿರಲು<br>ಜಗದಂತರ್ಯಾಮಿ ಸ್ವಾಮಿಯ ಪಾಡುತ್ತಿದ್ದಳು ‖341‖ |
| ಹಾರ ಕುಚಗಳಲ್ಲಿ ಮುತ್ತಿನ ಮಾಲೆ ಅಲ್ಲಾಡುತ್ತಿರಲು<br>ನೀಲ ಮೇಘಶ್ಯಾಮನ ಪಾಡುತ್ತಿದ್ದಳು ‖342‖ |
| ಕಡಗ ಕಂಕಣಗಳಿಗೆ ಮುಡಿದ ಮಲ್ಲಿಗೆ ಮಧುರೆ<br>ಧುಮ್ಮ ಧುಡುಕೆಂದು ಮೊಸರ ಕಟೆಯುತ್ತಿದ್ದಳು ‖343‖ |
| ಮೊಸರ ಕಡೆಯುವಲ್ಲಿಗೆ ಕುಸುಮನಾಭ ಕೃಷ್ಣ ಬಂದು<br>ಹಸಿದೆನೆಂದು ಅಮ್ಮಿಯ ಬೇಡುತಿದ್ದನು ‖344‖ |

| |
|---|
| ನಂಬಿಸಿ ಕಣ್ಣೀರ ಒರಸಿ ನವನೀತವ ಕೈಲಿ ಕೊಟ್ಟು<br>ಮೊಲೆಯ ಕೊಟ್ಟಳೆ ಗೋಪಿ ಜಗದೊಡೆಯಗೆ ‖345‖ |
| ಹಾಲು ಉಕ್ಕಿ ಬರಲು ಗೋಪಿ ನೀಲವರ್ಣನ ಕೆಳಗೆ ಇಟ್ಟು<br>ನೀರ ತೊಡೆದು ಬರುವೆನೆಂದು ಒಳಗೆ ಹೋದಳು ‖346‖ |
| ಹಾಲು ಹರವಿ ಕೆಳಗೆ ಇಡಲು ನೀಲವರ್ಣ ಕೃಷ್ಣ ಕಡ<br>ಗೋಲಮುರಿದು ಗಡಿಗೆ ಒಡೆದು ಒಡಿ ಹೋದನು ‖347‖ |
| ಒಳಗೆ ಹೊಕ್ಕು ಬರಲು ಗೋಪಿ ಮುರಿದ ಕಡಗೋಲು ಕಂಡು<br>ಜಗದೊಡೆಯನ ಕೆಲಸವೆಂದು ತಿಳಿದಳಾಗಲೇ ‖348‖ |
| ಗೊಲ್ಲತಿಯರ ಮಾತ ನಾನು ಎಲ್ಲ ಹುಸಿ ಮಾಡಿದೆ<br>ಫುಲ್ಲನಾಭನ ಮುದ್ದಿಸುವುದು ಸಲ್ಲದೆಂದಳು ‖349‖ |
| ಬಾಲಕಿಯರ ಮಾತ ನಾನು ಬಹಳ ಹುಸಿ ಮಾಡಿದೆ<br>ಬಾಲಕೃಷ್ಣನ ಮುದ್ದಿಸುವುದು ಸಲ್ಲದೆಂದಳು ‖350‖ |
| ಎಷ್ಟಂತ ತಾಳ್ವೆ ನಾನು ಕೃಷ್ಣನ ಹಾವಳಿಯ<br>ಕಷ್ಟದಿಂದ ಹಿಡಿದಳೆ ಕಟ್ಟುವೆನೆಂದು ‖351‖ |
| ಊರ ಕಣ್ಣಿಯ ತಂದು ವಾರಿಜನಾಭನ ಕಟ್ಟೆ<br>ಸಾಲದಿರಲು ರಟ್ಟೆ ನೊಂದು ಸರಿದಳ್ಹಿಂದಕೆ ‖352‖ |
| ಆಕಳ ಕಣ್ಣಿಯ ತಂದು ಗೋಪಾಲಕೃಷ್ಣನ ಕಟ್ಟೆ<br>ನಾಕು ಬೆರಳಿಗೆ ಸಾಲದೆನುತ ನಗುತ ಓಡಿದ ‖353‖ |
| ಓಡಿಓಡಿ ಹೋಗುತಿರಲು ಸಾರೆ ಸಾರೆ ನಿಲ್ಲುತಿರಲು<br>ವಾರೆ ವಾರೆ ನೋಟದಿಂದ ನೋಡುತಿರುವನು ‖354‖ |
| ಮುಂದೆ ಗೋವಿಂದನ ಪಾದ ಹಿಂದೆ ಯಶೋದೆಯ ಪಾದ<br>ಮುಂಗೈ ಮುರಾರಿ ನೇತ್ರಗಳೊರಸುತಿದ್ದಳು ‖355‖ |
| ನೇತ್ರದಲಿ ಜಲವ ತುಂಬಿ ಪ್ರೀತಿ ವಚನ ಕುರಿತು ಹರಿಯ<br>ಮಾತನಾಡಿದಳೆ ಮುಕ್ತಿಖ್ಯಾತಳದಿಂದ ‖356‖ |
| ಜನನಿ ಅರಸಿದಳೆಂದು ಕರುವು ಕಣ್ಣೆ ಆಳವಾಗಿ<br>ಕೃಷ್ಣ ಭಕ್ತವತ್ಸಲ ತಾನಾದ ‖357‖ |
| ಯೋಗಿಗಳ ಮನಸಿನ ಜ್ಞಾನಕೆ ಸಿಕ್ಕದವನ<br>ಶ್ರೀಹರಿಯ ಕಟ್ಟಿದಳೆ ಗೇಣು ಹಗ್ಗದಿ ‖358‖ |
| ಒರಳಿಗೆ ಕೃಷ್ಣನ ಕಟ್ಟಿ ಒಳಗೆ ಬಂದಳು ಗೋಪಿ<br>ಸುಳಿದು ಬಾಹೆನೆಂದು ಬೀದಿ ಹೊರಗೆ ಬಂದನು ‖359‖ |

| |
|---|
| ನಳಕೂಬ್ರ ಮಣಿಗ್ರೀವರು ನಾರದರ ಶಾಪದಿಂದ<br>ವೃಕ್ಷ ರೂಪದಿ ಜನಿಸಿದರು ಧರಣಿಯ ಮೇಲೆ ॥360॥ |
| ಯಮಳಾರ್ಜುನರ ಶಾಪವ ಇಂದು ಬಿಡಿಸುವೆನೆಂದು<br>ಬಂದ ಕೃಷ್ಣ ಮತ್ತಿಯಾ ಮರಗಳಲ್ಲಿಗೆ ॥361॥ |
| ಮತ್ತಿಯಾ ಮರಗಳಲ್ಲಿ ಸಿಕ್ಕಿ ಬಿದ್ದಿತು ಉಳುಪು<br>ಕಿತ್ತು ಧರೆಗೆ ಕೆಡಹೆ ಕೃಷ್ಣ ಅತ್ತಸಾರಿದಾ ॥362॥ |
| ಬಿದ್ದ ಮರನ ನಡುವೆ ಮತ್ತಿಬ್ಬರ್ಪುರುಷರೆದ್ದು ಬರಲು<br>ಕಂಡು ಜನಗಳೆಲ್ಲ ಬಹು ಚೋದ್ಯಪಟ್ಟರು ॥353॥ |
| ಮದ್ಯಪಾನವನ್ನು ಮಾಡಿ ಉನ್ಮತ್ತರಾಗಿರುತಿರಲು<br>ನಾರದರು ಬಂದು ನಮ್ಮ ಕಡೆಗ ಹಾಕಲು ॥354॥ |
| ಅರ್ಕಪತಿಯ ಸೇವೆ ಮಾಡಿ ವ್ಯರ್ಥವಾಗಿ ಕೆಡಲು ಬೇಡಿ<br>ಲಕ್ಷ್ಮೀಪತಿಯ ಪೂಜೆಗಳ ಮಾಡಿರೆಂದನು ॥365॥ |
| ನಮೋಸ್ತು ಕಲ್ಯಾಣರೂಪ ನಮೋ ವಿಶ್ವಭಾವನ<br>ನಮೋ ಭಾರ್ಗವ ವೇದವ್ಯಾಸ ಯಾದವ ನಂದನಾ ॥366॥ |
| ಲಕ್ಷುಮೀಶ ನಮ್ಮಪರಾಧವ ಕ್ಷಮಿಪುದೆಂದು<br>ಕರವ ಮುಗಿದು ಸ್ತುತಿಯ ಮಾಡಿ ಬೇಡಿಕೊಂಡರು ॥367॥ |
| ಕರವ ಮುಗಿದು ಸ್ತುತಿಯ ಮಾಡಿ ನಮಸ್ಕರಿಸಕೊಂಡು<br>ನಿಂತು ಬೆಳಗುವ ವಿಮಾನವೇರಿ ತೆರಳಿ ಹೋದರು ॥368॥ |
| ಇಂದಿನ ವ್ಯಾಪಾರವನ್ನು ಬಂದ ಜನರೆಲ್ಲ ನೋಡಿ<br>ಸಂದೇಹವಿಲ್ಲನೀತ ಕೊಂದನೆಂದರೂ ॥369॥ |
| ಪೂತನಿ ಶಕಟ ತೃಣಾವರ್ತ ಕೇಶಿಯನ್ನೆ ಕೊಲ್ಲುವ<br>ಆಚರಿತ್ರೆ ಪಾಡಿದರು ಅಮರ ವಂದ್ಯನ ॥370॥ |
| ಇಂದಿರಾರಮಣನ ಮೇಲೆ ಇಂದ್ರಾದಿ ದೇವತೆಗಳು<br>ಮಂದಾರ ಪುಷ್ಪದ ಮಳೆಯ ಕರೆದರು ॥371॥ |
| ಕೃಷ್ಣ ಚರಿತೆಯನ್ನು ಕೇಳಿದಾ ಕಂಸನು<br>ಕೊಂದು ನಿದ್ರೆಗೈವುದು ಎಂದಿಗೆಂದನು ॥372॥ |
| ನಂದಗೋಕುಲದ ಒಳಗೆ ಬಂದಿತು ಉತ್ಪಾತವೆಂದು<br>ವೃಂದಾವನಕೆ ತೆರಳಿ ಪೋದ ಇಂದಿರೇಶನು ॥373॥ |
| ವೃಂದಾವನದ ಒಳಗೆ ಗೋವಿಂದನಾಡುತಿರಲು ಮಣ್ಣ<br>ತಿಂದನೆಂದು ಹೇಳಿದರೆ ನಂದಗೋಪಿಗೆ ॥374॥ |

| |
|---|
| ಕೋಲು ತೆಗೆದುಕೊಂಡು ಗೋಪಿ ಬಾಲಕನ ಬಡಿವೆನೆನಲು<br>ಬಾಯ ತೆರೆಯದಿದ್ದರೆ ಬಡಿವೆನೆಂದಳು ॥375॥ |
| ಮಣ್ಣ ತಿನ್ನಲಿಲ್ಲ ನಮ್ಮಣ್ಣ ರಾಮರನೆ ಕೇಳು<br>ಸಣ್ಣವರ ಮಾತಿದೆಲ್ಲ ಸಟೆ ಎಂದನು ॥376॥ |
| ಚಿಕ್ಕವರ ಮಾತ ಕೇಳಿ ಶಿಕ್ಷೆ ಮಾಡಿ ಕೊಲ್ಲ ಬಂದಿ<br>ಮೃತ್ತಿಕೆಯ ತಿನ್ನಲಿಲ್ಲ ಬಾಯ ನೋಡೆಂದ ॥377॥ |
| ಶ್ರೀಕೃಷ್ಣನ ಬಾಯೊಳಗೆ ಹದಿನಾಲ್ಕು ಲೋಕವ ಕಂಡು<br>ಪ್ರಾದುರ್ಭೂತನಾದ ಪರಮಾತ್ಮನೆಂದಳು ॥378॥ |
| ಸಪ್ತದ್ವೀಪಗಳ ಸುತ್ತೇಳು ಸಮುದ್ರವಿರುವ ಪೃಥ್ವಿ।<br>ಆಕಾಶ ಮೇರು ಪರ್ವತವನು ಕಂಡಳು ॥379॥ |
| ಧನ್ಯವಾದ ವೈಕುಂಠವ ಚೆನ್ನವಾಗಿ ಕಂಡಳು<br>ತನ್ನ ಕಂಡು ಯಶೋದೆ ತವಕಿಸಿದಳು ॥380॥ |
| ಮುದ್ದು ಕೃಷ್ಣನ ಬಾಯೊಳಗೆ ಬಿದ್ದೆನು ತಾನೆನುತ<br>ಇದ್ದ ಸ್ಥಳವ ಕಾಣದೆ ಶ್ರಮವ ಪಟ್ಟಳು ॥381॥ |
| ದೇವಾದಿದೇವನೆಂದು ದೇವಿ ಯಶೋದೆ ಸ್ತುತಿಸೆ<br>ದೇವಕಿಸುತನು ತನ್ನ ಬಲೆಯ ಬೀಸಿದ ॥382॥ |
| ಬಲರಾಮ ಶ್ರೀಕೃಷ್ಣ ಸಹ ತುರುಗಳನ್ನು ಕಾಯುತ್ತಿರಲು<br>ಕರುವಿನಂತೆ ಬಂದ ಒಬ್ಬ ಕಳ್ಳ ಅಸುರನು ॥383॥ |
| ಆಕಳ ಕಾಯುತಿದ್ದ ಶ್ರೀಕೃಷ್ಣನ ಕೊಲ್ಲುವೆನೆಂದು<br>ಪಾಪಿ ಅಸುರ ಗೋರೂಪವನ್ನು ಧರಿಸಿದ ॥384॥ |
| ಧೇನುಕಾಸುರನು ಬಂದು ದೇವಕಿಯ ಸುತನ ಹಿಡಿದು<br>ಭೂಮಿಯ ಮೇಲೆ ಅಪ್ಪಳಿಸುತ್ತಿದ್ದನು ॥385॥ |
| ಅಂಬುಜಾಕ್ಷ ಅಸುರನಂಗೈಯಿಂದಲಪ್ಪಳಿಸಿ<br>ಮುಂದಿನ ರತ್ನವಪಹರಿಸಿಕೊಂಡನಸುರನ ॥386॥ |
| ಪಕ್ಷಿರೂಪವನ್ನು ಧರಿಸಿ ಕುಕ್ಷಿಯೊಳಸುರ ಒಬ್ಬ<br>ಭಕ್ಷಿಸುವೆನೆಂದು ಮೂತಿಯಿಂದ ಕಡಿದನು ॥387॥ |
| ಕಮಲನಾಭನು ಬಕಾಸುರನ ಎರಡು ತುಟಿಗಳನ್ನೆ ಹಿಡಿದು<br>ಕಡಿದು ತುಂಡು ಚೂರ್ಣ ಮಾಡಿ ಕಡೆಗೆ ಹಾಗಿದ ॥388॥ |
| ಶಂಕರನ ಕುರಿತು ಪಾವಿತ್ರಚೂಡನೆಂಬ ದೈತ್ಯ<br>ಪಂಕಜಾಕ್ಷನ ಕೊಲುವೆನೆಂದು ಪರಿಯತಂದನು ॥389॥ |

| |
|---|
| ಗೋವ್ಗಳನೆಲ್ಲ ಕಾವಡಿಗಳನೆ ಕಟ್ಟಿ<br>ಗೋಪಾಲರ ಹೆಗಲಲಿಟ್ಟು ಮನೆಗೆ ಕಳುಹಿದ ॥390॥ |
| ಹಸಿದೆನೆಂದು ಶ್ರೀಕೃಷ್ಣ ಯಶೋದೆಗೆ ಹೇಳಲು<br>ಮೊಸರು ಅನ್ನವನ್ನು ಕೊಟ್ಟು ಕಳುಹಿಸಿದಳು ॥391॥ |
| ಅಸುಳಿಯೊಳಗೆ ಮಂಡಿಸಿ ವಸುಧೆಯೊಳಗೆ ಕೆಲಕೆಲರು<br>ವೃಷಭದಂತೆ ಹೋರಿ ಹೋರಿ ಉಣ್ಣುತ್ತಿದ್ದರು ॥392॥ |
| ಆಳ್ಳ ಮಾಗಾಯಿ ಬೇರು ಗುಳ್ಳ ಸುಂಡಿಯ ಕಾಯಿ<br>ಕೊಳಲ ಕಂಕುಳಲಿರಿಸಿ ಕೃಷ್ಣ ಉಣುತಲಿದ್ದನು ॥393॥ |
| ಒಂದು ಕೈಯಲಿ ಉಪ್ಪಿನಕಾಯಿ ಮತ್ತೊಂದು ಕೈಲಿ ಮೊಸರು ಬುತ್ತಿ<br>ಕೊಳಲ ಕಂಕುಳಲಿಟ್ಟು ಕೃಷ್ಣ ಉಣುತಲಿದ್ದನು ॥394॥ |
| ಕಳ್ಳಿ ಅನ್ನವನ್ನೆ ಉಂಡು ಗೊಲ್ಲರ ಕೂಡಿಕೊಂಡು<br>ಫುಲ್ಲನಾಭ ಭೋಜನ ಮಾಡುತ್ತಿದ್ದನು ॥395॥ |
| ಬಲರಾಮ ಶ್ರೀಕೃಷ್ಣ ಕರುಗಳನ್ನೆ ಕಾಯುತಿರಲು<br>ರವಿಯು ಮಧ್ಯಾಹ್ನಕೆ ಬಂದನಾಗಲೇ ॥396॥ |
| ಕರುಗಳಿಗೆ ನೀರು ಕುಡಿಸಿ ಕಾಲು ಮುಖಗಳನ್ನೆ ತೊಳೆದು<br>ಕರುಗಳನ್ನು ನೆರಳಿನಲ್ಲಿ ನಿಲಿಸುತ್ತಿದ್ದರು ॥397॥ |
| ನಕ್ಷತ್ರದಂತೆ ಸುತ್ತ ಗೋಪಾಲರೊಡನೆ<br>ಒಪ್ಪಿದನೆ ಚಂದ್ರನಂತೆ ನಡುವೆ ಕೃಷ್ಣನು ॥398॥ |
| ಚಂದ್ರ ಗುಡಿ ಕಟ್ಟಿದಂತೆ ಹಿಂಡು ಗೋಪಾಲರೊಡನೆ<br>ಇಂದಿರೇಶ ಹರಿಸ್ಮರಣೆಯಿಂದ ಕೂತನು ॥399॥ |
| ತುತ್ತು ಕೊಟ್ಟು ತುದಿಯದೆಂದು ಭಕ್ತಿಯಿಂದ ತೆಗೆದುಕೊಂಬ<br>ಕೃಷ್ಣನ ಕೂಡೆ ಉಂಡು ಸುಖದಲಿದ್ದರು ॥400॥ |
| ಅನಂತ ವೇದಗಳ ಬಿಟ್ಟು ಅಚ್ಯುತನ ಕೂಡೆ ಉಂಡು<br>ಭೋಜನದ ಸುಕೃತ ಸವಿಯವೆಲ್ಲ ಪಡೆದರು ॥401॥ |
| ಬಾಲಕರ ಕೂಡಿಕೊಂಡು ರಾಮಕೃಷ್ಣರಾಡುತಿರಲು<br>ಆಗ ಅಜನು ಬಂದು ಕರುವ ಮರೆಯ ಮಾಡಿದ ॥402॥ |
| ಕರುವು ದೂರ ಹೋಯಿತೆಂದು ಹರಿಯ ಕೂಡೆ ಕೇಳಲು<br>ಅರಸಿ ತಾಹೆನೆಂದು ನೀವು ಉಣ್ಣಿರೆಂದನು ॥403॥ |
| ಇತ್ತ ಗೋಪಾಲರಿಲ್ಲ ಅತ್ತ ಕರು ಕಾಣಲಿಲ್ಲ<br>ವತ್ಸ ಒಂದು ಉಳಿಯಿತೆಂಬ ತೆರದಲ್ಲಿದ್ದರು ॥404॥ |

| |
|---|
| ಅರಸಿ ತುರುವ ಕಾಣದೆ ಅಜನ ಮಾಯವೆಂದರಿತು<br>ಕರುವು ಕೊಂಬ ಕೊಳಲ ಗೋಪಾಲರಾದರು ॥405॥ |
| ಗೋವಿನ ಹಿಂಡುಗಳು ಗೋಪಾಲರ ತಂಡಗಳು<br>ಮಾಧವನ ಕೂಡಿಕೊಂಡು ಮನೆಗೆ ಬಂದರು ॥406॥ |
| ಕಸ್ತೂರಿ ತಿಲಕವನಿಟ್ಟು ಕಂಗಳಿಗಂಜನವ ಹಚ್ಚಿ<br>ಮಕ್ಕಳೆಂದು ಗೋಪಿಯರು ಮೊಲೆಯ ಕೊಟ್ಟರು ॥407॥ |
| ಇತ್ತ ಇವರಿಗೊರುಷವಾಗಿ ಅತ್ತವರಿಗೆ ನಿಮಿಷವಾಗಿ<br>ಸಿಕ್ಕಿದ ಮಾಯವೆ ಎಂದ ರಾಮನು ॥408॥ |
| ಅಣ್ಣ ಕೇಳು ಅವರ ಮನೆಯಲಿ ಅಲೆದು ಬೆಣ್ಣೆ ತಿಂದುದಕ್ಕೆ<br>ಕರುವು ಕೊಂಬ ಕೊಳಲ ಗೋಪಾಲರಾದೆವು ॥409॥ |
| ಹರಿಯ ಮಾಯಗಳನೆ ಕೇಳಿ ಹಲಧರನು ತಲೆಯ ತೂಗಿ<br>ಅರಿವರ್ಯಾರು ನಿನ್ನ ಮಹಿಮೆ ಎಂದ ರಾಮನು ॥410॥ |
| ಅಚ್ಯುತ ನಿನ್ನ ಮಹಿಮೆ ಎಷ್ಟು ಪೊಗಳಲಳವಲ್ಲ<br>ಭಕ್ತರಾದ ಸುಜನರಿಗೆ ರೂಪನಾದಿಯ ॥411॥ |
| ನರಹರಿ ನಿನ್ನ ಮಹಿಮೆ ವರ್ಣಿಸಲಳವಲ್ಲ<br>ಸುಲಭದಿಂದ ಸುಜನರಿಗೆ ರೂಪನಾದಿಯ ॥412॥ |
| ಮಾಧವ ನಿನ್ನ ಮಹಿಮೆ ಏನು ಪೊಗಳಲಳವಲ್ಲ<br>ಭಾವದಿಂದ ಸುಜನರಿಗೆ ರೂಪನಾದಿಯ ॥413॥ |
| ಬಾಲಕರ ಕೂಡಿಕೊಂಡು ರಾಮಕೃಷ್ಣರಾಡುತಿರಲು<br>ಆಗ ಅಜನು ಬಂದು ಸ್ತುತಿಯ ಮಾಡಿ ಹೋದನು ॥414॥ |
| ಭಕ್ತರ ತಂಡವಿದೆ ಬಚ್ಚಿಟ್ಟ ತಂಡವಿದೆ<br>ಈ ತಂಡ ಯಾವುದೆಂದು ಅಜನು ಚಿಂತಿಸೆ ॥415॥ |
| ಒಪ್ಪಿಸಿ ಕೊಟ್ಟರೆ ತಪ್ಪದೀಗ ನಾನಾದೆ<br>ಇಪ್ಪಡಿಯಿಂದ ಅಜನು ಸ್ತುತಿಯನೊತ್ತಿದ ॥416॥ |
| ಶಂಖ ಚಕ್ರಧಾರಿ ಅನಂತ ವಿಶ್ವರೂಪನಾದ<br>ಶಂಕಿಸುವ ಅಜಗೆ ತನ್ನ ನಿಜವ ತೋರಿದ ॥417॥ |
| ಅಕ್ಷಯ ಜಯ ಜಯ ಪಕ್ಷಯ ಜಯ ಜಯ<br>ರಕ್ಷಿಸೆನ್ನ ಹರಿಯೆ ಎಂದು ಪಾದಕೆರಗಿದ ॥418॥ |
| ಬ್ರಹ್ಮನೆಂಬ ಹಮ್ಮಿನಿಂದ ನಿನ್ನ ಮರೆದಿದ್ದೆ ಸ್ವಾಮಿ।<br>ಚಿಣ್ಣನೆಂದು ಮೋಹದಿಂದ ನಿಜವ ತೋರಿದಿ ॥419॥ |

| |
|---|
| ತಾಳ ಮೇಳದ ಸುಖವ ಗೋವಳಿರಿಗಿತ್ತ ದೇವ<br>ಉಳಿಗದ ಬಂಧನದೊಳೆನ್ನ ಇರಿಸಿದಿ ॥420॥ |
| ಆಧಿಪತ್ಯವನ್ನು ಒಲ್ಲೆ ಅಜನೆಂಬ ಹೆಸರು ಒಲ್ಲೆ<br>ಗೊವಳರಂದದಿ ಎನ್ನ ಪಾಲಿಸೆಂದನು ॥421॥ |
| ಮಂದಮತಿಯ ಮಗನು ಮಾತೊಂದನರಿಯನೆಂದು<br>ಇಂದಿರೇಶ ಪಾಲಿಸಿ ಮನೆಗೆ ಕಳುಹಿದ ॥422॥ |
| ತಂದ ಮೊಸರ ಬುತ್ತಿಯನ್ನೆ ಇಂದಿರೇಶ ಕೈಗೊಂಡು<br>ಅಂದು ಉಂಡ ಕೃಷ್ಣ ಗೋಪಾಲರೊಡಗೂಡಿ ॥423॥ |
| ಗೋವಿಂದ ನೀನೆಲ್ಲಿಗ್ಹೋಗಿ ತಂದಿ ಹೇಳು ಕರುವ<br>ಸಂಗಾತ ಉಣ್ಣಬಾರೆಂದು ಕರೆದರು ॥424॥ |
| ಸಣ್ಣವರು ಮಕ್ಕಳು ತನ್ನ ತಾಯ ಮೊಲೆಯನುಂಡು<br>ಅಮ್ಮ ಕೇಳೆ ಅಜನು ನಮ್ಮ ಮರೆಯ ಮಾಡಿದ ॥425॥ |
| ಪ್ರಲಂಬ ದೈತ್ಯನು ಬಲರಾಮದೇವನ ಹೆಗಲನೇರಿಸಿ<br>ಆಕಾಶಕೊಯ್ದನು ಆ ಕ್ಷಣದಲಿ ॥426॥ |
| ಮಾಯಾಸುರನೆಂಬ ದೈತ್ಯ ಮಕ್ಕಳಾಟಿಕೆಯಲಿ ಬಂದು<br>ಗುಹೆಯೊಳಗೆ ಹೊಗ್ಗಿಸಿ ಗೋಪಾಲರನೆಲ್ಲ ॥427॥ |
| ಗುಹೆಯೊಳಗೆ ಹೊಗ್ಗಿಸಿದ ಗೋಪಾಲಕರ ಕಡೆಗೆ ತೆಗೆದು<br>ಮಡುಹಿದನೆ ಮಾಯಾಸುರನ ಮಧುಸೂದನ ॥428॥ |
| ಕಟ್ಟೆ ಅಸುರ ಒಯ್ದಿರಲು ಕೃಷ್ಣಗೆ ಮೊರೆಯಿಡಲು<br>ಮತ್ತೆ ನಿನ್ನ ಮೂಲರೂಪ ಧರಿಸು ಎಂದನು ॥429॥ |
| ಕುಶಲ ವಿಧದಿಂದ ತನ್ನ ಮೂಲರೂಪವನ್ನು ಧರಿಸಿ<br>ಅಸುರನ ಕೊಂದನಾಕ್ಷಣದಿಂದಲಿ ॥430॥ |
| ಉಷಃಕಾಲದಲ್ಲಿ ಗೋಪ ನೀರೊಳಗೆ ಮುಣುಗುತಿರಲು<br>ನಿಶಾಚರರು ಒಯ್ದು ವರುಣನ ಮುಂದೆ ಇಟ್ಟರು ॥431॥ |
| ನಂದ ನೀರೊಳಗೆ ಮುಳುಗೆ ಅಂದು ದೇಹ ಕಾಣದಿರಲು<br>ಮುಂದೆ ಕೃಷ್ಣ ವರುಣನಾಲಯಕೆ ಬಂದನು ॥432॥ |
| ಕರವ ಮುಗಿದು ಸ್ತುತಿಯ ಮಾಡಿ ನಮಸ್ಕರಿಸಿಕೊಂಡು<br>ನಂದನ ತಂದು ಕೃಷ್ಣನ ಮುಂದೆ ಇಟ್ಟರು ॥433॥ |
| ನೀರೊಳಗೆ ಹೋದ ತಂದೆಯ ನೀಲವರ್ಣ ಕರೆದು ತಂದ<br>ಮಾಧವನ ಮಹಿಮೆ ಎಂದು ಚೋದ್ಯಪಟ್ಟರು ॥434॥ |

| |
|---|
| ಬಾಲಕರು ಕೂಡಿಕೊಂಡು ತೋಳು ದಂಡಿಗೆಯ ಮಾಡಿ<br>ದೇವಾದಿದೇವನ ಏರಿಸಿದರು ‖435‖ |
| ಹೀಲಿಯ ಚಾಮರವ ಬೀಸಿ ತಾವರೆಯ ಕೊಡೆಯ ಪಿಡಿದು<br>ಸಾಯುಜ್ಯ ಮುಕ್ತಿಗೆ ಸಂದರೆಲ್ಲರು ‖436‖ |
| ಆಕಳ ಕಾಯುತ್ತಿದ್ದ ಗೋಪಾಲಕರೆಲ್ಲರು<br>ಕಾಗೆ ಹಣ್ಣ ಮೆಲ್ಲಬೇಕು ಕೃಷ್ಣನೆಂದರು ‖437‖ |
| ತುರುಗಳ ಕಾಯುತಿದ್ದ ಗೋಪಾಲಕರೆಲ್ಲರು<br>ತಾಳಿಹಣ್ಣ ಮೆಲ್ಲಬೇಕು ಕೃಷ್ಣ ಎಂದರು ‖438‖ |
| ಮೆಲ್ಲಿರೆಂದಪ್ಪಣೆಯ ಫುಲ್ಲನಾಭ ಕೊಡುತಿರಲು<br>ಅಲ್ಲಿ ಕಲಹ ಮಾಡಿದರು ವನಗಳಲೆಲ್ಲ ‖439‖ |
| ಕದಳಿ ಕಂಬದಲ್ಲಿದ್ದ ಖರಾಸುರನೆಂಬ ದೈತ್ಯ<br>ಎರಡು ಕಾಲ ಕೆರೆಯುತ ಬಂದ ಕೊಲುವೆನೆನುತಲಿ ‖440‖ |
| ಖರಾಸುರನ ಬಲರಾಮ ಎರಡು ಕಾಲುಗಳನೆ ಹಿಡಿದು<br>ಖರಖರನೆ ತಿರುಗಿಸಿ ವನದ ಮೇಲೆ ಬಿಟ್ಟನು ‖441‖ |
| ಖರಾಸುರನು ಬಿದ್ದ ನೆವದಿ ವನಗಳೆಲ್ಲ ಒಂದಾಗಿ<br>ಧರೆಯ ಮೇಲೆ ಬೀಳೆ ಹಣ್ಣು ದಣಿಯ ಮೆದ್ದರು ‖442‖ |
| ಹಣ್ಣು ಮೆದ್ದ ಬಳಿಕ ನಮ್ಮಣ್ಣ ರಾಮರಿಗೆ ಕಳುಹಿ<br>ಸಣ್ಣವರು ಕೂಡಿಕೂಂಡಾಡುತಿದ್ದರು ‖443‖ |
| ತಾಳಿ ಹಣ್ಣಗಳನೆ ಮೆದ್ದು ಗೋವು ಗೋಪರೆಲ್ಲರು<br>ಕಾಳಿ ಮಡುವಿಗೆ ಕರೆದು ತಂದ ಕೃಷ್ಣನಲ್ಲಿಗೆ ‖444‖ |
| ಧಟ್ಟಿ ಪೀತಾಂಬರವನುಟ್ಟು ಶ್ರೀಕೃಷ್ಣ<br>ಮುತ್ತಿನ ಕೊಳಲು ಪಿಡಿದು ಊದುತಿದ್ದನು ‖445‖ |
| ಆಲೈಸಿ ಕೇಳಿದುವು ಗೋವು ಗೋಪರೆಲ್ಲರು<br>ಬೇಗದಿಂದ ಕೃಷ್ಣನ ಬಳಿಗೆ ಬರುತಲಿದ್ದರು ‖446‖ |
| ತೃಷೆಯಿಂದ ಗೋವು ಗೋಪರು ವಿಷಪಾನ ಮಾಡುತಿರಲು<br>ವಿಷ ತಲೆಗೇರಿ ಪರವಶರಾದರು ‖447‖ |
| ಮುರಿಯ ಮೇಲೆ ಬೀಳೆ ಪುರುಷೋತ್ತಮ ದಯದಿಂದ<br>ಕಡೆಗಣ್ಣಿಲಿ ನೋಡೆ ಮೈಮುರಿದೆದ್ದರು ‖448‖ |
| ಪುಂಡರೀಕಾಕ್ಷ ಹರಿಯ ಚಂಡನ್ನೊಯ್ದಾಡುತಿರಲು<br>ಅಂಬರಕ್ಕೆ ತಿರುವಿ ಯಮುನೆಯೊಳಗೆ ಬಿದ್ದಿತು ‖449‖ |

| |
|---|
| ಪಕ್ಷಿವಾಹನ ಸ್ವಾಮಿ ಕಡಹದ ಮರವನೇರಿ<br>ಮಡುವ ಧುಮುಕಿ ಜಲವ ಕದುಕಿ ವಿಷವಾಯಿತು ‖450‖ |
| ಕೃಷ್ಣ ನೀರೊಳಗೆ ಬೀಳೆ ಗೋಪಾಲಕರೆಲ್ಲರು<br>ಮತ್ತೆ ನಂದಗೋಪಗೆಶೋದೆಗ್ಹೇಳಲು ‖451‖ |
| ಮಡುವಿಗೆ ಬಿದ್ದ ಕೃಷ್ಣನ ಮರಳಿ ನಾವು ಕಾಣೆವೆಂದು<br>ಕಡು ದುಃಖದಿಂದ ಹೋಗಿ ಹೇಳುತ್ತಿದ್ದರು ‖452‖ |
| ಅರ್ತಿಯಿಂದ ನಂದಗೋಪಿ ತುಪ್ಪವನ್ನು ಕಾಸುತಿರಲು<br>ಕೃಷ್ಣ ಮಡುವಿಗೆ ಬಿದ್ದನೆಂದು ಹೇಳುತ್ತಿದ್ದರು ‖453‖ |
| ಹರುಷದಿಂದ ನಂದಗೋಪಿ ಮೊಸರ ಕಡೆವ ಸಮಯದಲ್ಲಿ<br>ವಿಷದ ಮಡುವಿಗೆ ಬಿದ್ದನೆಂದು ಹೇಳುತ್ತಿದ್ದರು ‖454‖ |
| ಬೆಳೆದ ಕುಚದ ನಾರಿಯರು ಬಳಬಳನೆ ಬಳುಕುತ<br>ಮುಡಿಗಳ್ಳ ಕೃಷ್ಣನ ಕರೆಯುತ್ತಿದ್ದರು ‖455‖ |
| ಕುಂಬಕುಚದ ನಾರಿಯರು ತಂಬಿಗುರುಳ ಸಂತೈಸುತ್ತ<br>ಗೋವಿಂದನ ನೋಡಬೇಕೆನುತ್ತ ಬಂದರು ‖456‖ |
| ತಿಂಗಳ ಬಾಣಂತಿಯರು ಆರು ತಿಂಗಳ ಗರ್ಭಿಣಿಯರು<br>ರಂಗನ ನೋಡಬೇಕೆನುತ್ತ ಬಂದರು ‖457‖ |
| ಹತ್ತು ಎಂಟು ಸಾವಿರ ವರುಷ ಕಷ್ಟಪಟ್ಟು ತಪವಮಾಡಿ<br>ನೀರಿಗಿಂದಿತ್ತೆನು ಮಗನ ಎಂದಳು ‖458‖ |
| ಆರು ಏಳು ಸಾವಿರ ವರುಷ ಕಷ್ಟಪಟ್ಟು ತಪವ ಮಾಡಿ<br>ನೀರಿಗಿಂದಿತ್ತೆನು ಮಗನ ಎಂದಳು ‖459‖ |
| ಸಾವಿರ್ವರುಷ ಮಾಡಿದ ತಪವು ಇಷ್ಟಾಯಿತೆಂದು<br>ಬಾಯ ಬಡಿದು ಬಡಿದು ಗೋಪಿ ಅಳುತಲಿದ್ದಳು ‖460‖ |
| ಹೆತ್ತವಳು ಎಂದು ಎನ್ನ ಹತ್ತಿರಕ್ಕೆ ಬಾರದೆ<br>ಸರ್ಪನ ತುಳಿವರೇನಪ್ಪ ಎಂದಳು ‖461‖ |
| ಪಡೆದವಳೆಂದೆನ್ನ ಒಡನೆ ಮಾತಾಡದೆ<br>ಮಡುವಿಗೆ ಧುಮುಕುವರೆ ಮಗನೆ ಎಂದಳು ‖462‖ |
| ಪಟ್ಟಾವಳಿಯುಟ್ಟುಕೊಂಡು ಬಟ್ಟ ಮುತ್ತ ಕಟ್ಟಿಕೊಂಡು<br>ಕೃಷ್ಣ ಎನ್ನಪ್ಪ ಬಾರೆಂದೆಶೋದೆ ‖463‖ |
| ಬಲರಾಮನ ಕೂಡೆ ಹೋದರೆ ಬಾರವು ವಿಪತ್ತುಗಳು<br>ಮಗನೆ ನೀನೊಬ್ಬನ್ಹೋಗಿ ಮಡಿದಿ ಎಂದರು ‖464‖ |

| |
|---|
| ತಾಯ ಹಂಬಲಿಕೆಯನ್ನ ಕೇಳಿದ ಬಲರಾಮನು<br>ಬಾಲಕೃಷ್ಣಗೆ ದಾವ ಭಯವು ಬಾರದೆಂದನು ॥465॥ |
| ಕುಂಡಲದ ಕಿವಿಯವನು ನಂದಗೋಪ ಬಂದು ತನ್ನ<br>ಕಂದನ ಕಾಣದೆ ಕರೆಯುತ್ತಿದ್ದನು ॥466॥ |
| ಹತ್ತೆಂಟು ಕಾಲಕೆ ಕೃಷ್ಣ ನಿನ್ನ ಪಡೆದೆನು<br>ಕೃಷ್ಣ ಬಾರೊ ಮಗನೆ ಎಂದು ಕರೆಯುತ್ತಿದ್ದನು ॥467॥ |
| ಆರೇಳು ಕಾಲಕೆ ಬಾಲ ನಿನ್ನ ಪಡೆದೆನು<br>ಬಾಲ ಬಾರೊ ಮಗನೆ ಎಂದು ಕರೆಯುತ್ತಿದ್ದನು ॥468॥ |
| ತೊಟ್ಟಿಲೊಳಗೆ ಆಡುವಾಗ ಅಷ್ಟು ದೈತ್ಯರನ್ನ ಕೊಂದಿ<br>ಕಂದ ಬಾರೊ ಮಗನೆ ಎಂದು ಕರೆಯುತ್ತಿದ್ದನು ॥469॥ |
| ಚಂಡು ಬುಗುರಿಯಾಡುವಾಗ ಹಿಂಡು ದೈತ್ಯರನ್ನ ಕೊಂದಿ<br>ಕಂದ ಬಾರೊ ಮಗನೆ ಎಂದು ಕರೆಯುತ್ತಿದ್ದನು ॥470॥ |
| ಸೃಷ್ಟಿ ಸ್ಥಿತಿ ಲಯಗಳಿಗೆ ಕರ್ತು ನೀನೆಂಬರೊ<br>ಎನ್ನಪ್ಪಗೊಂದಿಷ್ಟು ಶಕ್ತಿ ಪುಟ್ಟದ್ದೋಯಿತೊ ॥471॥ |
| ವಿಷದ ಮಡುವಿನೊಳಗೆ ಬಿದ್ದು ಕುಸುಮನಾಭ ಮಡಿದರೆ<br>ಹಸಗೆಟ್ಟ ನಮಗ್ಯಾರು ಪೋಷಕರಿಲ್ಲವಲ್ಲೋ ॥472॥ |
| ತಾಯ ಹಂಬಲಿಕೆಯನು ಕೇಳಿದನು ಕೃಷ್ಣನು<br>ನಾಗನ ಹೆಡೆಯ ಮೇಲೆ ನಾಟ್ಯವಾಡಿದ ॥473॥ |
| ತನ್ನ ಮಡು ಕಳಕಿತೆಂದು ಪನ್ನಂಗ ಕೋಪದಿಂದ<br>ಚೆನ್ನಾಗಿ ಕೃಷ್ಣನ ಕಟ್ಟಿ ಬಿಗಿದು ಸುತ್ತಿದ ॥474॥ |
| ಬಿಗಿದು ಸುತ್ತಿದ ಸರ್ಪವನ್ನ ಬಿಡಿಸಿಕೊಂಡು ಶ್ರೀಕೃಷ್ಣ<br>ಹೆಡೆಗಳ ಮೇಲೆ ನಿಂತು ನಾಟ್ಯವಾಡಿದ ॥475॥ |
| ಆ ಕಾಲನೂರುತ್ತ ಈ ಕಾಲನೆತ್ತುತ್ತ<br>ಪಾತ್ರದಿಂದ ಕುಣಿದ ನಮ್ಮ ಪರಮಾತ್ಮನು ॥476॥ |
| ಒಂದು ಕಾಲನೂರುತ ಮತ್ತೊಂದು ಕಾಲನೆತ್ತುತ<br>ಚೆಂದದಿಂದ ಕುಣಿದ ನಮ್ಮ ನಂದಕಂದನು ॥477॥ |
| ನಾಗನ ಹೆಡೆಯ ಮೇಲೆ ನಾಟ್ಯವಾಡುತ್ತಿರಲು ಕಂಡು<br>ತಾಳ ಮದ್ದಳೆಗಳು ಧಿಮಿ ಧಿಮಿಕೆಂದವು ॥478॥ |
| ಸರ್ಪನ ಹೆಡೆಯ ಮೇಲೆ ನಾಟ್ಯವಾಡುತ್ತಿರಲು ಕಂಡು<br>ಪುಷ್ಪವೃಷ್ಟಿ ಕರೆದರೆಲ್ಲ ದೇವತೆಗಳು ॥476॥ |

| |
|---|
| ಧರೆಯ ಭಾರವ ತಾಳಿದ ಶೇಷ ಹರಿಯ ಭಾರವ ತಾಳಲಾರದೆ<br>ಹೊರಳಿ ಆಚೆ ಈಚೆಗೆ ಕಂಗೆಡುತಲಿದ್ದನು ॥480॥ |
| ಕಾಳಿಂಗನು ವಿಷವ ಕಾರಿ ಕಂಗೆಟ್ಟು ಒರಲುತ್ತಿರಲು<br>ನಾಗಪತ್ನಿಯರು ತುತಿಸಿದರು ನಾರದವರದನ ॥481॥ |
| ಉನ್ನತದ ಕಾಳಿಂಗನ ರಕ್ಷಿಸಯ್ಯ ನೀನೆಮಗೆ<br>ಮುತ್ತೈದೆತನವ ಕೊಡು ಭಕ್ತವತ್ಸಲ ॥482॥ |
| ಕಂದ ಕಷ್ಟದಿಂದ ಕರೆಯೆ ಕಂಭದಿಂದುದಿಸಿ ಬಂದ<br>ಕಂದ ನೀ ಕಾಯೊ ನಮ್ಮ ವಾಲೆ ಭಾಗ್ಯವ ॥483॥ |
| ಎಲ್ಲ ತಲ್ಲಣಿಸಿ ಲಕ್ಷ್ಮೀ ಗೊಲ್ಲರ ಕೂಡಿಕೊಂಡು<br>ವಲ್ಲಭ ನೀ ಕಾಯೊ ನಮ್ಮ ವಾಲೆ ಭಾಗ್ಯವ ॥484॥ |
| ಅಂದು ನಾಗಪತ್ನಿಯರು ಗೋವಿಂದನ ಸ್ತುತಿಸುತಿರಲು<br>ಕಾಳಿಂಗನ ಹೆಡೆಯ ಬಿಟ್ಟು ತಡಿಗೆ ಬಂದನು ॥485॥ |
| ಕಾಳಿಂಗ ಕಮಲನಾಭನ ಪಾದಕೆರಗಿ ಸ್ತುತಿಯ ಮಾಡಿ<br>ಬಹಳ ಅಪರಾಧವನ್ನು ಕ್ಷಮಿಸಬೇಕೆಂದ ॥486॥ |
| ಅಸುರ ರೂಪಿನಿಂದ ನಾನು ಅರಿಯದೆ ಕಟ್ಟಿದೆನು<br>ಕುಸುಮನಾಭ ಕಾಯೊ ಈ ವಿಷದ ಹುಳವನು ॥487॥ |
| ತನ್ನ ಪಾದ ಶಿರದಲ್ಲಿಟ್ಟು ಇನ್ನು ಗರುಡನ ಭಯವೇನಿಲ್ಲ<br>ಪನ್ನಂಗ ಸೇರು ನಿನ್ನ ರಮಣ ದ್ವೀಪವ ॥488॥ |
| ಕಾಳಿಯ ಅರಮನೆಗೆ ಕಳುಹಿ ನೀರ ನಿರ್ಮಲ ಮಾಡಿ<br>ಕಾಳಿಂದಿಯ ದಡೋದಿ ಬಂದು ನಿಂದನಾಗಲೇ ॥489॥ |
| ವಾರಿಧಿಯಲಿ ಆಡಿದವಗೆ ನೀರಗಂಡ ತಪ್ಪಿತೆಂದು<br>ಆರತಿಯ ತಂದು ನಿವಾಳಿಸಿದರು ॥490॥ |
| ಸರ್ಪನ ಕೈಯೊಳಗೆ ತಪ್ಪಿ ಬಂದ್ಯೊ ಮಗನೆ ಎಂದು<br>ಎನ್ನಪ್ಪ ಬಾರೆಂದು ಗೋಪಿ ಅಪ್ಪಿಕೊಂಡಳು ॥491॥ |
| ಕಿಚ್ಚಿನ ರೂಪಿನಿಂದ ಬಂದು ಸುತ್ತ ಪರಿಸ್ತರಣೆ ಹಾಕಿ<br>ಹತ್ತಿರಲಗ್ನಿ ಸುಡುತ್ತಿರಲು ಕಂಡನು ॥492॥ |
| ಎಲ್ಲರೂ ತಲ್ಲಣಿಸಿ ಗೊಲ್ಲರ ಕೂಡಿಕೊಂಡು<br>ವಲ್ಲಭ ನೀ ಕಾಯೊ ಎಂದು ಮೊರೆಯ ಹೊಕ್ಕರು ॥493॥ |
| ಬೆದರಿದ ಗೋಪಾಲಕರಿಗೆ ಮುಚ್ಚಿ ನಿಮ್ಮ ಕಂಗಳೆಂದು<br>ಖಿಚ್ಚನೆಲ್ಲ ನುಂಗಿದನು ಅಚ್ಯುತನಾಗ ॥494॥ |

| |
|---|
| ಅಂಗಿರಸನ ಶಾಪದಿಂದ ಗಂಧರ್ವ ಅಜಗರನಾಗಿ<br>ನಂದಗೋಪನ ವನದೊಳಗೆ ಬಂದು ಬೀಳಲು ‖495‖ |
| ಮುದ್ದು ಕೃಷ್ಣನ ಪಾದಗಳಿಗೆ ಬಿದ್ದ ಭಕ್ತರೂಪಿನಿಂದ<br>ಅಲ್ಲಿದ್ದನೆ ದುಷ್ಟನೆಂದು ನೋಡುತ್ತಿದ್ದರು ‖496‖ |
| ತುಪ್ಪ ಅನ್ನವನ್ನೆ ಉಂಡು ಮಕ್ಕಳೊಡನೆ ಆಡದೆ<br>ಸರ್ಪನ ತುಳಿವರೆನ್ನಪ್ಪನೆಂದಳು ‖497‖ |
| ಹಾಲು ಅನ್ನವನುಂಡು ಬಾಲರೊಡನೆ ಆಡದೆ<br>ಕಾಡಗಿಚ್ಚ ನುಂಗುವರೆ ಮಗನೆ ಎಂದಳು ‖498‖ |
| ಅತ್ತ ಇತ್ತಲ್ಹೋಗದೆ ಎನ್ಹತ್ತಿರ ಇರು ನೀನೆಂದೆ<br>ಕತ್ತಲಾಗದ ಮುನ್ನ ಮನೆಗೆ ಬರುವುದೆಂದಳು ‖499‖ |
| ನಂದಗೋಪ ಕೃಷ್ಣನಿಗೆ ಅಂದು ಬುದ್ಧಿ ಹೇಳುತಿರಲು<br>ಸಂದೇಹ ಬಿಡಿಸುವೆನೆಂದು ಬಂದ ನಾರದ ‖500‖ |
| ಬಂದ ಮುನಿಗೆ ಷೋಡಶೋಪಚಾರವೆಲ್ಲವನ್ನು ಮಾಡಿ<br>ಕುಶಲ ಪ್ರಶ್ನೆ ಕೇಳಿದನೆ ನಂದಗೋಪನು ‖501‖ |
| ಭೂಮಿಭಾರ ಇಳುಹಲೆಂದು ರಾಮಕೃಷ್ಣರವತರಿಸೆ<br>ನಾನು ಅವರ ದರ್ಶನವ ಮಾಡಬಂದೆನು ‖502‖ |
| ವಸುಧೆ ಭಾರ ಇಳುಹಲೆಂದು ವಸುದೇವನ ಮನೆಯೊಳಗೆ<br>ಶಿಶುರೂಪ ಧರಿಸಿದ ಶ್ರೀಕೃಷ್ಣನಾಗಲೆ ‖503‖ |
| ಕಂದನ ರೂಪು ಧರಿಸಿದ ಗೋವಿಂದನ ಎತ್ತಿಕೊಂಡು<br>ಬಂಧನವ ಕಾಳಿಂದಿ ದಾಟಿ ಇಲ್ಲಿಗೆ ‖504‖ |
| ನಿನ್ನ ಸ್ತ್ರೀ ಯಶೋದೆ ಕನ್ನಿಕೆಯ ಪಡೆದಿರಲು<br>ಪನ್ನಂಗಶಯನನಲ್ಲಿ ಇಟ್ಟು ಹೆಣ್ಣನೊಯ್ದನು ‖505‖ |
| ಪನ್ನಂಗ ಪರಮಾತ್ಮ ಬಲರಾಮ ಶ್ರೀಕೃಷ್ಣ<br>ನಿನ್ನ ಸುತರು ಎಂದು ಬುದ್ಧಿ ಮನದಿ ಮಾಡದೆ ‖506‖ |
| ಆದ್ಯಂತ ಜ್ಞಾನ ಸಾಮೀಪ್ಯ ಆಗಬಾರದೆಂದು<br>ಪುತ್ರಭಾವ ವಹಿಸಿ ಬಂದು ಪಾದಕೆರಗಿದ ‖507‖ |
| ಬಂದ ಮಧುರೆಗಾಗ ನಾರದ ಮುನಿಯ ಕಂಡು ಕಂಸ<br>ವಂದಿಸಿ ಕಾರ್ಯವೇನೆಂದು ಕೇಳಿದು ‖508‖ |
| ಮಂದಮತಿಯು ಕಂಸ ನೀನು ಓಂದು ವ್ಯಾಪಾರವರಿಯೆ<br>ಹಿಂದಕೆ ವಸುದೇವ ಮಾಡಿದ ಮಾಟಂಗಳ ‖509‖ |

| |
|---|
| ಎಂಟನೆಯ ಮಗನು ನಿನಗೆ ಕಂಟಕನು ಹುಟ್ಟುತ್ತಿರಲು<br>ನಿನ್ನ ವಂಚಿಸಿ ಒಯ್ದು ಗೋಕುಲದಲ್ಲಿಟ್ಟನು ॥510॥ |
| ಅವನು ಬೆಳೆದು ಮಥುರೆಯಲ್ಲಿ ನಿನ್ನ ಕೊಲ್ಲುವೆನೆಂದು<br>ಇದನರಿತುಕೊಂಡಿರೆಂದು ಮುನಿಯು ಪೇಳ್ದನು ॥511॥ |
| ಉಗ್ರಸೇನನಲ್ಲಿ ನಿನಗೆ ಉತ್ಪತ್ತಿಯೇ ಇಲ್ಲ ಕೇಳು<br>ಆದ್ಯಂತವಿಲ್ಲವ ಮುನಿಯು ಪೇಳುತ್ತಿದ್ದನು ॥512॥ |
| ಜನನಿ ಋತುಸ್ನಾನವ ಮಾಡಿ ವನದೊಳಗೆ ಬರುತಿರಲು<br>ನೆರೆ ಮೊಸದಿಂದ ಗಂಧರ್ವ ಬಂದನು ॥513॥ |
| ರಾಯನ ರೂಪು ಧರಿಸಿಕೊಂಡು ತಾಯ ಮುಂದೆ ನಿಂದಿರಲು<br>ಕ್ರೋಧದಿಂದ ಶಾಪವನ್ನು ಕೊಡಲು ಹೋದಳು ॥514॥ |
| ಶಾಪವನ್ನು ಕೊಡಲು ಬೇಡ ಶೌರ್ಯವುಳ್ಳ ಮಗನು ನಿನಗೆ<br>ಜನಿಸುವನು ಕ್ಷಮಿಸೆಂದು ಹೇಳಿ ಹೋದನು ॥515॥ |
| ಮಾತೃ ಅಲ್ಲ ದೇವಕಿಗೆ ಮಾತುಳನಲ್ಲ ಕಂಸ<br>ಮಾತೆ ಅನ್ಯತ್ರದಿಂದ ಪಡೆದಳೆಂದನು ॥516॥ |
| ವನಗಳ ಮಧ್ಯದಲ್ಲಿ ತುರುಗಳ ರಕ್ಷಿಸುತ್ತ<br>ಮದನಗೋಪಾಲ ಕೊಳಲನೂದುತಿದ್ದನು ॥517॥ |
| ಕೊಳನ ಧ್ವನಿಗೆ ಪಕ್ಷಿ ಜಾತಿಗಳೆಲ್ಲ ಮುಚ್ಚಿ ಕಣ್ಣ<br>ಮುನಿಗಳಂತೆ ತಾವು ಕುಳಿತು ಕೋಳುತಿದ್ದವು ॥518॥ |
| ರಂಗನ ಕೊಳಲ ಧ್ವನಿಗೆ ಸಾರಂಗ ಎರಳೆ ಹುಲ್ಲೆ<br>ದೇಶಂಗಳ ಬಿಟ್ಟು ಭ್ರಮಿತವಾಗುತಿದ್ದುವು ॥519॥ |
| ಗೋವಿಂದನ ಕೊಳಲ ಧ್ವನಿಗೆ ಗೋವಿನ ಹಿಂಡುಗಳು<br>ಮೇವು ನೀರು ಬಿಟ್ಟು ಕಿವಿಯಲ್ಲಾ ಲೈಸಿದವು ॥520॥ |
| ಹರಿಯ ಕೊಳಲ ಧ್ವನಿಯ ಕೇಳಿ ಹರಿಯುತ್ತಿದ್ದ ಯಮುನಾದೇವಿ<br>ಸುಳಿಗಳ ನೆವದಿ ನಿಂತು ಕೇಳುತ್ತಿದ್ದಳು ॥521॥ |
| ಕೌಸ್ತುಭದಾ ಬೆಳಕಿಗೆ ಸೂರ್ಯ ಉದಿಸಿದನೆಂದು<br>ತಾವರೆಗಳು ಅರಳಿದುವು ಚಕೋರಗಳು ನಲಿದುವು ॥522॥ |
| ಹರಿಯ ನಖದ ಬೆಳಕಿಗೆ ಬೆಳದಿಂಗಳು ಬಂದಿತೆಂದು<br>ಭ್ರಮಿಸುತಿದ್ದವೆ ಚಂದ್ರಕಾಂತಿ ಪ್ರಭೆಗಳು ॥523॥ |
| ಸಿರಿದೇವಿ ತಾನು ಒಂದು ಬಿದುರು ರೂಪಿನಿಂದ ಬಂದು<br>ಹರಿಯ ವದನ ಶ್ರುತಿಯ ಪಾನ ಮಾಡುತಿದ್ದಳು ॥524॥ |

| |
|---|
| ಶ್ರೀ ಹರಿಯ ವದನಾಮೃತ ಪಾನವನ್ನು ಮಾಡುವುದಕೆ<br>ಏನೇನು ಸುಕೃತಗಳ ಮಾಡಿತೆಂದರು ॥525॥ |
| ಕೇರಿಗಳ ಬಳಿದು ಪನ್ನೀರುಗಳನ್ನೆ ತಳಿದು<br>ಸಾಲು ದೀವಿಗಿಟ್ಟ ಸಂಭ್ರಮವ ಕಂಡರು ॥526॥ |
| ರಂಗ ಬೀದಿಯಲ್ಲಿ ಬರೆ ಮಂಗಳಾರತಿಗಳು<br>ಕಂಗಳ್ಗಬ್ಬವಾಯಿತು ಅಂಗನೆಯರಿಗೆ ॥527॥ |
| ರಂಗನ ಮುಖಾಂಬುಜವ ಕಂಗಳೆಂಬ ಭೃಂಗಗಳಿಂದ<br>ಅಂಗನೆಯರು ಪಾನ ಮಾಡಿ ಧನ್ಯರಾದರು ॥528॥ |
| ಪಶುಗಳ ಮಧ್ಯದಲ್ಲಿ ವೃಷಭಗಳು ಓಡುತಿರಲು<br>ಹಸುಳೆ ಕಂಡು ಹಾಲು ಕಾರಿ ಚಿಮ್ಮುತ್ತಿದ್ದುವು ॥529॥ |
| ಪಶುಗಳ ಪಾಲಿಸಿಕೊಂಡು ಬಿಸಜಾಕ್ಷ ಮನೆಗೆ ಬರಲು<br>ಯಶೋದೆ ಉದ್ದು ಬೇವು ಹಾಕಿ ಎತ್ತಿಕೊಂಡಳು ॥530॥ |
| ಏಳು ಗೂಳಿಯ ಕಟ್ಟಿ ಸೋದರತ್ತೆಯ ಮಗಳು<br>ನೀಳಾದೇವಿ ಮದುವೆಯಾದ ಬಾಲಕೃಷ್ಣನು ॥531॥ |
| ಮುಂಜಿಯ ಪೂರ್ವದೊಳ್ಗರಿಯ ಸಂಗಮವಾಗಲೆಂದು<br>ಇಂದಿರೇಶನ ತಪಿಸೆ ಕಾಳಂದಿ ರಮಣಿಯು ॥532॥ |
| ಹೇಮಂತ ಋತುವಿನಲ್ಲಿ ಕಾಂತೆಯರೆಲ್ಲರು<br>ಕಾಂತ ಕೃಷ್ಣನ ಕಂಡು ವಿನಯ ಮಾಡುತಿದ್ದರು ॥533॥ |
| ನಂದಗೋಪ ಕೃಷ್ಣ ತಮ್ಮ ಗಂಡನಾಗಬೇಕೆನುತ<br>ಅಂಗನೆಯರು ಗೌರಿದೇವಿಯ ಪೂಜಿಸಿದರು ॥534॥ |
| ಸೀರೆಗಳ ಬಿಚ್ಚಿ ನಿರದಡದಲ್ಲಿಟ್ಟು ಅವರು<br>ಮಾಧವನ ಮನದೊಳಗೆ ನೆನೆವುತಿದ್ದರು ॥535॥ |
| ಮೌನಗೌರಿ ಪೂಜೆಗಳ ಮಾಡಬೇಕೆಂದೆನುತ<br>ನೀರೊಳಗೆ ಇಳಿದರು ನಾರಿಯರೆಲ್ಲರು ॥536॥ |
| ಅಷ್ಟರೊಳಗೆ ಕೃಷ್ಣನವರು ಬಿಚ್ಚಿಟ್ಟ ಉಟ್ಟ ಸೀರೆ<br>ಕಟ್ಟಿ ಸೆಳೆದು ಮೆಲ್ಲನೊಂದು ತರುವನೇರಿದ ॥537॥ |
| ಮಿತ್ರೆಯರ ಸೀರೆಗಳ ಕೃಷ್ಣ ಮೊಟ್ಟೆಕಟ್ಟಿಕೊಂಡು<br>ಕಷ್ಟಗೊಳಿಸಬೇಕೆಂದು ತರುವನೇರಿದ ॥538॥ |
| ಅಂಗನೆಯರ ಸೀರೆಗಳ ರಂಗ ಮೊಟ್ಟೆಕಟ್ಟಿಕೊಂಡು<br>ಭಂಗಪಡಿಸುವೆನೆಂದು ತರುವ ಏರಿ ಕುಳಿತನು ॥539॥ |

| |
|---|
| ಅಂಬರದಿ ಸುರರು ಎಲ್ಲ ಅಂಜಿ ಓಡಿ ಹೊದುತಿರಲು<br>ಕಂಜಾಕ್ಷಿ ನಕ್ಕು ಕೈಯನ್ನೊಯ್ದು ನಿಂತಳು ॥540॥ |
| ಉಡುವ ಸೀರೆಗಳನೊಯ್ದು ತರುವನೇರಿಕೊಂಡರೆ<br>ಒಡೆಯರಿಲ್ಲವೊ ಜಗಕೆ ರಂಗನೆಂದು ಕೇಳಲು ॥541॥ |
| ಏನನೆಂದರು ನಿಮ್ಮ ಮಾನಭಂಗ ಮಾಡದೇ<br>ನಾನು ಬಿಡಲಾರೆನೆಂದು ಹೇಳುತಿದ್ದನು ॥542॥ |
| ಪೋಕಾಟದ ನುಡಿಯ ಕೇಳಿ ಭೂಕಾಂತದೇವನೊಡನೆ<br>ನಾಚಿ ನುಡಿಯಲರಿಯದೆ ಸುಮ್ಮನಿದ್ದರು ॥543॥ |
| ಕುತ್ತಿಗುದ್ದ ನೀರೊಳಗೆ ಮಡದಿಯರು ನಿಂತುಕೊಂಡು<br>ಕೃಷ್ಣ ಸೀರೆಗಳ ಕೊಡು ಎನುತಲಿದ್ದರು ॥544॥ |
| ಉಡಿಯುದ್ದ ನೀರೊಳಗೆ ಮಡದಿಯರು ನಿಂತುಕೊಂಡು<br>ನಡುಗುತೇವೆ ಸೀರೆಗಳ ಕರುಣಿಸೆಂದರು ॥545॥ |
| ಪಟ್ಟಾವಳಿ ಸೀರೆಗಳು ಉಂಟು ನಿಮ್ಮ ಮನೆಗಳಲ್ಲಿ<br>ಮಿತ್ರೆಯರು ಹೋಗಿ ಉಟ್ಟುಕೊಳ್ಳಿರೆಂದನು ॥546॥ |
| ಮಿತ್ರೆಯರೆಲ್ಲರು ಮುತ್ತುಕದಲೆಯನುಟ್ಟು<br>ಕೃಷ್ಣನ ಕೂಡೆ ಸೀರೆ ಕೇಳುತಿದ್ದರು ॥547॥ |
| ತಾವರೆಯ ಎಲೆಗಳಿಂದ ಭಾಮಿನಿಯರು ಉಟ್ಟುಕೊಂಡು<br>ವಾರಿಜಾಕ್ಷನ ಕೂಡೆ ಸೀರೆ ಕೇಳುತಿದ್ದರು ॥548॥ |
| ಅಂಗನೆಯರೆಲ್ಲ ತಮ್ಮ ತಮ್ಮಂಗಗಳನೆಲ್ಲವ<br>ಅಂಗೈಯಿಂದಲಾಚ್ಛಾದಿಸಿ ಬಂದು ನಿಂತರು ॥549॥ |
| ಕೇಶಂಗಳ ಬಿಚ್ಚಿ ತಮ್ಮಂಗಗಳ ಮರೆಯ ಮಾಡಿ<br>ವಾಸುದೇವನ ಕೂಡೆ ಸೀರೆ ಕೇಳುತಿದ್ದರು ॥550॥ |
| ಒಬ್ಬಳಾ ಹೆಗಲ ಮೇಲೆ ಮತ್ತೊಬ್ಬಳು ಏರಿಕೊಂಡು<br>ಅಬ್ಜಾಕ್ಷನ ಕಡಹದ ಮರವನೇರಿ ಬಂದರು ॥551॥ |
| ಏರಿ ಬರುವುದನು ಕಂಡು ವಾರಿಜನಾಭನು ನಕ್ಕು<br>ಏರಿ ಬಾ ನಿನ್ನ ಧೈರ್ಯ ನೋಡುವೆ ಎಂದನು ॥552॥ |
| ಅರಸನ  ಮಗನು ಎಂದು ಕ್ಷಮಿಸಿಕೊಂಡಿದ್ದೆವು<br>ಸರಸಿಜಾಕ್ಷನ ವೃಕ್ಷಕ್ಕೆ ಮೊರೆಯನಿಟ್ಟರು ॥553॥ |
| ಹೆಂಗಳ ಭಂಗಪಡಿಸೋದು ರಂಗ ನಿನಗೆ ಉಚಿತವೇನೊ<br>ನಂದಗೋಪನ ಮುಂದೆ ಹೇಳಿಕೂಡಿಸುವೆವೆಂದರು ॥554॥ |

| |
|---|
| ಬತ್ತಲೆ ನೀರಿಗಿಳಿದ ತಪ್ಪು ಕಾಯಬೇಕೆನುತ<br>ಎತ್ತಿ ಎರಡು ಕೈಗಳನ್ನು ಮುಗಿಯಿರೆಂದನು ‖555‖ |
| ಅಂಗನೆಯರೆಲ್ಲ ಕಾಳಿಂದಿಯ ದಡದಲ್ಲಿ ನಿಂತು<br>ಬಂದು ಕೈ ಎತ್ತಿ ಕರವ ಮುಗಿಯುತ್ತಿದ್ದರು ‖556‖ |
| ಒಂದು ಕೈಯ ಮುಗಿದರೆ ಇಂದ್ರಾದಿಗಳೊಪ್ಪರು<br>ಚೆಂದಂದಿಂದ ಎರಡು ಕೈಯ ಮುಗಿಯಿರೆಂದರು ‖557‖ |
| ಕಮಲ ಮುಖಿಯರೆಲ್ಲರು ಯಮುನೆಯ ದಡದಲ್ಲಿ ನಿಂತು<br>ಎರಡು ಕೈ ಎತ್ತಿ ಕರವ ಮುಗಿಯುತ್ತಿದ್ದರು ‖558‖ |
| ರಂಗನಂಗ ನೋಡಿ ನಗುತ ಒಂದೊಂದೆ ಸೀರೆಗಳು<br>ಅಂಗನೆಯರ ಮುಖವ ನೋಡಿ ಕೊಡುತಲಿದ್ದನು ‖559‖ |
| ಪಟ್ಟೆ ಸೀರೆ ನಿಮ್ಮದೇ ಪೈಟ್ನಿ ಸೀರೆ ನಿಮ್ಮದೇನು<br>ಪಪ್ಪಳಿ ಸೀರೆ ಇದ್ಯಾರದೆನುತ ಕೇಳಿದ ‖560‖ |
| ಶಾಲಿ ಸೀರೆ ನಿಮ್ಮದೇ ಸಣ್ಣ ಸೀರೆ ನಿಮ್ಮದೇ<br>ಗೋವಳನು ಸೀರೆ ಯಾರದೆನುತಲಿದ್ದನು ‖561‖ |
| ದೇವಗಿರಪಟ್ಟೆ ಸೀರಯಾಳಿ ಮೊದಲಾದ ಸೀರೆ<br>ಚೆನ್ನದ ಕಂಬಿಯ ಸೀರೆ ಸೆರಗು ಬರೆದಿದೆ ‖562‖ |
| ಕೊಟ್ಟ ಸೀರೆಗಳನೆಲ್ಲ ಉಟ್ಟುಕೊಂಡು ನಾರಿಯರು ‖<br>ಕೃಷ್ಣನ ಕಂಡು ಮೋಹಿಸುತಲಿದ್ದರು ‖563‖ |
| ರಾತ್ರಿ ವೇಳ್ಯದಲ್ಲಿ ನಮ್ಮ ಪ್ರೀತಿಪಡಿಸದಿದ್ದರೆ<br>ಮೋಹಿಸಿದ ಫಲವು ಸಿದ್ಧಿಯಾಗದೆಂದರು ‖564‖ |
| ರಾತ್ರಿ ವೇಳ್ಯದಲ್ಲಿ ಬಂದು ಪ್ರೀತಿ ಪಡಿಸುವೆನೆಂದು<br>ಮೋಹಿಸಿದ ಫಲವು ಸಿದ್ಧಿ ಆಗುವುದೆಂದನು ‖565‖ |
| ವೃಂದಾವನದಿಂದ ಉದ್ಯಾನವನಕೆ ಬಾಹೆನೆಂದು ಕೃಷ್ಣ<br>ಅಂದು ಸ್ಮರಿಸೆ ಗೋಪಾಲಕರು ಬಂದರಲ್ಲಿಗೆ ‖566‖ |
| ನಿತ್ಯ ತೃಪ್ತ ವಾಸುದೇವ ಹಸಿದೆನೆಂದು ಅನ್ನಕೆ<br>ಸಪ್ತಯಾಗ ಋಷಿಗಳಿಗೆ ಹೇಳಿ ಕಳುಹಿದ ‖567‖ |
| ಬಂದು ಗೋಪಾಲಕರು ನಿಂದು ಕರಗಳನ್ನೆ ಮುಗಿದು<br>ಗೋವಿಂದ ರಾಮರನ್ನ ಬೇಡಿದರೆಂದರು ‖568‖ |
| ಸ್ನಾನ ಜಪವ ಮಾಡಲಿಲ್ಲ ಹೋಮ ನಿತ್ಯವಾಗಲಿಲ್ಲ<br>ವೇಳ್ಯವಲ್ಲ ಅನ್ನಕೆಂದು ಹೇಳುತಿದ್ದರು ‖569‖ |

| |
|---|
| ಬಂದು ಗೋಪಾಲಕು ನಿಂದು ಕರಗಳನ್ನೆ ಮುಗಿದು<br>ಗೋವಿಂದ ರಾಮರ ಕೂಡೆ ಹೇಳುತಿದ್ದರು ‖570‖ |
| ಸ್ನಾನ ಜಪವ ಮಾಡಲಿಲ್ಲ ಹೋಮ ನಿತ್ಯವಾಗಲಿಲ್ಲ<br>ವೇಳ್ಯವಲ್ಲ ಅನ್ನಕೆಂದು ಹೇಳುತಿದ್ದರೂ ‖571‖ |
| ಪತ್ನಿಶಾಲೆಗ್ಹೋಗಿ ಯಜ್ಞಪತ್ನಿಯರ ಕುರಿತು ಕೇಳಿ<br>ಕೃಷ್ಣರಾಮರನ್ನವ ಬೇಡಿದರೆನ್ನಿ ‖572‖ |
| ಬಂದು ಗೋಪಾಲಕರು ನಿಂದು ಕರಗಳನ್ನೆ ಮುಗಿದು<br>ಕೃಷ್ಣ ರಾಮರನ್ನಗಳ ಬೇಡಿದರೆಂದರು ‖573‖ |
| ಅಂಗನೆಯರು ತಾವು ಎಲ್ಲ ಧನ್ಯರಾದೆವು ಎಂದು<br>ಪನ್ನಂಗ ನರಹರಿಗೆ ಅನ್ನವನಿತ್ತರು ‖574‖ |
| ಶಾಲಾನ್ನ ಸೂಪ ಭಕ್ಷ ಪಾಯಸ ದಧಿ ಘೃತವು<br>ಭಾಮೆಯರು ಉದ್ಯಾನವನಕೆ ಕೊಂಡುಬಂದರು ‖575‖ |
| ಆಗ ಒಬ್ಬ ಮುನಿಯು ಬಂದು ಹೋಗಬೇಡವೆಂದು ತಡೆಯೆ<br>ದೇಹ ನಿನ್ನದೆಂದು ಬಿಟ್ಟು ದೇವರ ಕಂಡಳು ‖576‖ |
| ಹಾರ ಮುಕುಟ ಪೀತಾಂಬರಧಾರ ನೀಲವರ್ಣನ<br>ಕೂಡೆ ಬಲರಾಮನಿರುತಿರಲು ಕಂಡಳು ‖577‖ |
| ತಂದ ಷಡ್ರಸಾನ್ನವ ಗೋವಿಂದಗರ್ಪಿಸಿ<br>ಸಂದರೆಲ್ಲ ಮುಕ್ತಿಗೆ ಸತಿಯರೆಲ್ಲರು ‖578‖ |
| ಅಂದು ಸತಿಯರನ್ನವನ್ನು ತಂದು ಕೊಟ್ಟರೆಂದು ಕೇಳಿ<br>ಮಂದಮತಿಗಳು ನಾವಾದೆವೆಂದರು ‖579‖ |
| ಪ್ರತ್ಯಕ್ಷದಿಂದ ಪರಮಾತ್ಮ ಬೇಡಲು ಅನ್ನವ<br>ಕೊಟ್ಟುದಿಲ್ಲ ನಮ್ಮಷ್ಟು ಭ್ರಷ್ಟರಿಲ್ಲವು ‖580‖ |
| ಕೊಡುವಲ್ಲಿ ಶ್ರೀಕೃಷ್ಣಾರ್ಪಣವೆಂತೆಂದರು<br>ಅನೇಕ ಜನ್ಮದ ಫಲವು ಸಿದ್ಧಿಯಾಯಿತು ‖581‖ |
| ಕಷ್ಟಪಟ್ಟು ಜಪತಪವ ಎಷ್ಟು ಮಾಡಿದರೂ ಶ್ರೀ<br>ವಿಷ್ಣು ಸರ್ವೋತ್ತಮನೆಂಬ ಜ್ಞಾನ ಹುಟ್ಟದ್ಹೋಯಿತು ‖582‖ |
| ಸ್ನಾನ ಜಪವ ತಿಳಿಯಲಿಲ್ಲ ಹೋಮ ನಿತ್ಯವರಿಯಲಿಲ್ಲ<br>ಏನೂ ಅರಿಯದ ಸ್ತ್ರೀಯರಿಗೆ ಜ್ಞಾನ ಬಂದಿತು ‖583‖ |
| ಇಂದ್ರಪರ್ವ ಮಾಡುವೆನೆಂದು ನಂದಗೋಪ ವನಕೆ ತೆರಳೆ<br>ವಂದಿಸಿ ಕಾರ್ಯವೇನೆಂದು ಕೇಳಿದ ‖584‖ |

| |
|---|
| ಗೋವುಗಳಿಗೂ ನಿಮಗೂ ಕ್ಷೇಮವಾಗಬೇಕೆಂದೆನುತ<br>ನಾನು ಪುರಂದರರನ ಪೂಜಿಸುವೆನು ॥585॥ |
| ಇಂದ್ರನಿಂದ ನಿನಗೆ ಕ್ಷೇಮ ಎಂದಿಗೂ ತಿಳಿಯಬೇಡ<br>ತಂದ ಅನ್ನ ಪರ್ವತಕಿಕ್ಕಿ ವಂದಿಸೆಂದನು ॥586॥ |
| ಅಂದ ಮಾತ ಕೇಳಿ ಬೇಗ ನಂದಗೋಪ ಅನ್ನವ<br>ತಂದು ಗೋವರ್ಧನದ ಮುಂದೆ ಸುರಿದನು ॥587॥ |
| ಗೋವರ್ಧನ ಕಿರಿಯ ಮುಂದೆ ಗೋವು ಗೋಪರೆಲ್ಲ ನಿಂತು<br>ತಾವು ಒಂದು ರೂಪಿನಿಂದ ಉಣುತಲಿದ್ದರು ॥588॥ |
| ಕೃಷ್ಣ ಬೆಟ್ಟದ ರೂಪಿನಿಂದ ಅಷ್ಟು ಅನ್ನಗಳ ಉಂಡು<br>ಒಂದಿಷ್ಟು ಭಯಪಟ್ಟುದಿಲ್ಲ ಇಂದ್ರನಿಗಾಗಿ ॥589॥ |
| ಇಂದ್ರನ ದೂತರು ಬಂದು ಆ ಕ್ಷಣದ ನಂದಸುತರು<br>ಎಂಜಲು ಮಾಡಿದರೆಂದು ಹೇಳಲು ॥590॥ |
| ಯಾಕೆ ಇನ್ನು ಅವಗೆ ಅಷ್ಟು ಗೋಕುಲವ ಕರಗಿಸುವೆನೆಂದು<br>ಕೋಪದಿಂದ ಕಾರ್ಮೋಡಗಳ ಕರೆದನು ॥591॥ |
| ಸುರಪತಿಯು ಕೋಪಿಸಿ ಸುರಿದನಾಗ ಏಳು ದಿನ<br>ಹಗಲು ಇರುಳು ಸುರಿಮಳೆಗಳನು ॥592॥ |
| ಬಂದಿತು ಸಿಡಿಲು ಮಿಂಚು ಅಂಧಕಾರವಾಯಿತು<br>ಅಂಬುಧಿ ಕಾಣದೆ ಅಂಬು ತುಂಬಿತು ॥593॥ |
| ಸಿಡಿಲು ಮಿಂಚು ಭೋರಿಡುತ ಗುಡುಗು ಮಿಂಚು ಎರಗಲು<br>ದೆಸೆಗೆಟ್ಟ ಗೋಪಾಲಕರ್ಹರಿಯ ಮೊರೆಯ ಹೊಕ್ಕರು ॥594॥ |
| ಮೊರೆ ಹೊಕ್ಕ ಗೋಪಾಲಕರಿಗೆ ಅಭಯವಿತ್ತು ಶ್ರೀಕೃಷ್ಣ<br>ಕಿರುಬೆರಳಿಂದ ಗೋವರ್ಧನ ಗಿರಿಯನೆತ್ತಿದ ॥595॥ |
| ಗೋವರ್ಧನಗಿರಿಯ ಮುಂದೆ ಗೋವು ಗೋಪರೆಲ್ಲ ನಿಂತು।<br>ಯಾವ ಕಡೆ ಹೋಯ್ತು ಮಳೆ ಎನುತಲಿದ್ದರು ॥596॥ |
| ಕಾರ್ಮೇಘ ಮಳೆಯ ಕರೆಯೆ ಕಂಗೆಡದೆ ಇರಲು ಕಂಡು<br>ಶ್ರೀದೇವನೆಂದು ತಿಳಿದು ದೇವೇಂದ್ರ ಬಂದನು ॥597॥ |
| ಇಂದಿರಾರಮಣನೆಂದು ಒಂದಿಷ್ಟು ಅರಿಯದೆ<br>ಮಂದಮತಿಯು ನಾನಾದೆನೆಂದು ನುಡಿದನು ॥598॥ |
| ಇಂದ್ರ ನಿನಗೆ ಅಸುರಾವೇಶ ಬಂದದ್ಹೋಗಬೇಕೆಂದು<br>ಇಂದು ಹೀಗೆ ಮಾಡಿದೆ ನಾನೆಂದ ರಂಗನು ॥599॥ |

| |
|---|
| ಇಂದಿರಾ ರಮಣನ ಮೇಲೆ ಇಂದ್ರಾದಿ ದೇವತೆಗಳು<br>ಮಂದಾರದ್ಹೂವಿನ ಮಳೆಯ ಕರೆದರು ॥600॥ |
| ಮೈಯ ತೊಳೆದು ಮಡಿಯನುಟ್ಟು ಮಾಲಿಕೆಗಳನ್ನು ಧರಿಸಿ<br>ಸುರಭಿ ಬಂದಳೆ ಸ್ವರ್ಗ ಲೋಕದಿಂದಲಿ ॥601॥ |
| ಬಂಗಾರದ ಕೊಡದೊಳಗೆ ತಂದು ಕ್ಷೀರಾಬ್ಧಿಯ<br>ಇಂದಿರಾರಮಣಗಭಿಷೇಕ ಮಾಡಿದ ॥602॥ |
| ಪೂತನಿ ತೃಣಾವರ್ತ ಕೇಶಿ ಧೇನು ಬಕನ ಕೊಂದ<br>ಆ ಚರಿತ್ರ ಪಾಡಿದರೆ ಅಮರವಂದ್ಯನ ॥603॥ |
| ಕೃಷ್ಣನ ಚರಿತ್ರೆಯನ್ನು ಕೇಳಿದ ಕಂಸ ತನಗೆ<br>ಮೃತ್ಯುವಾಗಿ ಬೆಳೆದ ಸಂದೇಹವಿಲ್ಲವು ॥604॥ |
| ರಂಗನ ಚರಿತ್ರೆಯನ್ನು ಕೇಳಿದನೆ ಕಂಸನು<br>ಕೊಂದು ನಿದ್ರೆಗೈವುದು ಎಂದಿಗೆಂದನು ॥605॥ |
| ಹುಣ್ಣಿಮೆ ಬೆಳದಿಂಗಳಲ್ಲಿ ಕಾಳಿಂದಿಯ ತೀರದಲ್ಲಿ<br>ಕ್ರೀಡಿಸಬೇಕೆನುತ ಕೃಷ್ಣ ವನಕೆ ತೆರಳಿದ ॥606॥ |
| ರಂಗ ಬೇರಂಗಿ ಕೊಡೆ ಪೊಂಗೊಳನೂದುತ್ತ<br>ಅಂಗನೆಯರ ಚಿತ್ತಗಳ ಭ್ರಮಿಸುತ್ತಿದ್ದನು ॥607॥ |
| ಕರಿಯುತಿದ್ದ ಪಶುಗಳ ಕಡೆಗೆ ಬಿಟ್ಟು ಮಕ್ಕಳ<br>ಮೃಡನ ಪ್ರಿಯನಿದ್ದೆಡೆಗೆ ಬರುತಲಿದ್ದರು ॥608॥ |
| ಕಾಲ ಮೇಲೆ ಮಲಗಿಸಿ ಹಾಲನೆರೆಯುತಲಿದ್ದ<br>ಬಾಲಕರ ಕೆಳಗೆ ಹಾಕಿ ಬರುತಲಿದ್ದರು ॥609॥ |
| ಅತ್ತೆ ಮಾವಗಡಿಗೆ ಮಾಡಿ ಉಣಬಡಿಸದ್ಹಾಂಗೆ ಬಿಟ್ಟು<br>ಹಿತ್ತಲ ದಾರಿಯಿಂದ ಬರುತಲಿದ್ದರು ॥610॥ |
| ಭಾವ ಮೈದುನಗಡಿಗೆ ಮಾಡಿ ಮಾವನಿಗೂ ಬಡಿಸದೆ<br>ಬೀದಿಯ ದಾರಿಯಿಂದ ಬರುತಲಿದ್ದರು ॥611॥ |
| ಮಂಚದ ಮೇಲಿನ ಕೆಂಚೆಯರೆಲ್ಲರು<br>ಕಂತುಪಿತನ ಕೊಳಲ ಧ್ವನಿಗೆ ಬರುತಲಿದ್ದರು ॥612॥ |
| ಹಾಸಿಗೆ ಮೇಲಿನ ಕಾಂತೆಯರೆಲ್ಲರೂ<br>ವಾಸುದೇವನ ಕೊಳಲ ಧ್ವನಿಗೆ ಬರುತಲಿದ್ದರು ॥613॥ |
| ಬಚ್ಚಲೊಳಗೆ ಮೀಯ್ವರು ಅಟ್ಟತಳಿಗೆ ನಿಕ್ಕದೆ<br>ಉಟ್ಟ ಉಡಿಗೆಯನ್ನೆ ಬಿಟ್ಟು ಕೆಲರು ಬಂದರು ॥614॥ |

| |
|---|
| ಪಟ್ಟೆ ಮಂಚದ ಮೇಲೆ ಪವಡಿಸಿದಿ ಪತಿಯೊಡನೆ<br>ಇಕ್ಕುತಿದ್ದ ಎಲೆಯ ಬಿಟ್ಟು ಬರುತಲಿದ್ದರು ॥615॥ |
| ತೂಗು ಮಂಚದ ಮೇಲೆ ವಿನೋದದಿಂದ ಪತಿಯೊಡನೆ<br>ಕಾಲನೊತ್ತುತಿದ್ದ ಕೆಲರು ಬರುತಲಿದ್ದರು ॥616॥ |
| ವಾಲೆ ಮೂಗುತಿ ಬೊಟ್ಟು ಕಾರು ಮಾಗಾಯಿ ಇಟ್ಟು<br>ಬಾಲಕನ ಕೊಳಲ ಧ್ವನಿಗೆ ಓಡಿ ಬಂದರು ॥617॥ |
| ಕಂಕಣವ ಕಾಲಿಗಿಟ್ಟು ಚಿಂತಾಕು ಕಿವಿಯಲಿಟ್ಟು<br>ಕಂತುಪಿತನ ಕೊಳಲ ಧ್ವನಿಗೆ ಬರುತಲಿದ್ದರು ॥618॥ |
| ಬಳಲ ಉಡಿಯ ನಾರಿಯರು ಬಳಬಳನೆ ಬಳುಕುತ<br>ಮೃಡನ ಪ್ರಿಯನಿದ್ದೆಡೆಗೆ ಬರುತಲಿದ್ದರು ॥619॥ |
| ಕುಂಭಕುಚದ ನಾರಿಯರು ತುಂಬಿಗುರುಳ ಸಂತೈಸುತ್ತ<br>ಗೋವಿಂದನ ಕೊಳಲ ಧ್ವನಿಗೆ ಬರುತಲಿದ್ದರು ॥620॥ |
| ಪಟ್ಟಾವಳಿಯುಟ್ಟುಕೊಂಡು ಬಟ್ಟ ಮುತ್ತ ಕಟ್ಟಿಕೊಂಡು<br>ಕೃಷ್ಣನ ಕೊಳಲ ಧ್ವನಿಗೆ ಬರುತಲಿದ್ದರು ॥621॥ |
| ಸಾರಾವಳಿಯುಟ್ಟುಕೊಂಡು ಸರದ ಮುತ್ತ ಕಟ್ಟಿಕೊಂಡು<br>ಬಾಲಕನ ಕೊಳಲ ಧ್ವನಿಗೆ ಬರುತಲಿದ್ದರು ॥622॥ |
| ತಿಂಗಳ ಬಾಣಂತಿಯರು ಆರು ತಿಂಗಳ ಗರ್ಭಿಣಿಯರು<br>ಗೋವಿಂದನ ಕೊಳಲ ಧ್ವನಿಗೆ ಬರುತಲಿದ್ದರು ॥623॥ |
| ಕಣ್ಣಿಗೆ ಕಪ್ಪು ಎಂದು ಕದಪಿಗೆ ಹಚ್ಚಿಕೊಂಡು<br>ಕೃಷ್ಣನ ಕೊಳಲ ಧ್ವನಿಗೆ ಬರುತಲಿದ್ದರು ॥624॥ |
| ಸೀರೆಗಳ ಬಿಚ್ಚಿಕೊಂಡು ಕುಪ್ಪಸವ ತೊಟ್ಟುಕೊಂಡು<br>ರಂಗನ ಕೊಳಲ ಧ್ವನಿಗೆ ಬರುತಲಿದ್ದರು ॥625॥ |
| ಅಂಗನೆಯರು ಬರುವುದನ್ನು ಇಂದಿರೇಶ ನೋಡಿ ನಗುತ<br>ಎಂದೂ ಬಾರದ ವನಕೆ ಯಾಕೆ ಬಂದಿರೆಂದನು ॥626॥ |
| ಬಂದರೇನಾಯಿತು ಚೆಂದವಾದ ವನಗಳ<br>ಅಂಗನೆಯರು ನೋಡಿ ಹೋಗಿರೆಂದ ರಂಗನು ॥627॥ |
| ಆದರೇನಾಯಿತು ಬಹಳವಾದ ವನಗಳ<br>ಬೇಗದಿಂದ ನೋಡಿ ಹೋಗಿರೆಂದ ಕೃಷ್ಣನು ॥628॥ |
| ಅರ್ಧರಾತ್ರಿ ವೇಳ್ಯದಲ್ಲಿ ವನಿತೆಯರು ಹಾಸಿಕಿಂದ<br>ಎದ್ದು ಬರುವುದುಚಿತವಲ್ಲವೆಂದ ರಂಗನು ॥629॥ |

| |
|---|
| ಕಾಳರಾತ್ರಿ ವೇಳ್ಯದಲ್ಲಿ ರಾಣಿವಾಸಿಯರು ಎಲ್ಲ<br>ನೀವು  ನಿಮ್ಮ ಮನೆಗಳಿಗೆ ಹೋಗಿರೆಂದನು ॥630॥ |
| ಉಷಃಕಾಲದಲ್ಲಿ ನಿಮ್ಮ ಪತಿಗಳ ಬಿಟ್ಟು ಇಲ್ಲಿ<br>ಪತಿವ್ರತೆಯರು ಬರುವುದು ಉಚಿತವಲ್ಲವು ॥631॥ |
| ರಂಗನಾಡಿದ ಮಾತಿಗೆ ಅಂಗನೆಯರು ತಲೆಯ ಬಾಗಿ<br>ಉಂಗುಷ್ಠದಿಂದ ಧರಣಿ ಬರೆಯುತಿದ್ದರು ॥632॥ |
| ಕಂಗಳ ಜಲವ ತಮ್ಮಂಗೈಯಿಂದಲೊತ್ತುತ್ತ<br>ರಂಗನ ಕೂಡೆ ಮಾತಾಡುತಿದ್ದರು ॥633॥ |
| ಅತ್ತೆ ಮಾವರ ಮಾತು ತಿರಸ್ಕರಿಸಿ ಬಂದೆವು<br>ನಿಷ್ಠುರ ನುಡಿವುದು ಉಚಿತವಲ್ಲವು ॥634॥ |
| ಭ್ರಾತೃ ಬಂಧುಗಳ ಗತಿ ಮಾಡಲಾರರೆನುತ ಲಕ್ಷ್ಮೀಕಾಂತ<br>ಗತಿ ಎನುತು ಬಂದೆವು ಕರುಣಿಸೆಂದರು ॥635॥ |
| ಬಿಟ್ಟು ಲಜ್ಜೆ ನಾಚಿಕೆ ಕೃಷ್ಣಗತಿ ಎನುತ ಬಂದು<br>ಇಷ್ಟಗಳ ಸಲಿಸಬೇಕು ಭಕ್ತವತ್ಸಲ ॥636॥ |
| ಕಾಳಿಂದಿಯ ತೀರದಲ್ಲಿ ಮಳಲ ಮೆಟ್ಟಿಗೆಯ ಮೇಲೆ<br>ಮದನನಯ್ಯ ಗೋಪಿಯರ ಮನವ ಸಲಿಸಿದ ॥637॥ |
| ಯಮುನೆಯ ತೀರದಲ್ಲಿ ಮಳಲ ಮೆಟ್ಟಿಗೆಯ ಮೇಲೆ<br>ಮಧುಸೂದನ ನಾರಿಯರ ಮನವ ಸಲಿಸಿದ ॥638॥ |
| ಅಷ್ಟು ಮಂದಿ ಸ್ತ್ರೀಯರೆಲ್ಲ ಕೃಷ್ಣನಮ್ಮ ವಶವಾದನೆಂದು<br>ಮಿತ್ರೆಯರೆಲ್ಲ ಅಹಂಕರಿಸುತಿದ್ದರು ॥639॥ |
| ಮಿತ್ರೆಯರೆಲ್ಲ ಅಹಂಕರಿಸುತಿರಲು ಅವರ (ಬಿಟ್ಟು)<br>ಅಷ್ಟರೊಳಗೆ ಅಡಗಿದನೆ ಭಕ್ತವತ್ಸಲ ॥640॥ |
| ಹರಿಯ ಕಾಣದಿರುವರಾಗಿ ಅರಸುತ್ತ ಬರುತಿರಲು<br>ಜಡಜಾತಿ ಎಂಬ ಬುದ್ಧಿ ಹುಟ್ಟದ್ಹೋಯಿತು ॥641॥ |
| ಆಲ ಅಶ್ವತ್ಥಗಳಿರ ಪಾಲಾಶ ವೃಕ್ಷಗಳಿರ<br>ಲಕ್ಷ್ಮೀಲೋಲನಾದ ಹರಿಯ ಕಾಣಲಿಲ್ಲವೇ ॥642॥ |
| ಲಕ್ಷ್ಮೀಲೋಲ ಹರಿಯು ಬಂದು ನಾರಿಯಿಂದ ನಲಿದಾಡಿ<br>ನಾರಿಯೊಬ್ಬಳ ಕರೆದುಕೊಕಂಡು ಹೋಗುತಿದ್ದನು ॥643॥ |
| ಲಿಂಬೆ ಕಿತ್ತಳೆಗಳಿರ ಜಂಬು ನೇರಳೆಗಳಿರ<br>ಶಂಬರಾರಿಪಿತನ ನೀವು ಕಾಣಲಿಲ್ಲವೇ ॥644॥ |

| |
|---|
| ಶಂಬರಾರಿ ಪಿತನು ಬಂದು ರಂಭೆಯಿಂದ ನಲಿದಾಡಿ<br>ರಂಭೆಯೊಬ್ಬಳ ಕರೆದುಕೊಂಡು ಹೋಗುತಿದ್ದನು ॥645॥ |
| ಫಲ ಜಾತಿ ಪುಷ್ಪಗಳಿರ ಬಾದರಿ ಗುಜ್ಜರಿ<br>ಬಲರಾಮನ ತಮ್ಮನಿಲ್ಲಿ ಬಂದುದಿಲ್ಲವೇ ॥646॥ |
| ಬಲರಾಮನ ತಮ್ಮ ಬಂದು ಲಲನೆಯಿಂದ ನಲಿದಾಡಿ<br>ಲಲನೆಯೊಬ್ಬಳ ಕರೆದುಕೊಂಡು ಹೋಗುತಿದ್ದನು ॥647॥ |
| ಸಂಪಿಗೆ ವನಗಳಿರ ತಿಂತ್ರಿಣಿ ವೃಕ್ಷಗಳಿರ<br>ಕಂತುಪಿತನ ನೀವಿ ಕಾಣಲಿಲ್ಲವೇ ॥648॥ |
| ಕಂತುಪಿತನು ಬಂದು ಕಾಂತೆಯಿಂದ ನಲಿದಾಡಿ<br>ಕಾಂತೆಯೊಬ್ಬಳ ಕರೆದುಕೊಂಕಡು ಹೋಗುತಿದ್ದನು ॥649॥ |
| ಮಾವು ಮಾತುಳಂಗಗಳಿರ ಬೇವು ಬೇಲದ ವೃಕ್ಷಗಳಿರ<br>ವೇಣುನಾದದ ಹರಿಯ ನೀವು ಕಾಣಲಿಲ್ಲವೇ ॥650॥ |
| ವೇಣುನಾದ ಹರಿಯು ಬಂದು ಜಾಣೆಯಿಂದ ನಲಿದಾಡಿ<br>ಜಾಣೆಯೊಬ್ಬಳ ಕರೆದುಕೊಂಡು ಹೋಗುತಿದ್ದನು ॥651॥ |
| ಅತ್ಯಂತ ಚೆಲುವೆ ಎಂದು ನೆತ್ತೀಲಿ ಏರಿಸಿಕೊಂಬ<br>ಅಚ್ಯುತನ ಕಂಡಿಯೇ ಅಮರ ತುಲಸಿಯೆ ॥652॥ |
| ಅಚ್ಯುತ ಹರಿಯು ಬಂದು ಅರ್ತಿಯಿಂದ ನಲಿದಾಡಿ<br>ಮಿತ್ರೆಯೊಬ್ಬಳ ಕರೆದುಕೊಂಡು ಹೋಗುತಿದ್ದನು ॥643॥ |
| ಮಂದಗಾಳಿ ಬೀಸುವ ಮಾರುತನ ಸುತನೆ ಕೇಳು<br>ನಂದನ ಕಂದನಿಲ್ಲಿ ಬಂದುದಿಲ್ಲವೇ ॥654॥ |
| ನಂದನ ಕಂದನಿಲ್ಲಿ ಗೋವಿಂದ ಬಂದು ನಲಿದಾಡಿ<br>ರಂಭೆಯೊಬ್ಬಳ ಕರೆದುಕೊಂಕಡು ಹೋಗುತ್ತಿದ್ದನು ॥655॥ |
| ತಾನು ಒಬ್ಬ ಹೋದರೆ ತವಕ ಇಲ್ಲದಿದ್ದೆವು<br>ನಾರಿಯೊಬ್ಬಳ ಕೊಂಡು ಹೋದ ತಾಳಲಾರೆವೂ ॥656॥ |
| ಮೊಲ್ಲೆ ಮಲ್ಲಿಗೆಗಳಿರ ಜಲ್ಲಿ ಮುಡಿವಾಳಗಳಿರ<br>ಫುಲ್ಲನಾಭ ಹರಿಯ ನೀವು ಕಾಣಲಿಲ್ಲವೇ ॥657॥ |
| ಫುಲ್ಲನಾಭ ಹರಿಯು ಬಂದು ಮಲ್ಲಿಗೆ ಹೂವು ಕೊಯ್ದು<br>ಚೆಲುವ ಕಂಗಳ ಚದುರೆಗೆ ಮುಡಿಸುತಿದ್ದನು ॥658॥ |
| ಸರದ ಹೂವು ಕಟ್ಟಿ ಅವಳ ತುರುಬಿನೊಳಗೆ ಇಟ್ಟರೆ<br>ನಡೆಯಲಾರದಿದ್ದರವಳ ಹೆಗಲಿಗಿಟ್ಟನು ॥659॥ |

| |
|---|
| ಸಂಪಿಗೇ ಹೂವು ಕೊಯ್ದು ಸೊಂಪಿನಿಂದ ಮುಡಿಸಿ ಅವಳ<br>ವಂಚಿಸಿ ವನದೊಳಗೆ ಬಿಟ್ಟು ಹೋದನು ‖660‖ |
| ಅಷ್ಟು ಮಂದಿಯೊಳಗೆ ಇದ್ದೆ ಕೃಷ್ಣನೆನ್ನ ಕರೆತಂದು<br>ಬಿಟ್ಟು ಹೋದ ವನದೊಳಗೆ ಕೆಟ್ಟೆನೆಂದಳು ‖661‖ |
| ಸರಸಿಜಮುಖಿಯರೆಲ್ಲರು ಅರಸುತ್ತ ಬರುತ್ತಿರಲು<br>ಸರಸಿಜನಾಭನ ಪಾದವ ಕಂಡು ಹರುಷಬಟ್ಟರು ‖662‖ |
| ಶ್ರೀಹರಿಯ ಪಾದದ ಬದಿಯಲ್ಲಿ ಸ್ತ್ರೀಯ ಪಾದವಿರಲು ಕಂಡು<br>ಕಾತರಿಸಿ ಸತಿಯರೆಲ್ಲ ಕವಿದು ನಿಂತರು ‖663‖ |
| ಊರ್ವಿಯ ಮೇಲೆ ಪಾದ ಊರಿರುತ್ತಿರಲು ಕಂಡು<br>ಹೆಗಲಲಿಟ್ಟ ಕೈಯ ಸಂದೇಹವಿಲ್ಲವು ‖664‖ |
| ವಾರಿಜನಾಭಗೆ ನಮ್ಮ ತೋರಿಸಿ ಓಡಿಸಿ ಕರೆದು ತಂದು<br>ತೊರೆಮಗೆ ಎಂದರು ನಾರಿಯರೆಲ್ಲ ‖665‖ |
| ಅಂಬುಜನಾಭನು ಎನ್ನ ನಂಬಿಸಿ ಕರೆದು ತಂದ<br>ಕಂಬುಕಂಠ ಬಿಟ್ಟು ಹೋದ ಕಾಣೆನೆಂದಳು ‖666‖ |
| ಆಕೆಯ ಕಾಣುತ್ತಲರ್ಧವ್ಯಾಕುಲವು ಹೋಯಿತು<br>ಸಾಕು ತಿರುಗಲಾರೆವೆಂದು ಶ್ರಮದಿ ಕುಳಿತರು ‖667‖ |
| ಶ್ರಮದಿ ಕುಳಿತ ನಾರಿಯರ ಮನಸು ನೋಡಬೇಕೆನುತ್ತ<br>ಸರಸಿಜಾಕ್ಷ ವೃಕ್ಷದ ಮರೆಯಲಿದ್ದನು ‖668‖ |
| ಜಯ ಜಯ ಜಯವೆನಲು ಜನ್ಮವಲಭ್ಯ ಮಾಡಿದ<br>ಗುಣಗಳ ಕೊಂಡಾಡಿದರು ಗುಣಸಮುದ್ರನ ‖669‖ |
| ಸರಸಿಜನಾಭನ ಕೂಡೆ ಸರಸ ಕಲಾಪಗಳು<br>ವರುಷಗಳು ನಮಗೆ ಎಂದು ನಿಮಿಷವಾದುವು ‖670‖ |
| ಹೆಂಗಳ ಭಂಗಪಡಿಸೋದು ರಂಗ ನಿನಗುಚಿತವೇನು<br>ಕಂಗಳಿಗೆ ಕಂತುಪಿತನೆ ಕಾಣಿಸೆಂದರು ‖671‖ |
| ಮಡದಿಗಾಗಿ ಅರಸಬಂದ ಚೋರರು ಬೆಚ್ಚಿದಂತೆ ಕಿಡಿವರಾಯುಧವಿಲ್ಲವೆಂದು ಅಡಗಿದೆನೆಂದ ‖672‖ |
| ಚೋರರ ಚೋರನನ್ನು ಕಡಿಯಬಲ್ಲವರು ಯಾರು<br>ಚೋರನಾಗಿ ಇಷ್ಟೊತ್ತು ಕಾಡಿದಿ ನಮ್ಮ ‖673‖ |
| ಕಾಡದೆ ನಮ್ಮ ಕೂಡೆ ಕರುಣಿಸಿ ರಾಸಕ್ರೀಡೆ<br>ಯಾಡಬೇಕೆನುತ ನಾವಪೇಕ್ಷೆ ಪಡುವೆವು ‖674‖ |
| ಇಬ್ಬರಿಬ್ಬರು ಸ್ತ್ರೀಯರಿಗೆ ಒಬ್ಬೊಬ್ಬ ಪುರುಷನಾಗಿ<br>ಮಧ್ಯ ಮಧ್ಯದಲ್ಲಿ ನಿಂತು ಮದನನಯ್ಯನು ‖675‖ |

| |
|---|
| ಬಾಲಕಿಯರೆಲ್ಲರು ಸಾಲು ಸಾಲಾಗಿ ನಿಂತು<br>ಗೋಪಾಲಕೃಷ್ಣನ ಕೂಡೆ ಕೊಲನ್ನೊಯ್ದು ನಿಂತರು ॥676॥ |
| ಕಂಕಣ ಕಾಲಂದುಗೆ ಗೆಜ್ಜೆ ಕಿಂಕಿಣಿ ನಾದಗಳಿಂದ<br>ಕಂತುಪಿತ ಹರಿಯ ಕೂಡೆ ಕೋಲನಾಡಲು ॥677॥ |
| ಸೆರಗು  ಜಾರಿದರೆ ಹೊದಿಸಿ ಬೆವರುಗಳ ಒರಸಿದ<br>ಮುಡಿಗಳ ಒರಸಿದನೆ ಕರಪದ್ಮಗಳಿಂದ ॥678॥ |
| ತಾಂಬೂಲವನಿಕ್ಕುತ ಚುಂಬನವ ಮಾಡುತ<br>ತುಂಬಿಗುರುಳ ಸಂತೈಸುತ್ತ ಬಿಗಿದು ಅಪ್ಪಿದ ॥679॥ |
| ತಂಬುರು ನಾರದರು ಶ್ರುತಿಗೀತವ ಪಾಡುತ್ತ<br>ರಂಭೆಯೂರ್ವಶಿಯರು ನಾಟ್ಯವಾಡುತಿದ್ದರು ॥680॥ |
| ಲೋಕದೊಳಗಿನ ಪೋಕರೆಲ್ಲ ಈ ತೆರದಿಂದಿಹರೆಂದು<br>ಶ್ರೀಕಾಂತನು ಲೌಕಿಕವ ತೋರುತಿದ್ದನು ॥681॥ |
| ಪೋಕಾಟ ಬೇಡ ಶ್ರೀಲೋಕನಾಯಕನೆ ಕೇಳು<br>ನಾಕು ಮುಖದ ಬ್ರಹ್ಮ ನೋಡಿ ನಗುತಲಿದ್ದನು ॥682॥ |
| ಇಂದಿರೇಶ ರಾಸಕ್ರೀಡೆಯಿಂದ ಬಳಲಿದನೆಂದು<br>ಮಂದಮಾರುತನು ಬಂದು ಬೀಸುತಿದ್ದನು ॥683॥ |
| ರಾಸಕ್ರೀಡೆಯನ್ನೆ ಆಡಿ ಗೋಪಿಯರು ಬಳಲಿದರೆಂದು<br>ಶ್ರೀಕಾಂತನು ಜಲಕ್ರೀಡೆಗೆನುತ ನಡೆದನು ॥684॥ |
| ಅಂಗನೆಯರೆಲ್ಲರೂ ಕಾಳಿಂದಿಯೊಳಗಿಳಿದು<br>ರಂಗರಾಮರ ಕೂಡೆಯಾಡುತ್ತಿದ್ದರು ॥685॥ |
| ಕಮಲಮುಖಿಯರೆಲ್ಲರು ಯಮುನೆ ನದಿಯೊಳಗೆ ಇಳಿದು<br>ಹರಿಯ ರಾಮರ ಕೂಡೆಯಾಡುತ್ತಿದ್ದರು ॥686॥ |
| ಕೃಷ್ಣಾದ್ರಿ ಕೊಳವಿಯೊಳಗೆ ಮಿತ್ರೆಯರುದಕವ ತುಂಬಿ<br>ಕೃಷ್ಣರಾಮರ ಮೇಲೆ ಚಿಮ್ಮುತ್ತಿದ್ದರು ॥687॥ |
| ಹವಳಾದ್ರಿ ಕೊಳವಿಯೊಳಗೆ ಹರಿಯು ಉದಕವನೆ ತುಂಬಿ<br>ಹರದಿಯರ ಮೇಲೆ ಕೃಷ್ಣ ಚಿಮ್ಮುತಿದ್ದನು ॥688॥ |
| ವಾರಿಜನಾಭ ಬಾಯೊಳಗೆ ನೀರ ತುಂಬಿಸಿಕೊಂಡು ಅವ<br>ರಾಯಾಯಾ ಸ್ಥಳವ ನೋಡಿ ರಂಗ ಚಿಮ್ಮುತಿದ್ದನು ॥689॥ |
| ರಂಗ ಅಂಗೈಯೊಳಗೆ ತಾಂಬೂಲವ ತುಂಬಿಕೊಂಡು<br>ಅಂಗನೆಯರ ಸ್ತನದ ಮೇಲೆ ಒರಸುತ್ತಿದ್ದನು ॥690॥ |

| |
|---|
| ಶ್ರಮವು ತೋರಿದಂತೆ ಅವಳ ತಲೆ ಹೆಗಲ ಮೇಲೆ ಇಟ್ಟು<br>ಬಹಳ ಚೆಲುವೆ ಎಂದು ಅವಳಿಗೆ ಮುತ್ತು ಕೊಟ್ಟನು॥691॥ |
| ಉಡುವ ಸೀರೆಗಳನು ಎಲ್ಲ ಕರಗಳಿಗೆ ಸುತ್ತನ್ಹಾಕಿ<br>ಮೊರೆಯ ಮೇಲಿನ ನೀರ ಒರಸುತ್ತಿದ್ದನು॥692॥ |
| ಜಲಕ್ರೀಡೆಯನ್ನೆ ಆಡಿ ಗೋಪಿಯರು ಬಳಲದಿರೆಂದು<br>ಪಸರಿಸಿದ ಕೇಶಂಗಳ ತಿದ್ದುತಿದ್ದನು॥693॥ |
| ಜಲಕ್ರೀಡೆಯನ್ನೆ ಆಡಿ ಜಲಜನಾಭನು ದಡಕೆ ಬಂದು<br>ಹೊಳೆವ ಪಟ್ಟಾವಳಿ ದೇವಂಗವನುಟ್ಟನು॥694॥ |
| ಈ ಪರಿ ಜಲಕ್ರೀಡೆಯಾಡಿ ಅಪಾರ ಮಹಿಮ ಕೃಷ್ಣ<br>ಗೋಪಿಯರಿಗೆಲ್ಲ ಉಡುಗರೆ ಕೊಟ್ಟನು॥695॥ |
| ದೇವಗಿರಿ ಪಟ್ಟೆಸೀರೆ ಯಾಳಿ ಮೊದಲಾದ ಶೀರೆ<br>ಚೆನ್ನದ ಕಂಬಿಯ ಶೀರೆ ಬರಹದ ಶೀರೆ॥696॥ |
| ಶೀರಿ ಯಾಳಿ ಮೊದಲಾದ ಶೀರಿ ಚಂದ್ರಗಾವಿಯ<br>ಶೀರಿಗಳ ಉಟ್ಟು ಶೃಂಗಾರವಾದರು॥697॥ |
| ತನ್ನೊಳಗೆ ಸರ್ವದ ತನ್ನ ಸಿರಿಯು ಇದ್ದಂತೆ<br>ಪನ್ನಂಗಶಯನಗೀ ಸ್ತ್ರೀಯರು ಯಾತಕೆಂದರು॥698॥ |
| ಶ್ರೀರಮಣಗೆ ಸ್ತ್ರೀಯರೆಂಬ ಗೊಡವೆ ಒಂದಿಷ್ಟು ಇಲ್ಲ<br>ಹರುಷದಿಂದ ಸಿರಿ ಬರಲು ಧರಿಸಿ ಮೆರೆದನು॥699॥ |
| ಪೂತನಿ ಶಕಟ ತೃಣಾವರ್ತ ಕೇಶಿ ಧೇನು ಬಕನ ಕೊಂದ<br>ಆ ಚತಿತ್ರೆ ಪಾಡಿದರೆ ಅಮರವಂದ್ಯನ॥700॥ |
| ಇಂದಿರಾರಮಣನ ಮೇಲೆ ಇಂದ್ರಾದಿ ದೇವತೆಗಳು<br>ಮಂದಾರದ್ಹೂವಿನ ಮಳೆಯ ಕರೆದರು॥701॥ |
| ಕೃಷ್ಣನ ಚರಿತ್ರೆಯನು ಕೇಳಿದನೆ ಕಂಸನು<br>ಮೃತ್ಯುವಾಗಿ ಬೆಳೆದ ಸಂದೇಹವಿಲ್ಲವು॥702॥ |
| ರಂಗನ ಚರಿತ್ರೆಯನ್ನು ಕೇಳಿದನೆ ಕಂಸನು<br>ಕೊಂದು ನಿದ್ರೆಗೈವುದು ಎಂದಿಗೆಂದನು॥703॥ |
| ಕೇಶಿ ಎಂಬ ದೈತ್ಯನು ವಾಸುದೇವನ ಮುಂದೆ<br>ಜಾತಿ ಅಶ್ವರೂಪ ಧರಿಸಿ ಬಂದು ನಿಂತನು॥704॥ |
| ತುರಗನ ಬಾಯೊಳಗೆ ಹರಿಯು ಕೈಯನಿಕ್ಕುತಿರಲು<br>ಬೆರಗು ಪಟ್ಟುಕೊಂಡು ಗಂಟಲಿಂದ ಸೀಳಿತು॥705॥ |

ಕೇಶಿ ನಾಶವಾಗುತಿರಲು ಸುರರೆಲ್ಲ ನೆರೆದು
ಭೂಸುರರು ಎಲ್ಲ ಶ್ರೀಹರಿಯ ಸ್ತುತಿಸುತಿದ್ದರು ॥706॥

ಪೂತನಿ ಶಕಟ ತೃಣಾವರ್ತ ಕೇಶಿ ಧೇನು ಬಕನ ಕೊಂದ
ಆ ಚರಿತ್ರೆ ಪಾಡಿದರೆ ಅಮರವಂದ್ಯನ ॥707॥

ಇಂದಿರಾ ರಮಣನ ಮೇಲೆ ಇಂದ್ರಾದಿ ದೇವತೆಗಳು
ಮಂದಾರದ್ದೂವಿನ ಮಳೆಯ ಕರೆದರು ॥708॥

ಕೃಷ್ಣನ ಚರಿತ್ರೆಯನ್ನು ಕೇಳಿದನೆ ಕಂಸನು
ಮೃತ್ಯುವಾಗಿ ಬೆಳೆದ ಸಂದೇಹವಿಲ್ಲವು ॥709॥

ರಂಗನ ಚರಿತ್ರೆಯನ್ನು ಕೇಳಿದನೆ ಕಂಸನು
ಕೊಂದು ನಿದ್ರೆಗೈವುದು ಎಂದಿಗೆಂದೆನು ॥710॥

ಆಗ ಕಂಸ ಮಂತ್ರಿಗಳ ಬೇಗ ಕರೆಕಳುಹಿ
ಆಲೋಚನೆಯ ಮಾಡಿ ಹೇಳಿರೆಂದನು ॥711॥

ಆತನ ಮಂತ್ರಿಗಳು ಬೇಕ ಅಕ್ರೂರನ ಕರೆಸಿದರೆ
ದೇವಕೀಸುತನ ಕರೆತಾರೆಂದ ಹೋಗಿ ॥712॥

ಅಂದ ಮಾತ ಕೇಳಿ ಆಗ ಬಂದ ಬೇಗ ಅಕ್ರೂರನು
ಇಂದಿನ ದಿವಸ ಸುದಿವಸವೆಂದನು ॥713॥

ಅಂದಿನಿರುಳು ಅಕ್ರೂರ ಆಲೋಚನೆಯ ಮಾಡುತಿದ್ದ
ಗೋವಿಂದನ ಕಾಂಬೊ ಬೆಡಗು ಇನ್ನೆಂದಿಗಾಗೋದೋ ॥714॥

ವೃಂದಾವನಕೆ ಹೋದರೆ ಇಂದಿರೇಶ ನೋಡಿ ಎನ್ನ
ಬಂದಿಯೊ ಅಕ್ರೂರನೆಂದು ವಂದಿಸುವನೋ ॥715॥

ಮಧುರೆಯಿಂದ ಬಂದೆನೆಂಬ ಮಾತ ಗೇಳುತ್ತ ಎನ್ನ
ವೈರಿ ಎಂದು ಒಳಗೆ ಬಿಡಬೇಡವೆಂಬನೋ ॥716॥

ಜ್ಞಾತಿ ಎಂದು ತಿಳಿದು ತನ್ನ ಪ್ರೀತಿಯಿಂದ ಮಾತನಾಡಿ
ಮಾತಾ ಪಿತರ ಹದನವೇನೆಂದು ಕೇಳ್ವನೊ ॥717॥

ಹರಿಯು ವಿಶ್ವವ್ಯಾಪಕ ಸರ್ವಾಂತರ್ಯಾಮಿ ನೀ
ನರಿಯದ ವ್ಯಾಪಾರ ಉಂಟೇನೆಂದ ಅಕ್ರೂರ ॥718॥

ಅಕ್ರೂರ ಆಲೋಚಿಸುತಿರಲು ಅರುಣೋದಯವಾಯಿತು
ಗಕ್ಕನೆ ಪುರವ ಬಿಟ್ಟು ಹೊರಗೆ ಹೊರಟನು ॥719॥

ಸೂರ್ಯಗರ್ಘ್ಯವನೆ ಕೊಟ್ಟು ಸುಮನದಿಂದಲಕ್ರೂರ
ತೇರನೇರಿ ನಡೆದನು ದಾನಶೂರನು ॥720॥

| |
|---|
| ಮಧ್ಯಮಾರ್ಗದಲಿ ಶಕುನ ಬಿದ್ದಿತು ಶ್ರೀಹರಿಯ ಕಾಂಬೆ<br>ಉದ್ಧಾರವಾಯಿತೆನ್ನ ಉಭಯ ಕುಲವೆಂದನು ॥721॥ |
| ಪಾದರಿ ಗುಜ್ಜರಿ ಸೇವಂತಿಗೆ ಸಂಪಿಗೆ ದುಂಡು<br>ಮಲ್ಲಿಗೆ ಕ್ಯಾದಿಗೆಗಳ ವನವ ಕಂಡನು ॥722॥ |
| ಪಂಕಜಮುಖಿಯರು ಪೋದ ಕುಂಕುಮದ ಧೂಳಯಿಂದ<br>ಅಂಕಿತದ ಪಾದವ ಕಂಡನಕ್ರೂರ ॥723॥ |
| ಪಾದವ ಕಂಡನಕ್ರೂರ ಪಾವನವಾದೆನೆಂದು<br>ಭೂಮಿಯ ಮೇಲೆ ಬಿದ್ದು ಹೊರಳುತಿದ್ದನು ॥724॥ |
| ವೃಂದಾವನದ ಸಮೀಪಕ್ಕೆ ಬಂದನಾಗ ಅಕ್ರೂರ ಗೋ<br>ವಿಂದ ಗೋವ್ಗಳ ಕರಿವ ಚೆಂದ ಕಂಡನಕ್ರೂರ ॥725॥ |
| ರಾಮಕೃಷ್ಣರೆಂಬವರು ಕಾಮಧೇನುವ ಕಟ್ಟಿ<br>ಗೋವುಗಳಿಗೆ ಗ್ರಾಸವ ಕೊಡುತಲಿದ್ದರು ॥726॥ |
| ವಾಲೆ ಮೂಗುತಿ ಕೊಪ್ಪು ಸೀರೆ ಕುಪ್ಪಸ ಹೊಳೆವ<br>ಭಾಮೆ ನಂದನ ಗೋಪಿ ಬಂದು ಕಂಡಳು ॥727॥ |
| ಕಂಡನಾಗ ಅಕ್ರೂರ ನಂದಗೋಪಿ ಚರಣಕೆರಗೆ<br>ಕ್ಷೇಮವಾರ್ತೆಗಳನೆಲ್ಲ ಕೇಳುತಿದ್ದಳು ॥728॥ |
| ದೇವಕೀದೇವಿ ವಸುದೇವ ಉಗರಸೇನರಾಯ<br>ರಾಯ ಕಂಸ ಹದನವೆಂದು ಕೇಳುತಿದ್ದಳು ॥729॥ |
| ಹದನವೆ ಪಟ್ಟಣವೆಂದು ದೃಢಭಕ್ತನು ಹೇಳುತ್ತಿರಲು<br>ರವಿಯ ಅಸ್ತಮಯದಿ ಕೃಷ್ಣ ಕರೆಯುತ್ತಿದ್ದನು ॥730॥ |
| ಕಾಳಿಂದಿಯ ತೀರಕ್ಕೆ ಸಂಧ್ಯಾವಂದನೆಗೆಂದು<br>ರಾಮಕೃಷ್ಣ ಅಕ್ರೂರರು ಬರುತಲಿದ್ದರು ॥731॥ |
| ಕಾಳಿಂದಿಯ ತೀರದಲ್ಲಿ ನಿತ್ಯಕರ್ಮವನ್ನು ಮುಗಿಸಿ<br>ಮೂವರೂ ಅರಮನೆಗೆ ಬರುತಲಿದ್ದರು ॥732॥ |
| ಠಾಣದೀವಿಗೆಯನಿಟ್ಟು ಥಾಲಿ ಹರಿವಾಣ ಬೆಳಗಿ<br>ಮಾಣಿಕದ ಬಟ್ಟಲ ತಂದು ನಡುವೆ ಇಟ್ಟಳು ॥733॥ |
| ಪಾತ್ರಾಭಿಗಾರ ಮಾಡಿ ಪಾಯಸವ ಬಡಿಸಿದರು<br>ಉಪ್ಪು ಉಪ್ಪಿನಕಾಯಿ ಚಟ್ಟಣಿಗಳ ॥734॥ |
| ಉಪ್ಪು ಉಪ್ಪಿನಕಾಯಿ ಹಪ್ಪಳ ಸಂಡಿಗೆ ಮತ್ತೆ<br>ರೋಹಿಣಿಯು ತಂದು ಮುಂದೆ ಬಡಿಸುತಿದ್ದಳು ॥735॥ |

| |
|---|
| ಬಟ್ಟ ಮುತ್ತು ಹೋಲುವ ಬಟುವಿ ಪಾಯಸ ಮತ್ತೆ<br>ನಂದನ ಗೋಪಿ ತಂದು ಬಡಿಸುತಿದ್ದಳು ॥736॥ |
| ಸೂರ್ಯಮಂಡಲ ಹೋಲುವ ಹೋಳಿಗೆ ಗುಳ್ಳೋರಿಗೆ<br>ನಾರಿ ನಂದಗೋಪಿ ತಂದು ಬಡಿಸುತ್ತಿದ್ದಳು ॥737॥ |
| ಚಂದ್ರಮಂಡಲ ಹೋಲುವ ಮಂಡಿಗೆ ದೋಸೆಗಳನು<br>ರಂಭೆ ನಂದನಗೋಪಿ ತಂದು ಬಡಿಸುತಿದ್ದಳು ॥738॥ |
| ಎಡೆಮಾಡಿ ಯಶೋದಾ ದೇವಿ ಷಡ್ರಸಾನ್ನವನ್ನು ಬಡಿಸೆ<br>ಶೋಧಿಸಿ ಎರೆದಳೆ ತಿಳಿ ತುಪ್ಪವ ॥739॥ |
| ಅರಸುಗಳ ಮನೆಯ ಪ್ರಧಾನಿಗಳು ಬಂದಿರಿ<br>ಒಳ್ಳೆ ಊಟಂಗಳನು ಅರಿಯೆವೆಂದರು ॥740॥ |
| ಹಳ್ಳಿಯ ಒಳಗೆ ನಾವು ಗೊಲ್ಲರ ಮಕ್ಕಳು<br>ಕಾಲದ ಊಟಗಳ ಅರಿಯೆವೆಂದರು ॥741॥ |
| ಕಾಮಧೇನವ ಸ್ಮರಿಸಲು ಏನು ಕಡಮ್ಯಾದೀತು<br>ಸ್ವಾಮಿ ನಿನ್ನ ಮಹಿಮೆ ಆಶ್ಚರ್ಯವೆಂದನು ॥742॥ |
| ಕ್ಷೀರಾನ್ನವನ್ನು ಉಂಡು ಆರೋಗಣೆಯ ಮಾಡೆ ಬೇಗ<br>ಕೈಯ ತೊಳೆದು ವರ ತಾಂಬೂಲವಿತ್ತರು ॥743॥ |
| ಪರಿಯಂಕದ ಮೇಲೆ ಪವಡಿಸಿದ ಅಕ್ರೂರನ್ನ<br>ಪಾದವನೊತ್ತಿದರೆ ಪರಮ ಪುರುಷರು ॥744॥ |
| ಮಣಿ ಮಂಚ ಮೇಲೆ ವಿಳ್ಯಗಳ ಮಡಚಿ ಕೊಟ್ಟು<br>ಕ್ಷೇಮ ವಾರ್ತೆಗಳನೆಲ್ಲ ಕೇಳುತಿದ್ದರು ॥745॥ |
| ದೇವಕೀದೇವಿ ವಸುದೇವ ಉಗ್ರಸೇನರಾಯ<br>ಮಾವ ಕಂಸ ಹದನವೇ ಎಂದು ಕೇಳುತಿದ್ದರು ॥746॥ |
| ಹದನವೆ ಪಟ್ಟಣವೆಂದು ದೃಢ ಭಕ್ತನು ಹೇಳಲು<br>ಪರಮ ಸಂತೋಷದಿಂದ ಕೇಳುತ್ತಿದ್ದರು ॥747॥ |
| ಬಂದ ಕಾರ್ಯವೇನಕ್ರೂರ ಎಂದು ಕೃಷ್ಣ ಕೇಳಲು<br>ಎಂತು ಹೇಳಲೆಂದು ಸಂಕೋಚಪಟ್ಟನು ॥748॥ |
| ಸಂಕೋಚವು ಬೇಡವ್ವೈ ಎನ್ನ ಕೂಡೆ ಇರಲು ನೀ<br>ವಂಚನೆ ಇಲ್ಲದೆ ಹೇಳು ಎಂದನು ॥749॥ |
| ಬಿಲ್ಲ ಹಬ್ಬಕ್ಕೆ ನಿನ್ನಲ್ಲಿಗೆ ಕರೆಯ ಕಳುಹಿ<br>ಬಲ್ಲಿದ ಕಂಸ ಕೊಲಿಸಬೇಕು ಎಂದಿರುವನು ॥750॥ |

| |
|---|
| ಹಬ್ಬದ ನೆವದಿ ನಿಮ್ಮಿಬ್ಬರ ಕರೆತರಿಸಿ<br>ಕೊಬ್ಬಿದ ಕಂಸ ಕೊಲಿಸಬೇಕು ಎಂದಿರುವನು ॥751॥ |
| ರಾಷ್ಟ್ರಕ್ಕೆ ಅರ್ಹ ನಮ್ಮ ಮಾತುಳಯ್ಯನ ಮಾತು<br>ಘಾತಿ ಮಾಡಿ ಇರಲಾಗದು ಬರುವೆವೆಂದರು ॥752॥ |
| ಸೋದರ ಮಾವನ ಮಾತು ಮೀರಲಾಗದು ಎಂದು<br>ನಾಳೆಉದಯಕ್ಕೆ ರಥವ ತರಿಸು ಎಂದನು ॥753॥ |
| ನಂದಗೋಪನ ಕರೆದು ತುಂಬಿಸು ಪಾಲ್ಮೊಸರ<br>ಮುಂಜಾನೆ ಎದ್ದು ಮಧುರೆಗ್ಹೋಗಬೇಕೆಂದ ॥754॥ |
| ಅಂದ ಮಾತ ಕೇಳಿ ಬೇಗ ಬಂದನಾಗ ನಂದಗೋಪ<br>ಚೆಂದದಿಂದ ಪಾಲ್ಮೊಸರ ತುಂಬಿಸಿದನು ॥755॥ |
| ಸಾರಥಿ ರಥವ ತಂದು ಸ್ವಾಮಿ ಚಿತ್ತೈಸು ಎಂದ<br>ತಾಯಿ ತಂದೆ ಚರಣಕ್ಕೆ ಎರಗಿದನಾಗಾ ॥756॥ |
| ಪೊಡವಂಟ ಮಕ್ಕಳ ಬಿಗಿದಪ್ಪಿ ತಕ್ಕೈಸಿ<br>ಕಡೆಗಣ್ಣ ಜಲಗಳ ಸುರಿಸುತಿದ್ದರೂ ॥757॥ |
| ಚಿಕ್ಕವರು ರಾಮಕೃಷ್ಣರು ಪಟ್ಟಣದ ಗರ್ತರಿಯರು<br>ಮೆಟ್ಯಾವು ಆನೆ ಕುದುರೆ ಎಂದಳೆಶೋದೇ ॥758॥ |
| ರಾಮಕೃಷ್ಣರಿಗೆ ನೀವು ಯಾವಾಗಲಾದರೂ<br>ವಿಚಾರವನ್ನೆ ಎಣಿಸಬೇಡಿ ಎಂದನಕ್ರೂರ ॥759॥ |
| ಅಕ್ರೂರ ನೀನೆಮಗೆ ಆತ್ಮ ಬಂಧುವಾದರೆ<br>ಗಕ್ಕನೆ ಕಳುಹಿಸುವುದು ಮಕ್ಕಳಾಣೆಯೂ ॥760॥ |
| ಮಾವ ಕಂಸ ಹಬ್ಬವನ್ನು ಮಾಡಿಸಿದ ಮರುದಿನಕೆ<br>ನಾನೇ ಕಳುಹಿಸ್ಯೇನು ವಿಚಾರ ಬೇಡೆಂದನಕ್ರೂರ ॥761॥ |
| ಕಷ್ಟದಿಂದ ರಾಮಕೃಷ್ಣರ ಬಿಟ್ಟು ರೋಹಿಣಿ ಯಶೋದೆಯರು<br>ಕಟ್ಟೆ ಹಂದರದ ಬಾಗಿಲಿಗೆ ಬಂದರು ॥762॥ |
| ರಂಗನಿಲ್ಲದಮರಮನೆ ಅಂಧಕಾರವಾಯಿತು<br>ವೃಂದಾವನವು ನಮಗೆ ಇಂದು ನಿಂದ್ಯವಾಯಿತು ॥763॥ |
| ಗೋವಿಂದನಿಲ್ಲದರಮನೆ ಅಂಧಕಾರವಾಯಿತು<br>ಗೋಕುಲವೆ ನಮಗೆ ಒಂದು ಗೋಡೆಯಾಯಿತು ॥764॥ |
| ಬೆಳಗಾಗುವ ಜಾವದಲ್ಲಿ ಕೆಳದಿಯರು ಮೊಸರುಗಳ<br>ಕಡಿಯುತ್ತ ಪಾಡಿದರೆ ಕಮಲನಾಭನ ॥765॥ |

| |
|---|
| ಕಮಲಮುಖಿಯರ ಧ್ವನಿಯು ಸುರಲೋಕಕ್ಕೆ ಮುಟ್ಟಿತು<br>ಕಡಗ ಕಂಕಣದ ರಭಸ ಜಗಕೆ ತುಂಬಿತು ॥766॥ |
| ದೀಪಂಗಲ ಹಚ್ಚಿಕೊಂಡು ಶ್ರೀಪತಿಯ ಪಾಡುತ್ತ<br>ಗೋಪ ಸ್ತ್ರೀಯರು ಮೊಸರು ಕಡೆಯುತಿದ್ದರು ॥767॥ |
| ಮೊಸರು ಕಡೆದು ನಾರಿಯರು ನೀರಿಗೆ ಹೊರಗ್ಹೋಗುತಿರಲು<br>ಊರ ಮುಂದೆ ಕೃಷ್ಣನ ತೇರು ಕಂಡರು ॥768॥ |
| ಫುಲ್ಲನಾಭನ ರಥವು ಇಲ್ಲಿಗ್ಯಾಕೆ ಬಂದಿತಮ್ಮ<br>ಎಲ್ಲಿಯೋ ಪಯಣವೆಂದು ತಲ್ಲಣಿಸಿದರು ॥769॥ |
| ಎಲ್ಲಿಯ ಪಯಣವಮ್ಮ ಎತ್ತಣ ಹಬ್ಬವಮ್ಮ<br>ಮೃತ್ಯುವಾಗಿ ಅಕ್ರೂರ ಕರೆಯ ಬಂದನು ॥770॥ |
| ಅಕ್ರೂರನೆಂಬ ಪಾಪಿ ಯಾವ ಕಡೆಯಲ್ಲಿರುವನು<br>ಗೋಪಿಯರೆಲ್ಲ ಹೋಗಿ ಅತ್ತು ಬರೋಣ ॥771॥ |
| ಬಾಲಕಿಯರೆಲ್ಲರು ತೇರ ಸುತ್ತ ಮುತ್ತಿಕೊಂಡು<br>ಯಾವಲ್ಲಿಗ್ಹೋದ ರಂಗ ಎನುತಲಿದ್ದರು ॥772॥ |
| ಪಟ್ಟಣಕ್ಕೆ ಹೇಗಿ ನೆಂಟರಿಷ್ಟರನ್ನೆ ಕಂಡು<br>ಗಕ್ಕನೆ ಬರುವೆನೆಂದು ಹೇಳುತಿದ್ದನು ॥773॥ |
| ಪಟ್ಟಣದ ನಾರಿಯರ ಪ್ರೌಢತನವ ಕಂಡರೆ<br>ಬಿಟ್ಟು ಬರಲು ಮನಸು ಉಂಟೆ ಎನುತಲಿದ್ದರು ॥774॥ |
| ಬಾಲ್ಯದಾರಭ್ಯ ಕೂಡಿಯಾಡಿದ ಸ್ನೇಹದಿಂದ<br>ಬಾಹೆನು ನಾನು ನಿಮಗೆ ತಪ್ಪೆನೆಂದನು ॥775॥ |
| ಇಂದುಮುಖಿಯರೆಲ್ಲ ಕೂಡಿ ಸ್ಯಂದಣವ ಸುತ್ತಿಕೊಂಡು<br>ಕೊಂದು ಹೋಗು ಕೃಷ್ಣ ನಮ್ಮನೆನುತಲಿದ್ದರು ॥776॥ |
| ಅವರ ಕಳುಹದನಕ ತನಗೆ ಪಯಣ ಮುಂದಾಗದೆಂದು<br>ಗಕ್ಕನೆ ರಥವ ಬಿಟ್ಟು ಕೆಳಗೆ ಇಳಿದನು ॥777॥ |
| ಬಹಳ ಒಡಂಬಡಿಕೆ ಹೇಳಿ ಬಾಯ ತಾಂಬೂಲ ಕೊಟ್ಟು<br>ನಾಳೆ ಬರುವೆನೆಂದು ಕೆಲರ ಹೇಳಿ ಕಳುಹಿದ ॥778॥ |
| ನಂದಗೋಪನ ಆಣೆ ನಾ ನಿಂದರೆ ನಿಮ್ಮಾಣೆ ಹಾ<br>ಗೆಂದು ಒಡಂಬಡಿಸಿ ಮುಂದೆ ನಡೆದನು ॥779॥ |
| ಕಾಳಿಂದಿಯ ತೀರದಲ್ಲಿ ಸಂಧ್ಯಾವಂದನೆಗೆಂದು<br>ಅಂದು ರಾಮಕೃಷ್ಣಾಕ್ರೂರ ಬರುತಲಿದ್ದರು ॥780॥ |

| |
|---|
| ಅಕ್ರೂರ ನೀರೊಳಗೆ ಮುಳುಗಿ ಅರ್ಘ್ಯಾರ್ಪಣವ ಮಾಡುತಿರಲು<br>ಕೃಷ್ಣರಾಮರ ಕಂಡಾಶ್ಚರ್ಯ ಪಟ್ಟನು ॥781॥ |
| ರಥದ ಮೇಲೆ ರಾಮಕೃಷ್ಣರು ರಾಯರಾಗಿರುತಿರಲು<br>ಮತಿ ಭ್ರಾಂತನಾದೆನೆಂದು ಮರಳಿ ಮುಳುಗಿದ ॥782॥ |
| ಅಂದು ನೀರೊಳಗೆ ಮುಳುಗೆ ಒಂದು ಶೇಷನ ಕಂಡು<br>ಇಂದು ಮುಳುಗೆ ಇಂದಿರಾಪತಿಯ ಕಂಡನು ॥783॥ |
| ಇಂದಿರಾಪತಿಯ ಸುತ್ತ ವೃಂದಾರಕರು ನೆರೆದು ವಂದಿಸೆ<br>ಒಲಗವ ಕೊಡುವ ಚೆಂದವ ಕಂಡನು ॥784॥ |
| ಹಾರ ಮುಕುಟ ಪೀತಾಂಬರಧರ ನೀಲ ವರ್ಣನ<br>ಕೂಡೆ ಬಲರಾಮನಿರುತಿರಲು ಕಂಡನು ॥785॥ |
| ಕಂಡನಾಗ ಅಕ್ರೂರ ಕೈಯ ಮುಗಿದು ಸ್ತುತಿಯ ಮಾಡಿ<br>ಇಂದು ಎನ್ನ ಜನ್ಮಸಾಫಲ್ಯವಾಯಿತೆಂದನು ॥786॥ |
| ಕಾಳಿಂದಿಯ ತೀರದಲ್ಲಿ ನಿತ್ಯಕರ್ಮವನ್ನು ಮುಗಿಸಿ<br>ಆನಂದದಿಂದ ರಥವನೇರಿ ಬಂದನಕ್ರೂರ ॥787॥ |
| ಏನು ಕಂಡಿ ಅಕ್ರೂರ ಎಂದಿನಂತಿಲ್ಲ ಮುಖವು<br>ಆನಂದದಿಂದ ಭರಿತನಾಗಿಹುದದೇನೆಂದನು ॥788॥ |
| ಸ್ಥಳದಲ್ಯಾಗಲಿ ಜಲದಲ್ಯಾಗಲಿ ಗಿರಿಗಹ್ವರದಲ್ಯಾಗಲಿ<br>ಕಿರಿಯಯ್ಯ ಏನು ಕಂಡಿ ಎಂದ ಕೃಷ್ಣನು ॥789॥ |
| ಆಕಾಶದಲ್ಯಾಗಲಿ ಅಂತರಿಕ್ಷದಲ್ಯಾಗಲಿ<br>ಆಶ್ಚರ್ಯವೇನು ಕಂಡಿಯೆ ಚಿಕ್ಕಪ್ಪನೆಂದನು ॥790॥ |
| ಸ್ಥಳದಲ್ಲಿ ನೋಡಿದರು ನೀನೆ ಜಲದಲ್ಲಿ ನೋಡಿದರು ನೀನೆ<br>ಅಣುರೇಣು ತೃಣಕಾಷ್ಠ ಪರಿಪೂರ್ಣ ನೀನೆ ॥791॥ |
| ಆಕಾಶದಲ್ಲಿ ನೀನೆ ಅಂತರಿಕ್ಷದಲ್ಲಿ ನೀನೆ<br>ಸ್ವಾಮಿ ನಿನ್ನ ಮಹಿಮೆ ಆಶ್ಚರ್ಯವೆಂದನು ॥792॥ |
| ಆದಿ ವೇದಗಳಿಂದ ಅಜಭವರು ನಿನ್ನ ಮಹಿಮೆ<br>ಎಂತೂ ಪೊಗಳಲರಿಯರಂತೆ ಪರಬ್ರಹ್ಮನೆ ॥793॥ |
| ಅನಂತ ವೇದಗಳಿಂದ ಅಜಭವರು ನಿನ್ನ ಗುಣವ<br>ತಾವು ಪೊಗಳಲರಿಯರಂತೆ ಪರಬ್ರಹ್ಮನೆ ॥794॥ |
| ಬರಲೆಯಿಲ್ಲವೆಂದು ಮಾವ ಬಹಳ ವಿಚಾರ ಮಾಡುವ<br>ತಡೆಯಬೇಡ ನಡೆ ಹೊತ್ತು ಹೋಯಿತೆಂದನು ॥795॥ |

| |
|---|
| ರವಿಕಾಂತಿ ಮನ್ನಿಸಲು ಪುರದ ಬಾಗಿಲನು ಹಾಕಿ<br>ಅಂದು ರಾಮಕೃಷ್ಣರ ತಾವು ಬರುತಲಿದ್ದರು ॥796॥ |
| ಊರ ಮುಂದೆ ಕಂಸನ ಭೇರಿ ಏರುತಿರಲು ಕಂಡು<br>ಚೂರ್ಣವ ಮಾಡಿದರು ತವಕದಿಂದಗಲಿ ॥797॥ |
| ರಾಯನ್ಹೊದಿವ ಹೊದಿಕೆಯನ್ನು ರಾಜಕನಾನೆಯ ಮೇಲೆ<br>ರಾಯಗೆಂದು ದಾರಿಯೊಳಗೆ ಒಯ್ಯುತಿದ್ದನು ॥798॥ |
| ಮಡಿವಾಳ ನಮಗೆ ಒಂದು ಮಡಿಯ ಕೊಡಲುಬೇಕೆನುತ<br>ಅಂದು ರಾಮಕೃಷ್ಣರವನ ಕೇಳುತಿದ್ದರು ॥799॥ |
| ರಾಯನ್ಹೊದಿವ ಹೊದಿಕೆಯನ್ನು ಕೇಳಲು ನೀನ್ಯಾರೆಲೊ<br>ಬಾಯಗೊಬ್ಬಿನಿಂದ ರಜರ ಬಯ್ಯುತಿದ್ದನು ॥800॥ |
| ರಾಯ ಕಂಸ ನಮಗೆ ಈಗ ಸೋದರಮಾವನಾಗಬೇಕು<br>ರಾಯನ ಹೊದಿಕೆಯನ್ನು ಹೊದಿವೆವೆಂದರು ॥801॥ |
| ಹಳ್ಳಿಯೊಳಗೆ ಇರುವ ಗೋಪಾಲಕರ ಪೋರಗಳಿರ<br>ರಾಯನ್ಹೊದಿವ ಶಾಲೆಗಳನು ಹೊದಿವೆವೆನುವಿರ ॥802॥ |
| ಅವನ ಪ್ರಾಣ ತೆಗೆದು ಆ ಗಜದ ಕೋರೆಗಳನು ಸೀಳಿ<br>ಯಮಲೋಕಕ್ಕೆ ಕಳುಹಿದರು ಮದದಾನೆಯ ॥803॥ |
| ಚೀನಿ ಚೀನಾಂಬರದ ರಾಯನ್ಹೊದಿವ ಹೊದಿಕೆಯನ್ನು<br>ರಾಮಕೃಷ್ಣರು ಹೊದ್ದರವನ ಭಯವೇನಿಲ್ಲದೇ ॥804॥ |
| ಪಟ್ಟೆ ಪೀತಾಂಬರವನ್ನು ಕೊಟ್ಟು ಗೋಪಾಲಕರಿಗೆ<br>ಮಿಕ್ಕಾದ ನಡವಳಿಯ ಹಾಸಿ ಒಗೆದರು ॥805॥ |
| ಕೆಲಸಗಾರರ ಮನೆಗೆ ಹೋಗಿ ರಾಮಕೃಷ್ಣರು<br>ಕೆಲಸ ಮಾಡಿರೆಂದೆನುತ್ತ ಹರಿಯ ಪನ್ನಗಳ ತಿದ್ದಿದರು ॥806॥ |
| ಮಾಲೆಗಾರನ ಮನೆಗೆ ಹೋಗಿ ರಾಮಕೃಷ್ಣರು ಹೂವು ಮಾಲೆ<br>ನಮಗೆ ಉಂಟೆ ಎಂದವನ ಕೇಳುತಿದ್ದರು ॥807॥ |
| ರಾಯಗೆಂದು ಇರಿಸಿದ ಸುಗಂಧದ ಮಾಲೆಗಳನು<br>ರಾಮಕೃಷ್ಣರಿಗೆ ಕೊಟ್ಟು ಕರವ ಮುಗಿದನು ॥808॥ |
| ಗಾಜಿನ ಪಟ್ಟಲಲ್ಲಿ ಗಂಧವನ್ನು ತೇದುಕೊಂಡು<br>ರಾಯಗೆನುತ ಕುಬ್ಜೆ ಕೊಂಡುಹೋಗುತಿದ್ದಳು ॥809॥ |
| ಗಂಧದಾರಿಗೆ ಕುಬುಜೆ ಎಂದು ಕೃಷ್ಣ ಕೇಳುತ್ತಿರಲು<br>ಗೋವಿಂದ ನಿನಗೆಂದು ಕೊಟ್ಟು ಕರವ ಮುಗಿದಳು ॥810॥ |

| |
|---|
| ಶ್ರೀಗಂಧ ಲೇಪನವ ಮಾಡಿ ರಾಮಕೃಷ್ಣರು<br>ಹೀಗೆ ಯಾಕ ಆದಿ ಕುಬುಜೆ ಎಂದು ಕೇಳಲು॥॥811॥ |
| ಪೂರ್ವದಲ್ಲಿ ಮಾಡಿದ ದುಷ್ಕರ್ಮದ ಫಲವೆನಲು<br>ಕಾಲ ಪಿಡಿದು ತಲೆಯನ್ಹಿಡಿದು ಮೇಲಕ್ಕೆತ್ತಿದ॥812॥ |
| ಯೌವನ ಸುವರ್ಣ ಸ್ತ್ರೀಯಾಗಿ ಕುಬುಜೆ ಕೃಷ್ಣನ<br>ಯಾವಲ್ಲಿಗ್ಹೋಗುವಿ ಎಂದು ಸೆರಗ ಪಿಡಿದಳು॥813॥ |
| ಬಂದ ಕಾರ್ಯ ಆದ ಮೇಲೆ ಬಂದೇನು ನಿನ್ನ ಮನೆಗ ಹಾ<br>ಗೆಂದು ಒಡಂಬಡಿಕೆ ಹೇಳಿ ಮುಂದೆ ನಡೆದನು॥814॥ |
| ಅಕ್ರೂರನ್ಹರುಷದಿಂದ ಅಚ್ಯುತನ ಮನಗೆ ಕರೆಯೆ<br>ಮತ್ತೆ ಬಾಹೆನೆಂದು ಹೇಳಿ ಮುಂದೆ ನಡೆದನು॥85॥ |
| ಊರ ಹೊಕ್ಕನಕ್ರೂರ ರಾಯನ ಬಳಿಗೆ ಬಂದು<br>ಹೇಳಿದೊಳೀಗವನ್ನು ಮಾಡಿದೆನೆಂದ॥816॥ |
| ಮಕ್ಕಳ ಕರೆದುಕೊಂಡು ಬಂದೆನೆಂದು ಹೇಳಲು<br>ತುಪ್ಪ ಸಕ್ಕರೆಯ ರಾಯ ಕುಡಿಯುತಿದ್ದನು॥817॥ |
| ಬಾಲಕರ ಒಡಗೊಂಡು ಬಂದೆನೆಂದು ಹೇಳಲು<br>ಹಾಲು ಸಕ್ಕರೆಯ ಬೆರೆಸಿ ಕುಡಿಯುತಿದ್ದನು॥818॥ |
| ಪಾಯಸವ ಮಾಡುವುದಕ್ಕೆ ವೇಳ್ಯ ಹೋಯಿತೆಂದೆನುತ್ತ<br>ಹಾಲು ಸಕ್ಕರೆಯ ರಾಯ ಕುಡಿಯುತಿದ್ದನು॥819॥ |
| ಕೇಳಿದನೆ ಕಂಸ ತಾನು ಬಹಳ ಸಂತೋಷದಿಂದ<br>ರಾಜ್ಯಕ್ಕಧಿಕವಾದ ಉಡುಗರೆಯ ಕೊಟ್ಟನು॥820॥ |
| ಪದಕ ಪಟ್ಟೆ ಕಂಠಮಾಲೆ ದ್ವಿಗುಣ ದೇವಾಂಗವ<br>ಉಡುಗರೆ ವೀಳ್ಯವನು ಕೊಟ್ಟು ಕಳುಹಿದನಾಗ॥821॥ |
| ಅಂದು ಉದ್ಯಾನದಲ್ಲಿ ತಂದ ಕ್ಷೀರಾನ್ನವ<br>ಗೋವಿಂದ ರಾಮ ಗೋಪಾಲಕರು ಉಂಡರಾಗಲೆ॥822॥ |
| ಕ್ಷೀರಾನ್ನವನ್ನೆ ಉಂಡು ಆರೋಗಣೆಯ ಮಾಡೆ<br>ಭೋಗಸ್ಥರಾಗಿ ಭೋಗನಿದ್ರೆಯಾಗುತ್ತಿದ್ದವು॥823॥ |
| ಹಾಲು ಅನ್ನವನ್ನೆ ಉಂಡು ಹರುಷದಿಂದ ಮಲಗಿರುವ<br>ಭೋಗರಾಜಗೆ ದುರ್ನಿಮಿತ್ತಗಳಾಗುತಿದ್ದುವು॥824॥ |
| ಕತ್ತೆಯನ್ನು ಏರಿಕೊಂಡು ಬಿಚ್ಚುಕತ್ತಿ ಹಿಡಿದುಕೊಂಡು<br>ದಕ್ಷಿಣಕ್ಕ ಹೋಗುತಿರಲು ಕಂಡ ಕನಸಿಲೀ॥825॥ |

| |
|---|
| ಸಂಪಿಗೆಣ್ಣೆ ಹಚ್ಚಿಕೊಂಡು ಕೆಂಪು ದಂಡೆ ಮುಡಿದುಕೊಂಡು<br>ಕಂಪಿಸುವ ಎಡದ ತೋಳ ಭುಜವ ಕಂಡನು ॥826॥ |
| ಎದ್ದ ಕಂಸ ಮಂಚದಿಂದ ಎತ್ತರವ ಮಾಡೆನುತ್ತ<br>ಮದ್ದಾನೆಯನ್ನು ಬಾಗಿಲಲ್ಲಿ ಇಟ್ಟರು ॥827॥ |
| ಮುದ್ದು ರಾಮಕೃಷ್ಣರು ತಿದ್ದಿ ತಿಲಕವನ್ನು ಇಟ್ಟು<br>ಎದ್ದು ಪೊಂಬಟ್ಟೆ ಚಲ್ಲಣವನುಟ್ಟರು ॥828॥ |
| ಮಡಿಯನುಟ್ಟು ತಿಲಕ ತಿದ್ದಿ ಮಾಲಿಕೆಗಳನ್ನ ಧರಿಸಿ<br>ಮದಕರಿಯಂತೆ ಬೀದಿಯೊಳಗೆ ಬಂದರು ॥829॥ |
| ಮಾವಿನ ತೋರಣ ಹೂವಿನ ಮಾಲಿಕೆ<br>ಬೀದಿ ಬೀದಿಯಲ್ಲಿ ಅಲಂಕರಿತವಾದುವು ॥830॥ |
| ಕದಳಿಯ ಫಲಗಳು ಕ್ರಮುಕದ ಗೊನೆಗಳು<br>ಅಲಂಕೃತವಾದ ಬೀದಿಯೊಳಗೆ ಬಂದರು ॥831॥ |
| ಪಟ್ಟೆಯ ಕರುಜುಗಳು ಮುತ್ತಿನ ತೋರಣವು<br>ವಿಸ್ತಾರವಾದ ಬೀದಿಯೊಳಗೆ ಬಂದರು ॥832॥ |
| ರಾಜದೂರ್ವಿ ಅಂಕುರ ನಾಳಿಕೇರ ಪೂರ್ಣಕುಂಭ<br>ಬ್ರಾಹ್ಮಣರು ಹರಿಗೆದುರಾಗಿ ಬಂದರು ॥833॥ |
| ಕೆಂಚಕ್ಕಿ ಕಳಶವು ಸಂಪಿಗೆ ಜಾಜಿ ಮಾಲತಿ<br>ಸಂಪನ್ನೆಯರೊಯ್ಯುಂಠಪತಿಯ ಎದುರುಗೊಂಡರು ॥834॥ |
| ಸಾರಿಸಿ ಮುತ್ತಿನ ಕಾರಣೆಗಳನ್ನ ರಚಿಸಿ<br>ತೋರಣವ ಕಟ್ಟಿದರು ಶಿಖರ ಮಕರಗೆ ॥835॥ |
| ಕೇರಿಗಳ ಬಳಿದು ಪನ್ನೀರುಗಳನ್ನ ತಳಿದು<br>ಸಾಲು ದೀವಿಗಿಟ್ಟ ಸಂಭ್ರಮವ ಕಂಡರು ॥836॥ |
| ರಂಗ ಬೀದಿಯಲ್ಲಿ ಬರೆ ಮಂಗಳಾರತಿಗಳು<br>ಕಂಗಳಿಗೆ ಹಬ್ಬವಾಯ್ತು ಅಂಗನೆಯರಿಗೆ ॥837॥ |
| ರಂಗನ ಪಾದಾಂಬುಜವ ಕಂಗಳೆಂಬ ಭೃಂಗಗಳಿಂದ<br>ಅಂಗನೆಯರು ಪಾನ ಮಾಡಿ ಧನ್ಯರಾದರು ॥838॥ |
| ಕೇರಿಯ ಒಳಗೆ ಕರಿಗಳ ಶೃಂಗರಿಸಿ<br>ಮೇಲುಮಾಳಿಗೆ ಹತ್ತಿ ನೋಡುತ್ತಿದ್ದರು ॥839॥ |
| ರಾಣಿವಾಸಿಯರುಪ್ಪರಿಗೆ ಮೇಲೆ ನಿಂತು ನೋಡುತ್ತಿಹರು<br>ಭೋಗಸ್ತ್ರೀಯರು ನಿಂತರು ರಾಜದ್ವಾರದಿ ॥840॥ |

| |
|---|
| ರಾಮಕೃಷ್ಣರ ಪಡೆದ ತಾಯಿ ಏನು ಪುಣ್ಯಗಳ<br>ಮಾಡಿದಳೊ ಎಂದು ಜನಗಳೆಲ್ಲ ಆಡಿಕೊಂಬರು ॥841॥ |
| ನೋಡಿದರೆ ಪಾಪಗಳು ಓಡಿ ಹೋಗುತ್ತಲಿವೆ<br>ಹ್ಯಾಗ ಕಂಸ ಕೊಲುವೆನೆಂದು ಕರೆಯ ಕಳುಹಿದ ॥842॥ |
| ಆಳು ಮಂದಿಗಳಿಲ್ಲ ಆಯುಧವು ಮೊದಲೆ ಇಲ್ಲ<br>ಬಾಲಕರು ಕಾಳಗವ ಹ್ಯಾಂಗೆ ಗೆಲುವರು ॥843॥ |
| ಪೂತನಿ ತೃಣಾವರ್ತ ಕೇಶಿಯನ್ನೆ ಕೊಲ್ಲುವಾಗ<br>ಯಾತರಾಯುಧವಿತ್ತು ಈತಗೆಂದರು ॥844॥ |
| ವಾಲೆ ಮೂಗುತಿ ಕೊಪ್ಪು ಸೀರೆ ಕುಪ್ಪಸ ಹೊಳೆವ<br>ಬಾಲಕಿಯರು ಕೃಷ್ಣನ ನೋಡಬಂದರು ॥845॥ |
| ಜಾಜಿ ಸಂಪಿಗೆ ಮಾಲೆಯನ್ನು ತೋಳಿಗೆ ಸುತ್ತಿಕೊಂಡು<br>ಬಾಲಕನ ನೋಡಬೇಕೆನುತ್ತ ಬಂದರು ॥846॥ |
| ಬಳನಉಡಿಯ ನಾರಿಯರು ಬಳಬಳನೆ ಬಳಕುತ<br>ಮೃಡನ ಪ್ರಿಯನಿದ್ದೆಡೆಗೆ ಬರುತಲಿದ್ದರು ॥847॥ |
| ವಿಸ್ತರದ ಬೀದಿಯೊಳಗೆ ವಿಪ್ರರು ನಾರಿಯರು<br>ಶೆಟ್ಟಿ ಪಟ್ಟದವರು ಕೃಷ್ಣನ ನೋಡಬಂದರು ॥848॥ |
| ಮಲ್ಲರಿಗೆ ಸಿಡಿಲಿನಂತೆ ಭಯಂಕರನಾಗಿ ತೋರಿ<br>ನರರಿಗೆ ನರಹರಿಯಂತೆ ತೋರುವರವರು ॥849॥ |
| ಗೋವಿಂದ ಸಜ್ಜನರಿಗೆ ಪಾಲಕನಂತೆ ತೋರುವ<br>ಮಾವ ಕಂಸನಿಗೆ ವೈರಿಯಂತೆ ತೋರುವರವರು ॥850॥ |
| ತಾಯಿ ತಂದೆಯರಿಗೆ ಬಾಲರಂತೆ ತೋರುವ<br>ಮಾವ ಕಂಸನಿಗೆ ವೈರಿಯಂತೆ ತೋರುವರವರು ॥851॥ |
| ಸಜ್ಜನರು ಹರಿಯ ಕಂಡು ಸಂತೋಷ ಪಡುವರು<br>ದುರ್ಜನರು ಹರಿಯ ಕಂಡು ದುಃಖ ಪಡುವರು ॥852॥ |
| ಬಿಲ್ಲ ಮನೆಗೆ ಹೋಗಿ ಕೃಷ್ಣ ಬಿಲ್ಲು ಮುರಿದು ಕ್ಷಣದಲ್ಲಿ<br>ಅಲ್ಲಿಂದ ರಂಗದ ಬಳಿಗೆ ಬಂದನೂ ॥853॥ |
| ರಂಗದ ಬಾಗಿಲಿಗೆ ರಾಮಕೃಷ್ಣರು ಬರುತ್ತಿರಲು<br>ಸೊಂಡಿಲಲ್ಲಿ ಮದ್ದಾನೆ ಸೆಳೆದುಕೊಂಡಿತು ॥854॥ |
| ಮಾವನ ನೋಡಬೇಕು ಮಾವಟಿಗ ಆನೆಯ<br>ಶೀಘ್ರದಿಂದ ತೆಗಿಯೋ ಬೇಗೆಂದ ಕೃಷ್ಣನು ॥855॥ |

| |
|---|
| ದುಷ್ಟ ಬುದ್ಧಿಯುಳ್ಳವನು ಕೃಷ್ಣರಾಮರ ಮೇಲೆ<br>ಒತ್ತಿ ಗಜವ ನಡೆಸಿದ ಮಾವಟಿಗನಾಗಲೆ ॥856॥ |
| ಮುರಳಿಯ ಕ್ರೀಡೆಯಿಂದ ಅತ್ತ ಇತ್ತಲಾ<br>ತಿರುಗಿಸ ಆನೆಯನ್ನು ಆಡಿಸಿದನೋ ॥857॥ |
| ಅವನ ಪ್ರಾಣಗಳ ತೆಗೆದು ಅದರ ಕೊರೆಗಳನು ಸೀಳಿ<br>ಯಮಲೋಕಕ್ಕೆ ಕಳುಹಿದ ಮದ್ದಾನೆಯ ॥858॥ |
| ಆನೆಯ ಕೊಂಬುಗಳನು ಆಳಿನಾ ಹೆಗಲಲ್ಲಿಟ್ಟು<br>ರಾಮಕೃಷ್ಣರು ರಂಗದ ಒಳಗೆ ಬಂದರು ॥859॥ |
| ಮುಷ್ಟಿ ಚಾಣೂರರೆಂಬ ಜಟ್ಟಿಗಳು ಕೃಷ್ಣನ<br>ಮುಷ್ಟಿಯುದ್ಧಕ್ಕೆ ನಿಲ್ಲಿರೆಂದು ಕರೆದರು ॥860॥ |
| ಚಾಣೂರ ಮುಷ್ಟಿಕರೆಂಬ ದಾನವರು ಕೃಷ್ಣನ<br>ನೀತಿ  ಯುದ್ಧಕ್ಕೆ ನಿಲ್ಲಿರೆಂದು ಕರೆದರು ॥861॥ |
| ಚಿಕ್ಕವರು ನಾವ ಬಹು ಜಟ್ಟಿಗಳು ನಿಮ್ಮ ಕೂಡೆ<br>ಮುಷ್ಟಿ ಯುದ್ಧಕ್ಕೆ ನಾವು ಅರಿಯೆವೆಂದರು ॥862॥ |
| ರಾಯರಾಡಿದ ಮಾತುಗಳು ಮೀರಲಾಗದು ನಮಗೆ ನಿಮಗೇ<br>ನೀತಿ ಯುದ್ಧಕ್ಕೆ ನಿಲ್ಲಿರೆಂದು ಕರೆದರು ॥863॥ |
| ಮುಷ್ಟಿಕ ಚಾಣೂರರೆಂಬ ಜಟ್ಟಿಗಳು ಬೀಳಲು<br>ಕಾಲಗೆಟ್ಟು ರಾಯ ಕಂಗೆಟ್ಟು ಕುಳಿತನು ॥864॥ |
| ಚಾಣೂರ ಮುಷ್ಟಿಕರೆಂಬ ದಾನವರು ಬಿದ್ದರು<br>ಕಾಲಗೆಟ್ಟು ರಾಯ ಕಂಗೆಟ್ಟು ಕುಳಿತನು ॥865॥ |
| ರಾಮಕೃಷ್ಣರೆಂಬುವರು ಊರ ಹೊಕ್ಕು ಬರುತಲಿಷ್ಟು<br>ಗಾರುಮಾಡಿದರೆಂದು ಕಂಸಗೆ ದೂರ ಹೇಳಿದರು ॥866॥ |
| ಕರೆಕಳುಹಿ ಮೃತ್ಯುವನ್ನು ನನಗೆ ನಾನು ತಂದುಕೊಂಡೆ<br>ಅವರ ಕಳುಹೋ ಉಪಾಯವನ್ನು ಕಾಣೆನೆಂದನು ॥867॥ |
| ಅತ್ತ ಇತ್ತಲ್ಹೋಗದೆ ಎನ್ಹತ್ತಿರ ಇರಿ ನೀವೆಂದು<br>ಹತ್ತಿದ ಕಂಸ ಎತ್ತರದ ಮಂಚವನಾಗಲೇ ॥868॥ |
| ಬಿಲ್ಲು ಎಲ್ಲಿ ಮಾವ ಎಲ್ಲಿ ಹಬ್ಬ ಎಲ್ಲಿ ಎನುತಲಿ<br>ಅಲ್ಲಿಗೆ ನಡೆದು ಬಂದನು ಫುಲ್ಲನಾಭನು ॥869॥ |
| ಕಂಸ ಮಂಚದ ಮೇಲೆ ಕಂಗೆಡುತ್ತ ಇರುತ್ತಿರಲು<br>ಹಂಸವಾಹನ ಬೊಮ್ಮನಯ್ಯ ಹರಿ ಕುಳಿತನು ॥870॥ |

| |
|---|
| ಬಂದಿರೆ ಕೃಷ್ಣ ನೀವು ಬನ್ನಿ ಕುಳ್ಳಿರಿ ಎನುತಲೆ<br>ಸಂಭಾಷಣಗಳನೆ ಮಾಡುತ್ತಿದ್ದನು ‖871‖ |
| ಕಂಡೆವಯ್ಯ ನೀವು ಬಹಳ ಪರಾಕ್ರಮಿಗಳೆನುತಲಿ<br>ಹಾಗೆನುತ್ತ ಕಂಸ ಭಯದಿಂದ ನಡುಗುತ್ತಿದ್ದನು ‖872‖ |
| ಹರಿಯು ಖಡ್ಗವನೆ ಹಿಡಿದು ನಡುಗುವ ಕಂಸನ ತಲೆಯ<br>ಕೆಳಗೆಹಾಗಿ ಅವನ ಮೇಲೆ ಏರಿ ನಿಂತನು ‖873‖ |
| ಕಂಸನೆಂಬ ಕಾಲನೇಮಿ ಕಲಿರೂಪ ಏರಿದ<br>ಅಮರರರೆಲ್ಲ ಪುಷ್ಪವೃಷ್ಟಿಗಳ ಕರೆದರು ‖874‖ |
| ಚಿಕ್ಕವರು ರಾಮಕೃಷ್ಣರು ಮುತ್ತಯ್ಯನ<br>ಬಟ್ಟಕಂಗಳ ಜಲಗಳ ಒರಸುತಿದ್ದರು ‖875‖ |
| ಭೂಮಿಭಾರ ಇಳುಹಲೆಂದು ರಾಮಕೃಷ್ಣರವತರಿಸೆ<br>ಮೇಲೆ ಎನ್ನಕೂಡೆ ಉಪಚಾರವ್ಯಾತಕೋ ‖876‖ |
| ಧರಣಿಭಾರ ಇಳುಹಲೆಂದು ರಾಮಕೃಷ್ಣರವತರಿಸೆ<br>ಮರಳಿ ಎನ್ನಕೂಡೆ ಉಪಚಾರವ್ಯಾತಕೋ ‖877‖ |
| ಕೃಷ್ಣ ಉಗ್ರಸೇನ ಪಾದಕ್ಕೆ ಬಿದ್ದು ನಮಸ್ಕಾರ ಮಾಡಿ<br>ಮುದ್ರಿಕೆಯುಂಗುರವ ಕೊಳ್ಳಿರೆಂದನು ‖878‖ |
| ನಾನು ಬಹಳ ವೃದ್ಧನು ರಾಜ್ಯವಾಳಲಾರೆನು<br>ಹ್ಯಾಗೆ ಮಾಡಲೆಂದು ಕೃಷ್ಣನ ಕೇಳುತಿದ್ದನು ‖879‖ |
| ನೀವಿ ರಾಜ್ಯವಾಳಿದರೆ ನಾವು ಪಾರುಪತ್ಯವ<br>ಮಾಡೇವು ಎಂದು ಕೃಷ್ಣ ಹೇಳುತ್ತಿದ್ದನು ‖880‖ |
| ಕೃಷ್ಣ ಉಗ್ರಸೇನರಾಯಗೆ ಪಟ್ಟವ ಕಟ್ಟಿದ<br>ಬಳಿಗ ಹೆತ್ತ ತಾಯಿ ತಂದೆಗಳ ಸೆರೆಯ ಬಿಡಿಸಿದ ‖881‖ |
| ಪಟ್ಟಾವಳಿಗಳೊಯ್ದು ಮುತ್ತಿನಾಭರಣ ಒಯ್ದು<br>ಇಟ್ಟುಕೋ ತಾಯವ್ವನೆಂದು ಕೊಟ್ಟನು ‖882‖ |
| ಹೊಳೆವ ಮಕರ ಕುಂಡಲ ಎಸೆವ ಕಿರೀಟ ಕಂಡು<br>ಕುರುಹು ಕಂಡು ದೇವಕಿ ಬಳಲುತಿದ್ದಳು ‖883‖ |
| ಕಡುಪಾಪಿಯಾದರೀ ಒಡಹುಟ್ಟಿದಣ್ಣನ<br>ಕೊಲುವರೇ ಮಕ್ಕಳಿರ ಎನುತಲಿದ್ದಳು ದೇವಕಿ ‖884‖ |
| ಆರು ಮಂದಿ ಸಹೋದರರ ಹ್ಯಾಗೆ ಕೊಂದ ನಿಮ್ಮಣ್ಣ<br>ಕ್ರೂರ ಕಂಸ ಅಳಿದರೆ ನೀವು ಅಳುವುದೇ ‖885‖ |

| |
|---|
| ಮಂಗಳ ಮೂರುತಿ ಕೃಷ್ಣ ಕಂಗಳ ಜಲವನೊತ್ತಿ<br>ಮಂಗಳ ಮಜ್ಜನವ ಮಾಡಿ ಪಾದಕ್ಕೆರಗಿದ ॥886॥ |
| ಹಿಂಗಿ ಹೋದ ಕಂಗಳಿಗೆ ಕಂಗಳು ಬಂದಂತೆ<br>ಹರಿಯ ರಾಮರ ಕಂಡು ಹರುಷಬಟ್ಟಳು ತಾಯಿ ದೇವಕಿ ॥887॥ |
| ಹಿರಿದು ಬಡವನಾದವಗೆ ಒಲಿದು ಸಿರಿಯು ಬಂದಂತೆ<br>ಗೋವಿಂದ ರಾಮರನೆ ಕಂಡು ಹರುಷಬಟ್ಟಳು ॥888॥ |
| ಸೂರ್ಯ ಉದಯವಾದ ಕನಸು ಬೇಗ ಹರಿದು ಹೋದಂತೆ<br>ರಾಮಕೃಷ್ಣರನೆ ಕಂಡು ಹರುಷಬಟ್ಟಳು ॥889॥ |
| ಅಸುರ ಘಾತ ಕೃಷ್ಣ ಬಂದು ವಾಸುದೇವನ ನೆನೆದು<br>ಉಸುರು ಬಿಡುವ ವಸುದೇವನ ಚರಣಕೆರಗಿದ ॥890॥ |
| ಬೇಗದಿಂದ ಶ್ರೀಕೃಷ್ಣ ದೇವಕಿಯ ಚರಣಕೆರಗಿ<br>ತಾಯಿ ತಂದೆಯಾರ ಚರಣಕೆರಗಿ ಸಂತೈಸಿದ ॥891॥ |
| ಹಿಂದೆ ಬಂಧನಗಳಿಂದ ತಂದೆ ನೀವು ಬಳಲಿದಿರೆಂದು<br>ಕಾಲ ಸಂಕೋಲೆ ತೆಗೆದು ಪಾದಕೆರಗಿದ ॥892॥ |
| ಬಹಳ ಬಂಧನಗಳಿಂದ ತಾಯಿ ನೀವು ಬಳಲಿದಿರೆಂದು<br>ಕಾಲ ಸಂಕೋಲೆ ತೆಗೆದು ಪಾದಕೆರಗಿದ ॥893॥ |
| ಸೆರೆಯ ಸಂಕೋಲೆಗಳಿಂದ ಬಳಲಿದವರ ಕಡೆಗೆ ತೆಗೆದು<br>ಪುರದ ಜನರನೆಲ್ಲ ಸಂತೈಸುತಿದ್ದನು ॥894॥ |
| ಬಂದ ಮಂತ್ರಿಗಳಿಗೆ ನಿಂದುಪುಚಾರವನೆ ಹೇಳಿ<br>ತಂದೆ ತಾಯಿಗಳಿಗಾನಂದವಿತ್ತನು ॥895॥ |
| ಮಾವನ ಮನೆಯೊಳಗೆ ಸಾಲಿಟ್ಟ ದ್ರವ್ಯವನ್ನು<br>ಆಗ ಕೃಷ್ಣ ಬ್ರಾಹ್ಮಣರಿಗೆ ಕೊಡುತಲಿದ್ದನು ॥896॥ |
| ಕಂಸನ ಮನೆಯೊಳಗೆ ಸಾಲಿಟ್ಟ ದ್ರವ್ಯಗಳ<br>ಆಗ ಕೃಷ್ಣ ಬ್ರಾಹ್ಮಣರಿಗೆ ಕೊಡುತಲಿದ್ದನು ॥897॥ |
| ನಂದಗೋಪಗೆ ಬಹಳ ಉಪಚಾರಗಳನು ಹೇಳಿ<br>ತಂದೆಯಂದದಿ ನಮ್ಮ ಸಲಹಿದಿರೆಂದ ॥898॥ |
| ಇಂದು ಪರಿಯಂತ ನಿಮ್ಮ ಕಂದನೆಂದು ಸಲಹಿದಿರಿ<br>ನಂದ ನಿಮ್ಮನೆಂದಿಗೂ ಮರೆಯೆವೆಂದನು ॥899॥ |
| ಕೇಳಿ ನಂದಗೋಪನು ಬಹಳ ಸಂತಾಪದಿಂದ<br>ಮೌನದಿಂದಿರಲು ಕೃಷ್ಣ ಮಾತನಾಡಿದ ॥900॥ |

| |
|---|
| ಪುರದ ಜನರ ಸಂತೈಸಿ ಮರುದಿನಕೆ ಬಾಹೆನೆಂದು<br>ನಂದಗೋಕುಲಕೆ ಬೇಗ ಸಾಗಿರೆಂದನು ‖901‖ |
| ಕೇಳಿ ನಂದಗೋಪನು ನೋಡಿ ಬರಲಾಗದೆ<br>ಗೌಳಿಗರ ಕೂಡೆ ಗೋಕುಲಕೆ ಬಂದನು ‖902‖ |
| ಬಂದನಾಗ ನಂದಗೋಪ ಹೆಂಡತಿಗೆ ಹೇಳಿದ<br>ರಾಮಕೃಷ್ಣರ ಧ್ಯಾನಿಸುತ್ತಲಿದ್ದರು ‖903‖ |
| ಅಪಾರ ಮಹಿಮ ಮಾಡಿದ ಗೋಪಾಲ ಚರಿತೆಯು<br>ಈ ಪರಿಪೊಗಳಲೆನೆಗೆ ಅಳವಲ್ಲವು ‖904‖ |
| ವಾಯು ಬ್ರಹ್ಮ ಸರಸ್ವತಿಯರು ತಾವು ಪೊಗಳಲರಿಯರು<br>ಶ್ರೀದೇವಿ ನಿಮ್ಮ ಗುಣವ ಪೊಗಳಲರಿಯಳು ‖905‖ |
| ಹಾಸಿಗೆಯಾಗಿರುವ ಶೇಷ ನಿಮ್ಮ ಪೊಗಳಲರಿಯನು<br>ಕಾಂತೆ ಮಹಾಲಕ್ಷ್ಮಿ ನಿಮ್ಮ ಪೊಗಳಲರಿಯಳು ‖906‖ |
| ಆಲೈಸಿ ಈ  ಕಥೆಯ ಹೇಳಿ ಕೇಳಿದವಗೆ<br>ಸಾಯುಜ್ಯ ಪದವಿ ಕೊಡುವನು ಶ್ರೀನಿವಾಸನು ‖907‖ |
| ವಾದಿರಾಜನು ಮಾಡಿದ ಬಾಲಲೀಲೆಯ ಹೇಳಿದರೆ<br>ಸಾಯುಜ್ಯ ಪದವಿ ಕೊಡುವನು ಹಯವದನನು ‖908‖ |
| ಮಂಗಳಂ ಪೂತನಾದಿ ದೈತ್ಯ ಸಂಹರನಿಗೆ<br>ಅಂಗನೆಯರ ಭಂಗಪಡಿಸಿದವಗೆ ಮಂಗಳಂ ‖909‖ |
| ದೈತ್ಯ ಕಂಸನನ್ನು ವಧಿಸಿ ಹೆತ್ತ ತಂದೆ ತಾಯಿಗ್ಗರುಷ<br>ವಿತ್ತ ರಾಮಕೃಷ್ಣರಿಗೆ ಜಯಮಂಗಳಂ ‖910‖ |

## ಉತ್ತರಾರ್ಧ

| |
|---|
| ನಂದನಾ ಪಾಲಿಸೀದ ಕಂದ ಪಾದ ಭಜಕರ<br>ವಂದಿಸಿ ಕೊಂಡಾಡುವೆ ಶ್ರೀ ಹರಿಯ ಚರಿತೆಯ ‖1‖ |
| ಮಂಗಳ ಮೂರುತಿ ಮಹಿಮನ ಒಂದೊಂದು ಗುಣಗಳ<br>ಅಂಬುಧಿ ಒಳಗೆ ಮುಳುಗಿ ಪೊಗಳಲಾರೆವು ‖2‖ |
| ಸಾಸಿರ ಜಿಹ್ವೆ ಉಳ್ಳ ಶೇಷ ಪೊಗಳನಾಪನೆ<br>ಕಾಂತೆ ಲಕ್ಷ್ಮಿ ನಿಮ್ಮ ಮಹಿಮೆ ತಿಳಿಯಲರಿಯಳು ‖3‖ |
| ವಾಯು ಬ್ರಹ್ಮ ವಾಣಿ ಸರಸ್ವತಿ ತಾವು ತಿಳಿಯಲಾಪರೆ<br>ಶ್ರೀದೇವಿ ನಿಮ್ಮ ಮಹಿಮೆ ತಿಳಯಳರಿಯಳು ‖4‖ |
| ಅಂದು ಸಾಂದೀಪನಲ್ಲಿ ಗಂಭೀರದ್ವಾಕ್ಯವ<br>ಒಂದು ಕ್ಷಣಕೆ ಓದಿದ ಪನ್ನಂಗಶಯನನು ‖5‖ |

ಕಂಜಸಖಪುತ್ರ ತನ್ನ ಕಂದನ ಒಯ್ದಿರಲು
ಗಂಡಗೆ ಹೇಳಿದಳೆ ಪಂಡಿತನೆಂದು ||6||

ಗುರುಗಳ ಕುಮಾರರ ಅರೆ ಘಳಿಗೆ ಒಳಗೆ ನೆರಹಿದ
ಅರಿದುದಲ್ಲವೊ ಈತ ಪರಾದೇವತೆ ||7||

ತ್ರಿವಕ್ರೆಯ ಮನೆಗಳಲ್ಲಿ ತ್ರಿಧಾಮರಾಯನಿರಲು
ಪರಿಯಂಕದ ಮೇಲೆ ಪವಡಿಸಿದರು ||8||

ಪರಿಪರಿಯಾಭರಣವಿಟ್ಟು ಮಾರುತನ್ನ ಬಳಿ ಹಿಡಿದು
ದೇವರ ನೋಡಿದಳೆ ಬಾಲಮತಿಯೊಳು ||9||

ಅತ್ತ ಎಮಗೆ ಒಬ್ಬ ಸುತನ್ನ ಚಿಂತಿಸಿ
ಪುತ್ರರ ಪಡೆದನೆ ಕೃಷ್ಣರಾಯನು ||10||

ಹಸ್ತಿನಾವತಿಗೆ ಆಗ ಅಟ್ಟಿದ ಅಕ್ರೂರನ
ಪಾರ್ಥರ ಕುಶಲವಾರ್ತೆ ತಿಳಿಯಬೇಕೆಂದು ||11||

ಬಂದನಾಗ ಅಕ್ರೂರ ಕಂಡು ಧೃತರಾಷ್ಟ್ರನ
ಪಾಂಡವರ ಪಾಲಿಸೋದು ಧರ್ಮವೆಂದನು ||12||

ಕೇಳಿ ಧೃತರಾಷ್ಟ್ರನು ದೇವರ ಸ್ವಾತಂತ್ರ್ಯವೆಂದ
ಗೂಢ ದ್ವೇಷಿ ಎಂದು ತಿಳಿದು ಪುರಕೆ ಕಳುಹಿದ ||13|

ಇಷ್ಟು ಬಂಧುಗಳಿದ್ದು ದಿಕ್ಕು ಇಲ್ಲದ್ದಾಗೆ ಆಗಿ
ದುಃಖದಿಂದ ಹೇಳಿದಳೆ ಕುಂತಿ ಕಷ್ಟವ ||14||

ಭಗಿನಿಯ ಸಂತೈಸಿದ ಬಂದನಾಗ ಅಕ್ರೂರ
ಭೀಮ ಅರ್ಜುನರ ಕಂಡು ಹರುಷಬಟ್ಟನು ||15||

ಬಹಳ ಪರಾಕ್ರಮಿಗಳೆಂದು ಹೇಳಿದ ಯಾದವರಿಗೆ
ಕೇಳಿ ರಾಮಕೃಷ್ಣರು ಹರುಷಬಟ್ಟರು ||16||

ಕೃಷ್ಣ ಉದ್ಧವನ ಕರೆದು ಅಟ್ಟಿದ ಗೋಕುಲಕೆ
ಮಿತ್ರೆಯರ ಚಿತ್ತ ನಮ್ಮತ್ತ ಇರುವುದೋ ||17||

ದೇವರ ಅಪ್ಪಣೆಗೊಂಡು ಏರಿದನೆ ರಥವ ಬೇಗ
ಊರ ಮುಂದೆ ಉದ್ಧವನ ತೇರ ಇಳಿದನು ||18||

ಮೊಸರ ಕಡೆದು ನಾರಿಯರು ನೀರಿಗೆ ಹೊರಗ್ಹೊರಟರು
ಊರ ಮುಂದೆ ಕೃಷ್ಣರಾಯನ ತೇರ ಕಂಡರು ||19||

ಫುಲ್ಲನಾಭನ ರಥವ ಇಲ್ಲಿಗೇಕೆ ಬಂದಿದೆ
ಮರಳಿ ಅಕ್ರೂರ ನಮ್ಮ ಕರೆಯ ಬಂದನೇ ||20||

| |
|---|
| ಗೋಕುಲದ ನಾರಿಯರು ಉದ್ಧವನ ಸುತ್ತ ಕಟ್ಟಿ<br>ಕೃಷ್ಣರಾಯನ ಕುಶಲ ವಾರ್ತೆ ಕೇಳುತಿದ್ದರು ॥21॥ |
| ಕನಸಿಲ್ಯಾದರು ಮನಸಿಲ್ಯಾದರು ಸ್ಮರಿಸುವನೆ ಕೃಷ್ಣ ನಮ್ಮ<br>ಕರೆಸಿ ನೋಡಬೇಕೆಂದಪೇಕ್ಷೆಬಡುವನೇ ॥22॥ |
| ಯಾವ ಕಾಲದಲ್ಲಿ ನಿಮ್ಮ ಧ್ಯಾನ ಗೋವಿಂದಗೆ<br>ನೋಡಿ ಬಾರೆಂದೆನ್ನ ಹೇಳಿ ಕಳುಹಿದ ॥23॥ |
| ದಾವಾಗಲು ನಿಮ್ಮ ಧ್ಯಾನ ಗೋವಿಂದಗೆ<br>ಹೋಗಿ ನೋಡಿ ಬಾರೆಂದೆನಗೆ ಹೇಳಿ ಕಳುಹಿದ ॥24॥ |
| ಭಕ್ತಿಭರಿತರಾಗಿ ಚಿತ್ತಪರವಶರಾಗಿ ನಾರಿಯರು<br>ಅಚ್ಯುತನ ಪಾದದಲ್ಲಿ ನಿಷ್ಠೆ ಇಟ್ಟರು ॥25॥ |
| ಭ್ರಮರ ಪಕ್ಷಿ ಬಂದು ಹೇಳೆ ಒದಗಲು ಮೋಹಿತರಾಗಿ<br>ಪರೀಕ್ಷಯಿಂದ ಮಾತುಗಳನು ಆಡಿಕೊಂಡರು ॥26॥ |
| ಮೂರು ನಾಲ್ಕು ತಿಂಗಳು ಇದ್ದನಾಗ ಉದ್ಧವ<br>ನಂದಗೋಪ ಯಶೋದೆಯರ ತಾಪ ಬಿಡಿಸಿದ ॥27॥ |
| ಉಗ್ರಸೇನ ಮೊದಲಾದ ಬಲರಾಮ ಕೃಷ್ಣರಿಗೆ<br>ಕೊಟ್ಟು ಉಡುಗೋರೆ ಬಾಯಿಮಾತ ಹೇಳಿ ಕಳುಹಿದ ॥28॥ |
| ಅಂಗನೇರ ವಾರ್ತೆಗಳ ಕೊಂಡು ಬಂದನುದ್ಧವ<br>ಗೋವಿಂದ ರಾಮರ ಮುಂದೆ ಬಂದು ಹೇಳಿದ ॥29॥ |
| ಏನ ಹೇಳಲ್ಯೋ ಸ್ವಾಮಿ ಬಾಲಕೇರ ಸ್ನೇಹವ<br>ಬಾಲಕರ ತೊರೆದು ನಿಮ್ಮ ಧ್ಯಾನದಲ್ಲಿರುವರು ॥30॥ |
| ಅವರ ಪಾದಧೂಳಿ ನಮಗಿನ್ಯಾವ ಕಾಲಕೆ ದೊರಕೊದೋ<br>ಆ ಹರಿಯು ಬಗೆಯೆ ನಮ್ಮ ಹೃದಯದಲ್ಲಿಹನೇ ॥31॥ |
| ಆಸ್ತಿ ಪ್ರಾಸ್ತೇರು ಬಂದು ಪಿತಗೆ ದೂರ ಹೇಳಿದರು<br>ಕೃಷ್ಣ ಬಂದು ಕಂಸನ ಮಡುಹಿದನೆಂದು ॥32॥ |
| ಪುತ್ರಿಯರ ಮಾತ ಕೇಳಿ ಅತಿದುಃಖ ಕೋಪದಿಂದ<br>ಕೃಷ್ಣನ ಕೊಲ್ಲದೀ ಗದೆಯು ಯಾತಕೆ ಎಂದನು ॥33॥ |
| ಮಗಧರಾಜನ ಪುರಕೆ ಉರುಜಾತ ಬಂದಿರಲು<br>ಮಧರರೆಗೆಷ್ಟೆಂದು ಕೇಳಿ ಗದೆಯ ಒಗೆದನು ॥34॥ |
| ಮಧುರೆಗೊಂದು ಗಾವುದ ಹಡದವಳು ಇರುತಿರಲು<br>ಗದೆಗೆ ತಾನೆ ಮಾಡಿದಳಾ ಜರೆಯು ಆಗಲೆ ॥35॥ |

| |
|---|
| ಹಡದವಳು ಮಡಿದಳೆಂದು ಹಿಡಿದ ಒಂದು ಛಲವನು<br>ಕಡು ಉಗ್ರ ಸೈನ್ಯದಿಂದ ಕೂಡಿ ತೆರಳಿದ ‖36‖ |
| ಮಧುರಪುರಕೆ ಬಂದು ತಡೆದರು ಮಹಾದ್ವಾರವ<br>ಎದುರಿಗೆ ಉಗ್ರಸೇನ ಬರಲು ಬೈದ ದುರುಳನು ‖37‖ |
| ಪ್ರಾಣದಿಂದ ಸೆಳೆವೆ ಎನಲು ಗಗನದ ನುಡಿಯ ಕೇಳಿ<br>ತಿರುಗಿದನು ಬಲರಾಮ ರಣದಿಂದಲಿ ‖38‖ |
| ಅರುಣ ಉದಯಕ್ಕೆದ್ದು ತನ್ನ ಸೈನ್ಯ ಎರಡು ಭಾಗ ಮಾಡಿ<br>ಶತ್ರುಗಳ ಕಡಿದು ಭಾಂಡಾರ ತುಂಬಿದ ‖39‖ |
| ಮರಳಿ ಮರಳಿ ಯುದ್ಧ ಮಾಡಿ ಸೋತು ಹದಿನೆಂಟು ಬಾರಿ<br>ಕಾಲ ಯವನ ಸೇನೆಯು ಭಾಳ ಕೂಡಿತು ‖40‖ |
| ಸಾಗರನ ಬಳಿಗೆ ಹೋಗಿ ಬೇಗ ಸ್ಥಳವ ಬೇಡಿದ<br>ಸುಜನರ ಪಾಲಿಸೋದು ಧರ್ಮವೆಂದನು ‖41‖ |
| ಹರುಷದಿಂದ ವಿಶ್ವಕರ್ಮ ಲೀಲಾ ವಿನೋದಿಗೆ<br>ಹೇಮದುರ್ಗವ ನಿರ್ಮಿಸಿದ ನಿಮಿಷ ಮಾತ್ರದಿ ‖42‖ |
| ಇಬ್ಬರೊಂದಾಗಿ ಕೂಡಿ ಮಾರ್ಗದೊಳಗೆ ಬರುತಿರಲು<br>ವೃದ್ಧಬ್ರಾಹ್ಮಣ ಕಂಡು ಸ್ತೋತ್ರಮಾಡಿದ ‖43‖ |
| ಒಬ್ಬ ಎಂಬೋದೆ ಸಿದ್ಧ ಅದ್ವೈತವಾದಿಗಳಿಗೆ<br>ಬುದ್ಧಿ ಮೊಹಿಸಿದರು ಭಾರ್ಗವ ಕೃಷ್ಣರು ‖44‖ |
| ಭೂಭಾರ ಇಳುಹಬೇಕೆಂದು ಭೂಮಿಯ ಮೇಲೆ<br>ವಿಪ್ರ ನಿಮ್ಮ ಪಾದದ ಬಳಿಗೆ ಬಂದೆವು ‖45‖ |
| ಚಿಕ್ಕವರು ರಾಮಕೃಷ್ಣರು ಹತ್ತಿ ಗೋಮಂತವನ್ನು<br>ಅರ್ತಿಯಿಂದ ಆಟಗಳನು ಆಡುತಿದ್ದರು ‖46‖ |
| ಮದ್ಯ ಸ್ವೀಕರಿಸಿದ ಸಿದ್ಧರೊಡೆಯ ರಾಮನಾ<br>ಮುದ್ದು ಶ್ರೀದೇವಿ ಕೂಡ ರಮಿಸುತಿದ್ದನು ‖47‖ |
| ಪಂಚವರ್ಣದ ಮುಕುಟ ದುಷ್ಟ ಅಸುರ ಕದ್ದೊಯ್ಯಲು<br>ಪಕ್ಷಿರಾಜನು ಬೆನ್ನಟ್ಟಿ ತಂದನು ‖48‖ |
| ಕೊಡಗಲ್ಲಿನ ಮೇಲೆ ದೇವರ ಕ್ರೀಡೆ ಕಂಡು<br>ಗಗನದಿಂದ ಇಳಿದು ಬಂದ ಗರುಡನಾಗಲೇ ‖49‖ |
| ಪಂಚವರ್ಣದ ಮುಕುಟ ಮಸ್ತಕದ ಮೇಲೆ ಇಟ್ಟು<br>ಕೃಷ್ಣನ ಪಾದಕ್ಕೆರಗಿ ಸ್ತೋತ್ರ ಮಾಡಿದ ‖50‖ |

| |
|---|
| ಕಾರಣದ ಪುರುಷ ನೀನು ಸಕಲ ಜಗತ್ತಿಗೊಡೆಯ<br>ಮುಕ್ತರೊಂದು ದೋಷದೂರ ನಾರಾಯಣ ‖51‖ |
| ಅಸುರರ ಸಂಹಾರಿ ಸಕಲ ಕರ್ಮಕ್ಕೆ ಸಾಕ್ಷಿ<br>ಸೃಷ್ಟಿ ಸ್ಥಿತಿ ಸಂಹರಿಪ ನಾರಾಯಣ ‖52‖ |
| ವೃಷ್ಣಿ ಕುಲದಲ್ಲಿ ಅವತಾರವೆಂಬೋದೆ ಸಿದ್ಧ<br>ನಾನು ನಿನ್ನ ಭೃತ್ಯನೋ ಹೇಳು ಸೇವೆಯ ‖53‖ |
| ಕಡೆಗಣ್ಣಿನಿಂದ ನೋಡಿ ಕರ ಪಿಡಿದು ನೇವರಿಸಿ<br>ಗರುಡನ ಅಪ್ಪಿದರು ಪರಮ ಪುರುಷರು ‖54‖ |
| ಕರವೀರಪುರಕೆ ಬಂದು ಕರೆದರು ಮಣಿಭದ್ರನ<br>ಅವನ ಹಡೆದವನ ಕಳುಹಿದರು ಯಮಲೋಕಕೆ ‖55‖ |
| ಕೃಷ್ಣ ಉದ್ಧವನ ಕರೆದು ಮಂತ್ರ ವಿಚಾರವ ಮಾಡಿ<br>ಅನಿಷ್ಟ ಬಂದಿತೋ ನಮ್ಮ ವೃಷ್ಣಿಕುಲಕೆಂದ ‖56‖ |
| ನಕ್ಕರು ಯಾದವರು ಚಿಕ್ಕ ಬುದ್ಧಿಯನೆ ಮಾಡಿ<br>ಸಿಟ್ಟಿನಿಂದ ಗರ್ಗಾಚಾರ್ಯರು ಮಗನ ಪಡೆದರು ‖57‖ |
| ಉಕ್ಕಿನ ಪುಡಿಯ ಮುಕ್ಕಿ ಅತಿ ಉಗ್ರ ತಪಸಿನಿಂದ<br>ಕೃಷ್ಣಗೆ ಮೃತ್ಯು ಆದ ಕಾಲಯವನು ‖58‖ |
| ಮೃತ್ಯು ಆದ ಕಾಲಯವನ ಹಸ್ತಿ ಏರಿ ಬರುತಿರ(ಲು)<br>ಹಸ್ತದಿಂದ ಗುದ್ದಿ ಅವನ ನೆಲಕೆ ಕೆಡಹಿದ ‖59‖ |
| ದುಷ್ಟರಾಯರೆಲ್ಲ ಕೂಡಿ ಸುತ್ತಲೂ ಕಿಚ್ಚ ಹಚ್ಚಿ<br>ಹಚ್ಚಿದರೆ ರಾತ್ರಿ ಹೊತ್ತು ಒಂದು ಗಾವುದ ‖60‖ |
| ದುಷ್ಟ ಬೆನ್ನಟ್ಟಿ ಬರಲು ಹೊಕ್ಕನೆ ಗುಹೆಯನು<br>ಉಟ್ಟ ಹೊಂಬಟ್ಟೆಯಾಳು ತಾನತ್ತಲಡಗಿದ ‖61‖ |
| ನಿದ್ದೆ ಪೂರ್ಣವಾಗಲೆಂದು ಮತ್ತೊಬ್ಬ ಪುರುಷ ಮಲಗಿರ(ಲು) ಒದ್ದನೆ ಉದ್ಧಟ ಬಂದು ಪಾದದಿಂದಲಿ ‖62‖ |
| ಚಕ್ಷುಸ್ಸು ವಹ್ನಿಗಳಿಂದ ದುಷ್ಟ ಅಸುರ ಭಸ್ಮವಾದ<br>ಕೃಷ್ಣನ ಕಂಡು ರಾಯ ಸ್ತೋತ್ರ ಮಾಡಿದ ‖63‖ |
| ಈಶ್ವರ ನಿನ್ನ ಮಾಯದಿಂದ ವಿಶ್ವವೆಲ್ಲ ಮೋಹಿಸಿದ<br>ಸಕಲ ಪುರುಷರೆಲ್ಲ ವಿಷಯ ವಶದಲ್ಲಿಹೋರು ‖64‖ |
| ಸ್ತ್ರೀಯರಿಂದ ಮೋಹಿಸಿ ಭವ ಎಂಬ ಹಾಳು ಭಾವಿ<br>ಒಳಗೆ ಬಿದ್ದ ಪಶುವಿಗಿನ್ನುದ್ಧಾರ ಕಾಣೆರೋ ‖65‖ |
| ರಾಯರಾಯರನೆ ಗೆದ್ದು ಕಾಣಿಕೆಯ ತಾಹೆನೆಂದು<br>ರಾಣಿವಾಸದೊಳಗೆ ಬಿದ್ದ ವಾನರಾಗುವೆ ‖66‖ |

| |
|---|
| ಕೆಟ್ಟ ಕ್ರಿಮಿಗೆ ಸರಿಯಾದ ನಷ್ಟ ಶರೀರವನ್ನು<br>ಅತಿ ಪ್ರೀತಿ ಮಾಡಿಬಿಟ್ಟೆ ನಿಮ್ಮ ಪಾದವ ॥67॥ |
| ಶ್ರೇಷ್ಠರ ಸಂಗವನ್ನು ಕೊಟ್ಟು ರಕ್ಷಿಸಬೇಕು<br>ಉತ್ತಮ ಮೋಕ್ಷದಲ್ಲಿ ಫಲ ದೊರಕೊದೋ ॥68॥ |
| ಮುಚಕುಂದರಾಯಗೆ ಅಚ್ಯುತ ವರವ ಕೊಟ್ಟು<br>ಉತ್ತುಮಾ ದ್ವಾರಕಾಪುರಕೆ ತೆರಳಿದ ॥69॥ |
| ಆನಂದಭರಿತನಾದ ಗಂಗೆಯ ಮೊಮ್ಮಗನು<br>ಮೂರು ಲೋಕ ತನ್ನ ಅಂಗೈಯೊಳಗೆ ಬಂದಿತೆಂದನು ॥70॥ |
| ಅತ್ತೆಯ ಮಕ್ಕಳ ಬೇಟಿಗೆ ಕೃಷ್ಣ ಬರಲು<br>ಕೃತಾಮೋದದಿಂದ ಶೀಘ್ರ ತೆರಳಿ ಹೋದನು ॥71॥ |
| ಬ್ರಹ್ಮನ ಸಭೆಗೆ ಹೋಗಿ ರಾಯ ಮೂರ್ತಿ ಕಳುಹಿ ಮಗಳ<br>ಯಾರಿಗೆ ಕೊಡಲಿ ಎಂದು ವಿಧಿಯ ಕೇಳಿದ ॥72॥ |
| ಹಾಹಾ ಹೂಹು ಎಂಬ ಗಂಧರ್ವರು ಗಾನ ಮಾಡುತಿರಲು<br>ನಾಲ್ಕು ಯುಗವು ಹೋದವೊಂದು ಕ್ಷಣದೊಳಗೆಂದ ॥73॥ |
| ಬ್ರಹ್ಮ ಯೋಚಿಸಿಕೊಂಡು ತಿಳಿದು ಮಾತನಾಡಿದ<br>ಬಲರಾಮಗೆ ಕನ್ನಿಕೆ ಇದು ಯೋಗ್ಯವೆಂದನು ॥74॥ |
| ರಾಯ ತನ್ನ ಮಗಳನು ಧಾರೆ ಎರೆದ ರಾಮಗೆ<br>ನೇಗಿಲಿಂದ ತನ್ನ ಸರಿಯ ಮಾಡಕೊಂಡನು ॥75॥ |
| ಆನೆ ಮೇಲೆ ಭೇರಿ ಹಾಕಿಸಿ ನಾನಾ ದೇಶಗಳಲ್ಲಿ ಬಡಿಯೆ<br>ಬಾಲೆಗೆ ಸ್ವಯಂವರ ಎಂದು ಭೀಷ್ಮಕರಾಯ ಸಾರಿದ ॥76॥ |
| ಬಂದನಾಗ ಜರಾಸಂಧ ಕೊಂಡನಾಗ ಪೂಜೆಯ<br>ಅಂಗನೆ ಬಂದಾಳು ತನ್ನ ಕಂದಗೆಂದನು ॥77॥ |
| ವಿಗಡ ಮಾಯ ಉಳ್ಳವನು ಅಗಡ ಮಾಡ್ಯಾನು ಅವಳ<br>ಗರ್ವದಿಂದ ನೀವು ಅವನ ಕರೆಯಬೇಡಿರೋ ॥78॥ |
| ಸ್ವರ್ಗಾದಿಪತಿ ಒಪ್ಪ ದೂತನ್ನ ಕಳುಹಿಸಿ<br>ದೇವಾದಿದೇವನೆಂದು ಅಭಿಷೇಕ ಮಾಡಿಕೋ ॥79॥ |
| ಬಂಗಾರದ ಕೊಡದೊಳಗೆ ಗಂಗೆ ಉದಕವನೆ ತುಂಬಿ<br>ಇಂದಿರಾರಮಣಗಭಿಷೇಕ ಮಾಡಿರೋ ॥80॥ |
| ಮಗಧ ರಾಜನ ಬಿಟ್ಟು ಉಳಿದ ರಾಯರೆಲ್ಲರೋ<br>ಶ್ರೀಹರಿಯ ಹೊಗಳದಿದ್ದರೆ ಬಿಡುವೆ ವಜ್ರವ ॥81॥ |

| |
|---|
| ನೋಡಿರೋ ನೋಡಿರೋ ದೇವೇಂದ್ರನಾಡಿದ ಮಾತು<br>ಗೋಪಾಲಕನ ಬಲವು ಅವಗೆ ಗರ್ವವ ಬಂದಿತು ॥82॥ |
| ಭೀಷ್ಮಕನ ತನುಜರಿಂದ ಕೂಡಿ ಬಹುಮಾನ ಬಹಳ<br>ರಾಯರ ಮೋರೆಗಳ ತಗ್ಗು ಮಾಡಿದ ॥83॥ |
| ವಸುಧಾಧೀಶನ ಕರೆಸಿದ ತೋರಿಸಿದ ವಿಶ್ವರೂಪ<br>ಶಶಿಮುಖೇರು ನೋಡೆ ಭೀಷ್ಮಕರಾಯಗೆಂದನು ॥84॥ |
| ನಿನ್ನ ಮಗಳು ಶ್ರೀದೇವಿ ಕನ್ನಿಕೆ ತನಗಿರಲಿ<br>ಮುನ್ನ ಒಬ್ಬ ರಾಯರಿಗೆ ಅರುಹಳಲ್ಲವೋ ॥85॥ |
| ತತ್ವ ಉಪದೇಶವ ಮಾಡಿ ಪಕ್ಷಿವಾಹನ ತೆರಳಿ ಹೋದ<br>ಹುಚ್ಚರಾಗಿ ರಾಯರು ಕಂಗೆಟ್ಟು ಕುಳಿತರು ॥86॥ |
| ದೇವ ಬಾಹೊ ಸುದ್ಧಿಯ ಮಗಧ ದೂರದಲ್ಲಿ ಕೇಳಿ<br>ಇನ್ನ್ಯಾಗೆ ಮಾಡಲೆಂದ ಉಪಾಯ ಕೇಳಿದ ॥87॥ |
| ದೇವಾದಿದೇವನೆಂದು ನೀವೆಲ್ಲರೊ ಮೊರೆಯಿಡ್ಡೋಗಿ<br>ಸ್ವಾಮಿ ರಕ್ಷಿಸ್ಯಾನು ಶಿಶುಪಾಲಗೆಂದರು ॥88॥ |
| ಕಡೆಗಣ್ಣ ಸುಡುತ ಬಂದು ನೋಡಿದ ಮಗಧನು<br>ಬೈದು ಸಾಲ್ವಗೆ ಬಂದು ಶಿಶುಪಾಲನ ॥89॥ |
| ರುದ್ರ ನಮಗೆ ದೇವರೆ ನೀವೆ ನಮಗೆ ಗುರು ಭೂತ<br>ಹರಿ ನಮಗೆ ವೈರಿ ಎಂಬೋದೆ ಸಿದ್ಧವು ॥90॥ |
| ದೇವ ಬಾರದ ಮುನ್ನ ಮಾಡಿಕೊಂಬ ಮದುವೆಯ<br>ಸಾಲ್ವ ರುಕ್ಮ ಕೂಡಿ ಸಭೆ ಒಳಗೆ ನುಡಿದರು ॥91॥ |
| ದೇವಿ ಆಡಿದ ಮಾತು ಕೇಳಿದ ಮನದ ಕಂಗೆಡಿಕೆಯಿಂದ<br>ದೇವರ ಪಾದ ಇನ್ನ್ಯಾಗೆ ದೊರೆವುದೋ ॥92॥ |
| ಮನದ ಚಿಂತೇಲಿ ಇರಲು ಮನೆಗೆ ಒಬ್ಬ ದ್ವಿಜನು ಬಂದ<br>ಕಾಲ ಮೇಲೆ ಎರಗಿ ಪೂಜೆ ಮಾಡುತ್ತಿದ್ದಳು ॥93॥ |
| ಕೃಷ್ಣರಾಯರ ಕರೆದು ತಂದು ವಿಪ್ರ ನನಗೆ ಕೊಟ್ಟರೆ<br>ವೃತ್ತಿಗಳ ಕೊಟ್ಟು ನಿನ್ನ ರಕ್ಷಿಸುವೆನು ॥94॥ |
| ಯಾದವರಾಯನ ಕರೆದು ತಂದು ಬ್ರಾಹ್ಮಣ ನನಗೆ ಕೊಟ್ಟರೆ<br>ಸೀಮೆಗಳ ಕೊಟ್ಟು ನಿನ್ನ ರಕ್ಷಿಸುವೆನು ॥95॥ |
| ಬಾಲೆ ಕೇಳು ಎನ್ನ ಮಾತು ಬಾಯಿಮಾತಿಗವನು ಬಾರ<br>ವಾಲೆ ಬರೆದು ಕೊಡುವದು ನಿಜ ವಾಕ್ಯವ ॥96॥ |

| |
|---|
| ಸ್ವಸ್ತಿ ಶ್ರೀಮತು ಎಂದು ಹಸ್ತವೆತ್ತು ಮುಗುದಾಳು<br>ರಕ್ಷಿರಕ್ಷಿಸೆಂದು ವಾಲೆ ಬರಿಯುತ್ತಿದ್ದಳು ‖97‖ |
| ಮುತ್ತಿನ ಕಂಠವಾ ಚಿಕ್ಕ ರುಕ್ಮಿಣಿ ಪಿಡಿದು<br>ಪಕ್ಷಿವಾಹನನಗೆ ವಾಲೆಗಳ ಬರಿಯುತ್ತಿದ್ದಳು ‖98‖ |
| ಹವಳದ ಕಂಠವ ಹರದಿ ರುಕ್ಮಿಣಿ ಪಿಡಿದು<br>ಗರುಡವಾಹನನಗೆ ವಾಲೆಗಳ ಬರಿಯುತ್ತಿದ್ದಳು ‖99‖ |
| ಚಿನ್ನದ ಕಂಠವ ಕನ್ನೆ ರುಕ್ಮಿಣಿ ಪಿಡಿದು<br>ಪನ್ನಂಗಶಯನಗೆ ವಾಲೆಗಳ ಬರಿಯುತ್ತಿದ್ದಳು ‖100‖ |
| ಅಕ್ರೂರನ ಕಾಯಿದಿ ಅಜಮಿಳಗೆ ವರವಿತ್ತಿ<br>ಭಕ್ತಶರಣ್ಯನೆ ಬಂದು ರಕ್ಷಿಸೆಂದಳು ‖101‖ |
| ಅಂಬರೀಷನ ಪೊರೆದಿ ಗಜೇಂದ್ರಗೆ ವರವಿತ್ತಿ<br>ಸಿಂಧುಶಯನನೆ ಬಂದು ಎನ್ನ ರಕ್ಷಿಸೆಂದಳು ‖102‖ |
| ಕಂಗಳ ಕಾಡಿಗೆಯ ತೆಗೆದು ಅಂಗನೆ ತನ್ನ ಮೂಗುತಿಂದ<br>ನಂದನಂದನೆಗೆ ವಾಲೆ ಬರಿಯುತ್ತಿದ್ದಳು ‖103‖ |
| ಬರೆದ ವಾಲೆಗೆ ಎಲ್ಲ ಅರೆದ ಅರಿಸಿದ ಹಚ್ಚಿ<br>ಅರನ ಮುದ್ರೆ ಒತ್ತಿ ವಿಪ್ರನ ಕೈಲಿ ಕೊಟ್ಟಳು ‖104‖ |
| ಪತ್ರ ವಿಪ್ರಗೆ ಕೊಟ್ಟು ಕೃಷ್ಣಗ್ಹೇಳಿ ಕಳುಹಿದಳು<br>ದುಷ್ಟ ಸೋದರನ ಮಾತು ಲೆಕ್ಕ ಮಾಡದೆ ‖105‖ |
| ತೆರಳಿದ ಬ್ರಾಹ್ಮಣ ಯಾದವರಾಯನ ಬಳಿಗೆ ಬಂದ<br>ದಾವ ಕಡೆಯಿಂದ ಬಂದಿರೆಂದು ಕೇಳಿದ ‖106‖ |
| ಕಂಡಿನೀಪುರದಿಂದ ಅಂಗನೆ ಹೇಳಿ ಕಳುಹಿದಳು<br>ರಂಗ ವಾಲೆ ತೆಗೆದೋದಿ ಸ್ಯಂದಣ ಹೂಡೋ ಎಂದ ‖107‖ |
| ಅರಸಿನದೊಲೆಯ ಸರಸಿಜಾಕ್ಷ ತೆಗೆದೋದಿ<br>ಸರಸಿಜ ಮುಖಿಯಳು ಮನಸೋತಳೆಂತ ತಿಳಿದನು ‖108‖ |
| ಗುಣಗಳಿಂದ ಪೂರ್ಣ ತ್ರಿಭುವನಗಳಿಗೆ ಸುಂದರ<br>ಶ್ರವಣದಿಂದ ಕೇಳಿ ಮನದ ತಾಪ ಕಳೆವೆನು ‖109‖ |
| ಮಂಗಳಾಂಗನೆಯರಿಗೆ ಮಂಗಳ ಮೂರುತಿಯು ನೀನೆ<br>ಬಂದು ನಿಲ್ಲೆನ್ನ ನೀ ಮುಕುಂದ ನಯನಕೆ ‖110‖ |
| ಸರ್ವ ರಾಯರುಗಳು ಬಿರುದಿಲಿ ಬಾಹೋರು<br>ದಮಘೋಷಣನ ಸುತೆಗೆ ಸೋದರೆನ್ನ ಕೊಡುವನು ‖111‖ |

| |
|---|
| ತಪ್ಪದೆ ಬರಲುಬೇಕು ಪೃಥ್ವಿಪತಿ ರಾಯರೆನ್ನ<br>ಎತ್ತಿಕೊಂಡು ಒಯ್ದಾರು ಕೃಷ್ಣ ರಕ್ಷಿಸೋ ॥112॥ |
| ನರಿಗಳ ಒಳಗೆ ಮಧ್ಯ ರಾಜಕರಿ ಒಯ್ದಂತೆ<br>ವೀರ ಎಂಬ ಶುಲ್ಕದಿಂದ ಮಡುಹಿ ರಾಯರ ॥113॥ |
| ಭಕ್ತರ ಪ್ರಿಯ ಕೃಪಣಲೋಕ ಕಾರುಣ್ಯಮೂರ್ತಿ<br>ವೃತ್ತಿ ನಿನ್ನ ದಾಸಿ ಪಾದಕಮಲ ಸೇವೆಗೆ ॥114॥ |
| ಯಜ್ಞದಾನ ಗುರುಸೇವೆ ವಿಪ್ರಪೂಜೆ ಮಾಡಿದರೆ<br>ಉತ್ತಮ ಪುರುಷ ಎನಗೆ ಪತಿಯಾಗುವೆಂದು ॥115॥ |
| ಗದಾಗ್ರಜನ ಬಯಸಿ ಮನ ಎರಗೋದು ಅರಿದುದಲ್ಲ<br>ಅನಾದಿಕಾಲದಲ್ಲಿ ನೀನೆ ಪತಿ ಎನಗೆ ॥116॥ |
| ಸರಸರನೆ ರಥವ ತರಿಸಿ ಹರುಷದಿಂದ ತೆರಳಿದ<br>ಶಶಿಮುಖಿಯರ ಮನಸ್ಸಿನ ಪ್ರಸನ್ನ ಮೂರುತಿ ॥117॥ |
| ಶೈಬ್ಯ ಸುಗ್ರೀವ ಮೇಘಪುಷ್ಪ ಬಲಾಹಕ<br>ನಾಲ್ಕು ಕುದುರೆಗಳ ಕಟ್ಟಿ ರಥವ ನಡೆಸಿರೆಂದನು ॥118॥ |
| ಚತುರ್ಭುಜ ಪತಾಕಿ ಶ್ರೀಗಂಧದ ತಳಿಗೆ ಹಿಡಿದರು<br>ತೋರಣದಿಂದ ಬೀದಿ ಶೃಂಗಾರವಾಯಿತು ॥119॥ |
| ಬಲರಾಮ ಯಾದವರು ಸಹಿತ ಬಳಿ ಹಿಡಿದು ನಡೆದರು<br>ಕದನಕ್ಕೆ ಇವನೆ ಈಗ ಮೊದಲೆ ಎಂದರು ॥120। |
| ಚಚ್ಚರನೆ ಬಂದರು ದಿಕ್ಕು ದಿಕ್ಕಿನ ರಾಯರು<br>ರುಕ್ಮಿಣಿಯ ಮದುವೆಯ ನೋಡಬೇಕೆಂದು ॥121॥ |
| ಬೇಗನೆ ಬಂದರು ರಾಯ ರಾಯರುಗಳು<br>ದೇವಿಯ ಮದುವೆಯ ನೋಡಬೇಕೆಂದು ॥122॥ |
| ಬಂದ ರಾಯರಿಗೆಲ್ಲ ಚೆಂದ ಚೆಂದದ ಮನೆಯ ಬಿಟ್ಟು<br>ತಂಡ ತಂಡದಿ ಪೂಜೆಯ ರುಕ್ಮ ಮಾಡುತ್ತಿದ್ದನು ॥123॥ |
| ಸಂದಣಿಯ ಕಂಡಳು ನೊಂದಳು ಮನದೊಳಗೆ<br>ರಂಗನಿಲ್ಲದ ಕಂಗಳಿಗ ಭಂಗ ಬಂದಿತೆಂದಳು ॥124॥ |
| ಕಷ್ಟದಿಂದ ನೊಂದಳು ಮಿತ್ರೆ ತನ್ನ ಮನದೊಳಗೆ<br>ಕೃಷ್ಣರಾಯನಿಲ್ಲದ ಪಟ್ಟೆ ಮಂಚವ್ಯಾತಕೆ ॥125॥ |
| ಅಷ್ಟ ವೈಭೋಗದ ಸತಿಯರು ನನಗ್ಯಾತಕೆ<br>ಅತ್ತತ್ತ ಹೋಗಿ ಬಿಗಿಲಿಕ್ಕಿ ಎಂದಳು ॥126॥ |

| |
|---|
| ಕಷ್ಟದಿಂದ ಮಲಗಿರಲು ಮಿತ್ರೆ ಸ್ವಪ್ನದಲ್ಲಿ ಬಂದು<br>ಕೃಷ್ಣರಾಯ ಮುತ್ತಿನ ಹಾರ ಕೊಡುತಲಿದ್ದನು ॥127॥ |
| ಬಾಲೆ ನಗುತ ಎದ್ದಳು ನೀಲಗುರುಳು ತಿದ್ದುತ<br>ಹಿರಿಯ ನಾರಿಯ ಕರೆಯೆ ಸ್ವಪ್ನ ಹೇಳುವೆ ॥128॥ |
| ಅಚ್ಯುತರಾಯ ಬಂದು ಹತ್ರೇಲಿ ಕುಳಿತುಕೊಂಡು<br>ಮುತ್ತಿನ ಸರವ ತೆಗೆದು ಕೊಡುತಲಿದ್ದನು ॥129॥ |
| ಯಾದವರಾಯ ಬಂದು ಸಾರೇಲಿ ಕುಳಿತುಕೊಂಡು<br>ಹೂವು ತಂದ ಕಬರಿಯಲ್ಲಿ ಮುಡಿಸುತಿದ್ದನು ॥130॥ |
| ಅಕ್ಕ ಈ ಸ್ವಪ್ನವ ಕಟ್ಟಿಕೊಳ್ಳೆ ಸೆರಗಿನಲಿ<br>ಕೃಷ್ಣರಾಯನು ಪತಿಯಾಗುವ ಸತ್ಯ ಸ್ವಪ್ನವು ॥131॥ |
| ಲೆಕ್ಕವಿಲ್ಲದೆ ಮಕ್ಕಳು ಹುಟ್ಟುವೋರು ಬಾಲೆ ನಿನಗೆ<br>ಮುತ್ತಿನ ಹಾರಗಳ ಕೊಡೆ ಮುತ್ತೈದೇರಿಗೆ ನೀನು ॥132॥ |
| ನಕ್ಕಳು ಮನದೊಳಗೆ ಚಿಕ್ಕ ರುಕ್ಮಿಣಿದೇವಿ<br>ಕರ್ಪೂರ ವೀಳ್ಯಗಳ ತರಿಸಿ ಕೊಟ್ಟಳವರಿಗೆ ॥133॥ |
| ಘಳಿಗೆ ಬಟ್ಟಲುಗಳ ಹಾರಿ ಕರೆಯಬಂದ ಬ್ರಾಹ್ಮಣ<br>ಹಿರಿಯರ ಕುಲದೇವತೆ ಗುಡಿಗೆ ನಡೆದಳು ॥134॥ |
| ನಾಟಕಸಾಲೆಯವರಾಡುತ ಮುಂದೆ ಭಟರು ಹೊಗಳುತೆ<br>ಕೊಂಬು ಕೊಳನಲೂದುತ ಚೆಂದದಿಂದೀ ಚಿತ್ತವು ॥135॥ |
| ಅಷ್ಟ ಪತ್ರಿಕೆಯುಟ್ಟು ಅಷ್ಟಸ್ತ್ರೀಯರೊಡಗೂಡಿ<br>ಅಷ್ಟಮಂಗಳ ವಾದ್ಯದಿಂದ ಗುಡಿಗೆ ಬಂದಳು ರುಕ್ಮಿಣೀದೇವಿ ॥136॥ |
| ಬಂದು ಪೂಜೆಯನೆ ಮಾಡಿದಳೆ ಶೃಂಗಾರ ಅಲಂಕಾರದಿಂದ<br>ಅಂಗನೇರಪೂಜೆಗಳ ಮಾಡುತ್ತಿದ್ದಳು ರುಕ್ಮಿಣೀದೇವಿ ॥137॥ |
| ರುದ್ರರಾಣಿಯ ಪೂಜೆ ಮಾಡಿ ಮುದ್ದು ರುಕ್ಮಿಣಿದೇವಿ<br>ವೃದ್ಧ ನಾರೇರಿಗೆಲ್ಲ ಮೊರದ ಬಾಗಿಣ ಕೊಟ್ಟಳು ॥138॥ |
| ಶ್ಯಾಮ ವರ್ಣದ ರೂಪಿನವರಿಗೆ ಕ್ಷೋಣಿಯಲ್ಲಿ ಸೂಕ್ಷ್ಮದ ವಸ್ತ್ರ<br>ನಡವಿನೊಡ್ಯಾಣ ಹಾರ ಬಾಹುಪುರಿಗಳು ॥139॥ |
| ಶ್ರೀದೇವಿ ತನ್ನ ಚೆಲ್ವಿಕೆಯ ಶ್ರೀಹರಿಗೆ ಸಮರ್ಪಿಸುತ ಬರಲು<br>ಬಿರಿದು ಹೋಗಿ ರಾಯರಿಗೆದುರಿಗ್ಹಾಯಿದ ॥140॥ |
| ರಾಜೀವಲೋಚನೆ ಹಂಸಗಾಮಿನಿ ನಡೆದು ಬರಲು<br>ವಸುಧೆ ರಾಯರೆಲ್ಲರೂ ಮೂರ್ಛೆಗೈದರು ॥141॥ |

| |
|---|
| ಅರಳುಗಂಗಳ ಬಾಲೆ ಎಡಗೈಯಲಿ ಕುರಳ ತಿದ್ದಿ<br>ಎದುರಾಗಿ ನೋಡುತಿದ್ದಳು ಶ್ರೀಹರಿಯ ರಥವನು ‖ 142 ‖ |
| ನಡುವೆ ಹೊಕ್ಕು ಮೃಗರಾಜ ಕೈಹಿಡಿದು ರಥವನೇರಿಸಿದ<br>ನರಿಗಳ ಒಳಗೆ ಕರಿಯನೊಯ್ದನಾಗಲೇ ‖ 143 ‖ |
| ಸಂಪಿಗ್ಹೂವಿನ ಮಾಲಿಕೆಯ ಕಂಚೆ ರುಕ್ಮಿಣಿ ಪಿಡಿದು<br>ಸಂಪನ್ನಸ್ವಾಮಿ ಕೊರಳಿಗ್ಹಾಗಿ ನಗುತ ನಿಂತಳು ‖ 144 ‖ |
| ಅರಳುಮಲ್ಲಿಗೆ ಸರವ ಹರದಿ ರುಕ್ಮಿಣಿ ಪಿಡಿದು<br>ಗರುಡವಾಹನನ ಕೊರಳಿಗ್ಹಾಕಿ ನಗುತ ನಿಂದಳು ‖ 145 ‖ |
| ರಾಯರ ಮಗಳನ್ನ ಗೋವಳನೆತ್ತಿ ಒಯ್ದನೆಂದು<br>ದಾಳಿಹರಿದು ಬಾಯಿ ಬಿಡುತ ಬಂದ ರುಕ್ಮನು ‖ 146 ‖ |
| ಬಗುಳುತ ರುಕ್ಮನು ನಡುಬಟ್ಟೇಲಿ ಬಂದು<br>ತಡೆಯ ಕಟ್ಟಿ ಶರದ ಮಳೆಯ ಕರೆದನಾಗಲೇ ‖ 147 ‖ |
| ತನ್ನ ಭಾವನ ಹಿಡಿದು ಹೆಡಮುರಿಗೆ ಕಟ್ಟಿದ ಹರಿಯು<br>ಕೇಶ ಮೀಸೆ ಸವರಿದನು ಬಾಣದಿಂದಲಿ ‖ 148 ‖ |
| ಅಸುರನ ಮೊರೆಗ ಮಸಿಯ ಬೊಟ್ಟನೆ ಇಟ್ಟು<br>ಶಶಿಮುಖಿ ನಿಮ್ಮಣ್ಣನ ನೋಡೆ ಎಂದನು ‖ 149 ‖ |
| ಚೆನ್ನಿಗನ ಮೊರೆಗಂ ಸುಣ್ಣದ ಬೊಟ್ಟನೆ ಇಟ್ಟು<br>ಹೆಣ್ಣೆ ಮಿಮ್ಮಣ್ಣನ ನೋಡೆ ಎಂದನು ‖ 150 ‖ |
| ಕೋಮಲೆ ಹಾರಿ ಜಿಗಿದು ಪಾದಕ್ಕ ಬಂದೆರಗಿದಳು<br>ಸೋದರನ್ನ ಪ್ರಾಣದಿಂದ ಉಳುಹಿ ಬಿಡುವುದು ‖ 151 ‖ |
| ಮಡದಿ ಮುಖವ ನೋಡಿದ ಪಾಲ್ಗಡಲೊಡೆಯ ನುಡಿದನು<br>ನಿನ್ನೋಡಹುಟ್ಟಿದವರು ಕೂಡೆ ನಗೆಯು ಉಂಟೇನೇ ‖ 152 ‖ |
| ಹೆಡಮುರಿಗೆ ಬಿಚ್ಚಿದ ಲಲನೆ ಒಡಂಬಡಿಸಿದ<br>ಹಿಡಿಯದಿರೆ ಎನ್ನ ಮೇಲೆ ಕಡುಕೋಪವ ‖ 153 ‖ |
| ಬಲರಾಮ ಮನದೊಳಗೆ ನಗುತ ಮಾತನಾಡಿದ<br>ಇದು ಏನೊ ಈ ರೂಪ ಮಾಡಿದ್ಯೋ ರಾಯಗೆ ‖ 154 ‖ |
| ಕೈ ಹೊಡದು ನಗುತಲಿ ನರ್ಮದೆಯ ದಾಟಿದ<br>ವಧೂ ವರರು ದ್ವಾರವತಿಗೆ ಬಂದರು ‖ 155 ‖ |
| ಕದಲಾರತಿಗಳ ತಳಿಗಿ ಒಳಗೆ ತುಂಬಿಕೊಂಡು<br>ಕಮಲ ಮುಖಿಯರು ಕಮಲನಾಭಗೆ ತಂದರು ‖ 156 ‖ |

| |
|---|
| ಜಲಗಳಿಂದ ಪಾದ ತೊಳೆದು ಕುದುರೆಯ ಇಳುಹಿದರು<br>ಒಳಗೆ ಕರೆದು ತಂದರೆ ಹಸೆಯ ಜಗುಲಿಗೆ ॥157॥ |
| ಕರ್ತು ಶ್ರೀದೇವಿ ಬಂದು ಹೊಕ್ಕಳೆ ಪಟ್ಟಣವನ್ನು<br>ಅಷ್ಟ ಐಶ್ವರ್ಯ ಮನೆ ಮನೆಗೆ ತುಂಬಿತು ॥158॥ |
| ಮುತ್ತಿನ ಕರಿಯಮಣಿಗೆ ರತ್ನದ ಹರಳ ಬಿಗಿದು<br>ಕೃಷ್ಣರಾಯ ಮಿತ್ರೆಯ ಕೊರಳಿಗೆ ಕಟ್ಟುತಿದ್ದನು ॥159॥ |
| ಚೆನ್ನದ ಕರಿಯಮಣಿಗೆ ರನ್ನದ ಹರಳು ಬಿಗಿದು<br>ಚೆನ್ನಿಗರಾಯ ಮಡದಿ ಕೊರಳಿಗ ಕಟ್ಟುತಿದ್ದನು ॥160॥ |
| ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದ<br>ನಾಲ್ಕು ವೇದದಿಂದ ಕಟ್ಟಿದರು ಕಂಕಣ ದಾರವ ॥161॥ |
| ಬ್ರಾಹ್ಮಣರು ಹೋಮಿಸಿ ದಾರಬಂಧನವ ಮಾಡಿ<br>ಬಾಲೆ ನಿನಗೆ ದಾವ ಭಯ ಬೇಡವೆಂದರು ॥162॥ |
| ಮುಗುಳು ನಗೆ ನಗುತಲಿ ಎಡಗಡೇಲಿ ಕುಳಿತಳು<br>ಮುಗುಳು ನಗೆ ನಾಚಿ ತಲೆಬಾಗಿ ಕಾಂತಗೇ ॥163॥ |
| ಹೆಂಡತೀಯ ಕೂಡಿಕೊಂಡು ಬೇಗ ಬಾ ಕೃಷ್ಣರಾಯ<br>ತಾಯಿ ದೇವಕಿ ಮಗನ ಕರೆಯುತ್ತಿದ್ದಳು ॥164॥ |
| ಕಂಕಣದ ಕೈಯ ಹಿಡಿಯೆ ಪಂಕಜಮುಖಿಯು ನಡುಗೆ<br>ವೈಕುಂಠಪತಿಗೆ ಸ್ತ್ರೀಯರ ವಂಚನೇಯ ನೋಡಿರೋ ॥165॥ |
| ಮಿತ್ರೆ ಬರಲು ಮಾಣಿಕ್ಯಾ ಬಟ್ಟಲ ಒಳಗೆ ತುಂಬಿ<br>ಹೊಸ್ತಿಲೊಳಗೆ ಇಟ್ಟು ಕಾಲಿನೆಡವು ಎಂದರು ॥166॥ |
| ಬಾಲೆ ಬರಲು ಮಾಣಿಕ್ಯಾ ಮಾನದ ಒಳಗೆ ತಂಬಿ<br>ಬಾಗಿಲೊಳಗೆ ಇಟ್ಟು ಕಾಲಿಲೆಡವು ಎಂದರು ॥167॥ |
| ಬಟ್ಟು ಸೋಕಿ ಉರುಳನು ಬಳಿದುಕೊಂಡು ಬ್ರಾಹ್ಮಣ<br>ಚಿಕ್ಕ ಸುಭದ್ರೆ ಮಗಳ ಬೇಡುತಿದ್ದಳು ॥168॥ |
| ಬೆರಳು ಸೋಕಿ ಉರುಳನು ಬಳಿದುಕೊಂಡ ಬ್ರಾಹ್ಮಣ<br>ಭಗಿನಿ ಸುಭದ್ರೆ ಮಗಳ ಬೇಡುತಿದ್ದಳು ॥169॥ |
| ಏನು ಬೇಡಿದ್ದು ಬೇಡು ಬಾಲೆ ನಿನಗೆ ಕೊಡುವೆನು<br>ಎನ್ನ ಮಡದಿ ತನ್ನ ಮಗಳ ನಿನ್ನ ಮನೆಗೆ ಕೊಡವಳೆ ॥170॥ |
| ಆವು ಕಾವ ಗೋವೆಳೆತ್ತ ಪಾಂಡವರ ಭಾಗ್ಯವೆತ್ತ<br>ಏನು ಕಾರಣ ಕೃಷ್ಣ ಹೆಣ್ಣ ಕೊಡಿರಿ ಎಂದಳು ॥171॥ |

| |
|---|
| ಅತ್ತೆ ಮಕ್ಕಳ ಭಾಗ್ಯ ಎತ್ತ ಸೋರಿಹೋದರೇನೆ<br>ನಾನು ಹಸ್ತಿನಾವತಿಗೆ ಹೆಣ್ಣ ಕೊಡೆನು ಎಂದನು ॥172॥ |
| ಮಾವನ ಮಕ್ಕಲ ಭಾಗ್ಯ ಹ್ಯಾಗೆ ಸೂರಿಹೋದರೇನ<br>ನಾವು ಪಾಂಡವರಿಗೆ ಹೆಣ್ಣ ಕೊಡೆವು ಎಂದನು ॥173॥ |
| ದುಷ್ಟ ನಿಮ್ಮ ಭೀಮ ಏಕಚಕ್ರ ನಗರಕ್ಕೆ ಪೋಗಿ<br>ಭಿಕ್ಷೆ ಬೇಡಿ ಬಕನ ಸೀಳಿ ಬಂದುದಿಲ್ಲವೇ ॥174॥ |
| ಕುಂತಿಯ ಕೊಟ್ಟು ನಮಗೆ ಅಂತರವು ಆಯಿತು<br>ಪಂಚ ಪಾಂಡವರಿಗೆ ಹೆಣ್ಣ ಕೊಡೆನು ಎಂದನು ॥175॥ |
| ಕೃಷ್ಣರಾಯ ನಿನ್ನ  ಮಗಳ ಕೊಟ್ಟರೂ ನಾ ಒಲ್ಲೆನೊ<br>ನಿನ್ನ ಮಿತ್ರೆಯರು ಎಲ್ಲಗಯ್ಯಾಳೆರೆಂದಳೂ ॥176॥ |
| ರಂಗರಾಯ ನಿನ್ನ ಮಗಳ ತಂದು ಕೊಟ್ಟರೂ ಒಲ್ಲೆನೊ<br>ನಿನ್ನ ಹೆಂಡರ ಎಲ್ಲ ಗಯ್ಯಾಳೆರೆಂದಳೊ ॥177॥ |
| ಕಂದಳಾ ಮಾತಿಗೆ ವಸುದೇವ ನಂದನು<br>ಪಂಚ ಪಾಂಡವರು ನಿಮಗೆ ಕಾಂತರೇನಿರೋ ॥178॥ |
| ಇಷ್ಟು ಈ ಮಾತ ಕೇಳಿ ಕೃಷ್ಣರ ತಂಗಿ ಏನೆಂದಳು<br>ಪಂಚ ಪಾಂಡವರು ನಿಮಗೆ ಬಲವರೇನಿರೊ ॥179॥ |
| ಅತ್ತೆ ಭಂಡಾರದೊಳಗೆ ಹೊಕ್ಕಳೆ ಲಕ್ಷ್ಮಿ ಬಂದು<br>ಪುತ್ಥಳಿ ಸರವ ತೆಗೆದು ಕೈಲಿ ಕೊಟ್ಟಳೊ ॥180॥ |
| ಹಾಲು ತುಪ್ಪದ ಚಟ್ಟು ದೇವರ ಜಗುಲಿಗ್ಹೊಯ್ದು<br>ದೇವಕಿಯ ಸೆರಗಿಗೆ ಒರಸುತ್ತಿದ್ದಳೊ ॥181॥ |
| ಹವಳದ ಆರತಿಯ ಹರದಿ ದೇವಕಿ ಪಿಡಿದು<br>ಹರಿಗೂ ರುಕ್ಮಿಣಿಗೂ ಎತ್ತಿ ಬೆಳಗುತ್ತಿದ್ದಳೊ ॥182॥ |
| ಮುತ್ತಿನ ಆರತಿಯ ಅತ್ತೆ ದೇವಕಿ ಪಿಡಿದು<br>ಕೃಷ್ಣ ರುಕ್ಮಿಣಿಗೆ ಎತ್ತಿ ಬೆಳಗುತ್ತಿದ್ದಳು ॥183॥ |
| ಕೃಷ್ಣನ ಅರಮನೆ ಒಳಗೆ ಕರ್ಪೂರದೊಕುಳಿಯನಾಡೆ<br>ಪಟ್ಟಾವಳಿ ಉಡುಗೆ ಬಲರಾಮ ಕೊಟ್ಟನು ॥184॥ |
| ರಂಗನಾ ಅರಮನೆ ಒಳಗೆ ಗಂಧದೋಕುಳಿಯನಾಡೆ<br>ಬಂದ ಬೀಗರಿಗೆ ಉಡುಗರೆಯ ಕೊಟ್ಟನೊ ॥185॥ |
| ಮಗಳ ಮದುವೆಯ ಮಾಡಿ ಬಳಗವ ಕೂಡಿಕೊಂಡು<br>ತೆರಳಿದ ಭೀಷ್ಮಕ ತನ್ನ ಪಟ್ಟಣಕಾಗಿ ॥186॥ |

| |
|---|
| ವರ ಆಸನದ ಮೇಲೆ ಉಗ್ರಸೇನನ ಕುಳ್ಳಿರಿಸಿ<br>ಕೆಳಗೆ ನಿಂತು ಊಳಿಗವನ್ನು ಮಾಡುತಿದ್ದನು ॥187॥ |
| ರವಿಯ ಸೇವೆಗಾಗಿ ಮಣಿಯ ಕೊರಳಿಗೆ ಹಾಕಿ ಬರೆ<br>ರಾಯಗಿರಲುಬೇಕೆಂದು ನುಡಿದ ಕೃಷ್ಣನು ॥188॥ |
| ದೇವರ ನುಡಿಯ ಕೇಳಿ ಲೋಭದಿಂದ ಮನೆಗೆ ತೆರಳೆ<br>ಸೋದರನ ಪ್ರಾಣದಿಂದ ಮಡುಹಿ ಹೋಯಿತು ॥189॥ |
| ಸಿಂಹ ಬಂದು ಪ್ರಸೇನನ ಸೀಳಿ ಮಣಿಯ ಕೊಂಡು ಒಯ್ದೀತು<br>ಎದುರಿಗೆ ಕರಡಿ ಬಂದು ಕೊಂದಿತು ಸಿಂಹನ ॥190॥ |
| ರತ್ನವ ತೆಗೆದು ತನ್ನ ಪುತ್ರಿಯ ತೊಟ್ಟಲಿಗೆ<br>ಕಟ್ಟಿ ಆ  ಭಯದೊಳಗೆ ನಿಶ್ಚಿಂತೇಲಿದ್ದನು ॥191॥ |
| ಅಲ್ಲಲ್ಲಿ ವಾರ್ತೆಗಳು ಫುಲ್ಲಲೋಚನ ಕೃಷ್ಣ<br>ಅನುಜನ ಮಡುಹಿ ಮಣಿಯ ಒಯ್ದನೆಂಬರು ॥192॥ |
| ಆಡಿದ ವಾರ್ತೆಗಳ ಕರ್ಣ ಕರ್ಣದಿಂದ ಕೇಳಿ<br>ಸುಜನರ ಕೂಡಿ ಹೆಜ್ಜೆ ಅರಸುತ ಬಂದನು ॥193॥ |
| ಸುಜನ ಹೊರಗೆ ಇಟ್ಟು ಒಳಗೆ ಬಂದನು ಕೃಷ್ಣ<br>ಕರಡಿಯ ಕೂಡೆ ಬಹಳ ಯುದ್ಧವ ಮಾಡಿದ ॥194॥ |
| ದಿವಸ ಮೀರಿ ಹೋಯಿತೆಂದು ತಿರುಗಿ ಊರಿಗೆ ಹೋಗುತಿರಲು<br>ಕುತ್ಸಿತ ಬುದ್ಧಿಯಿಂದ ರಾಯರು ಬೈದರು ಕೃಷ್ಣನ ॥195॥ |
| ಗಂಡನಾ ಬಂಧನ ದಂಡಿಸಿ ಹೋಗಲೆಂದು<br>ಚಂಡಿಕಾ ಪೂಜೆಗಳ ಮಾಡೆ ರುಕ್ಮಿಣೀ ॥196॥ |
| ಕೃಷ್ಣನ ಪೆಟ್ಟುಗಳು ಘಟ್ಯಾಗಿ ಬೀಳುತಿರಲು<br>ಕಷ್ಟದಿಂದ ಜಾಂಬವಾ ಬಳಲಿ ಸೋತನೂ ॥197॥ |
| ಬಳಲಿ ಬೀಳೆ ಎದುರಿಗೆ ರಾಮ ಮೂರ್ತಿನೇ ಕಂಡು<br>ತ್ರಾಹಿ ತ್ರಾಹಿ ಎಂದು ಕರವ ಮುಗಿದು ನಿಂತನೂ ॥198॥ |
| ಲಕ್ಷ್ಮೀಶ ಎನ್ನ ಅಪರಾಧವನ್ನು ಕ್ಷಮಿಸಬೇಕು<br>ಕುಕ್ಷಿ ಒಳಗೆ  ಇಟ್ಟು ಎನ್ನ ರಕ್ಷಿಸೆಂದನು ॥199॥ |
| ಪುತ್ರಿ ರತ್ನ ಸಹಿತವಾಗಿ ಕೊಟ್ಟನೆ ಕೃಷ್ಣಗೆ<br>ಕೃತಾರ್ತನಾದೆನೆಂದು ಕರವ ಮುಗಿದನು ॥200॥ |
| ಹೆಂಡತಿಯ ಕೂಡಿಕೊಂಡು ಬಂದನಾಗ ದ್ವಾರಾವತಿಗೆ<br>ಬಂಧುಗಳಿಗೆಲ್ಲ ಸಂತೋಷವಾಯಿತು ॥201॥ |

| |
|---|
| ನಿಂದ್ಯ ಪರಿಹರಿಸಿಕೊಂಡು ತಂದು ಕೊಟ್ಟ ರತ್ನವನ್ನು<br>ಮಂದಿ ಒಳಗೆ ಇವ ಪ್ರಚಂಡನೆಂದರು ॥202॥ |
| ಕುತ್ಸಿತ ಕರ್ಮವನ್ನು ವ್ಯರ್ಥದಿಂದ ಕಳೆವೆನು<br>ಪುತ್ರಿಯ ಕೊಟ್ಟು ಕೃತಾರ್ಥನಾಗುವೆ ॥203॥ |
| ಸತ್ರಾಜಿತರಾಯ ತನ್ನ ಸತ್ಯಭಾಮಾ ದೇವೇರ<br>ರತ್ನ ಸಹಿತವಾಗಿ ಕೊಟ್ಟ ಕೃಷ್ಣರಾಯಗೆ ॥204॥ |
| ಸತ್ಯಭಾಮಾ ದೇವೇರ ಕೃಷ್ಣರಾಯ ಮದುವ್ಯಾಗಿ<br>ರತ್ನದಿಂದ ಕೃತ್ಯ ಇಲ್ಲವೆಂದು ತಿರುಗಿ ಕೊಟ್ಟನು ॥205॥ |
| ರಕ್ಷೆಯನಿಟ್ಟು ಸೊಕ್ಕಿದ ಗೂಳಿಯ ಕಟ್ಟಿ<br>ಲಕ್ಷಣ ನೀಲ ದೇವಿಯರ ಮದುವೆಯಾದನು ॥206॥ |
| ಭದ್ರವಂತಿ ಮದುವೆಯಾಗಿ (ಅವಳ) ಅಗ್ರಜರ್ಯೆವರಿಗೆ<br>(ರಾಜ್ಯವಾಳಿ ಎಂದು) ಹೇಳಿ ತೆರಳಿ ಪೋದನು ॥207॥ |
| ಮಿತ್ರವಿಂದೆ ಮದುವೆಯಾಗಿ ರಥದೊಳಗೆ ಕುಳ್ಳಿರಿಸಿ<br>ಅವಳ ದುಷ್ಟ ಸೋದರರ ಕೊಂದ ಕೃಷ್ಣರಾಯನು ॥208॥ |
| ಯಮುನೆಯ ತೀರದಲ್ಲಿ ಕಾಳಿಂದಿ ತಪವಿರಲು<br>ನರನು ನೋಡಿ ಬಂದು ಹೇಳೆ ಮದುವೆಯಾದನು ॥209॥ |
| ಅರಗಿನ ಮನೆಯೊಳಗೆ ಧರ್ಮನು ಅಳಿದರೆಂದು<br>ನಾಗಪುರಕೆ ಹೋಗಿ ಅವರ ಹರುಷಬಡಿಸಿದ ॥210॥ |
| ಹಿಡಂಬನ ಕೊಂದು ಹಿಡಿಂಬಿಯ ಮದುವೆಯಾಗಿ<br>ವ್ಯಾಸರಾಜ್ಞೆಯಿಂದ ಭೀಮ ಮಗನ ಪಡೆದನು ॥211॥ |
| ಅಕ್ರೂರ ಕೃತವರ್ಮ ಶತಧನ್ವಗೆ ಪ್ರೇರಿಸಿ<br>ಸತ್ರಾಜಿತರಾಯನ ಕೊಲಿಸಿ ಬಿಟ್ಟರು ॥212॥ |
| ಸತ್ಯಭಾಮಾದೇವೇರು ಅತಿದುಃಖ ಕೋಪದಿಂದ<br>ಬಿಟ್ಟ ಮಂಡೆ ಕಟ್ಟದೆ ಕೃಷ್ಣಗೆ ಹೇಳೋರು ॥213॥ |
| ಅತ್ತಲಿಂದ ದೂತ ಬಂದು ಕೃಷ್ಣೆ ಸ್ವಯಂವರ ಎಂದು ಪೇಳೆ<br>ಸತ್ಯಭಾಮೆ ಒಡಂಬಡಿಸಿ ಕೃಷ್ಣರಾಯ ತೆರಳಿದ ॥214॥ |
| ಪಂಚಪಾಂಡವರು ಕೂಡಿ ಮಾರ್ಗದೊಳಗೆ ಬರುತಿರ(ಲು)<br>ಚಿತ್ರರಥ ಎಂಬ ಗಾಂಧರ್ವ ಅಡ್ಡ ಕಟ್ಟಿದ ॥215॥ |
| ಅರ್ಜುನನ ಕೂಡೆ ಯುದ್ಧ ಮಾಡಿ ಹೊಡೆಯಲು ಬಾಣದಿಂದ<br>ಅರ್ಜುನ ಸೋತು ಹಿಂದಕ್ಕೆ ನಿಂತನು ॥216॥ |

| |
|---|
| ಅರ್ಜುನ ಅಗ್ನಿಬಾಣವ ಅಭಿಮಂತ್ರಿಸಿ ಬಿಡುತಿರ(ಲು)<br>ಅಂಗ ಸುಟ್ಟು ಇಂಗಾಗಿ ಮಂದೆ ನಿಂತನು ‖217‖ |
| ಪಾರ್ಥನ ಪರಾಕ್ರಮ ಕಂಡು ಗಾಂಧರ್ವನು<br>ಪಾರ್ಥನ ಪಾದಕ್ಕೆರಗಿ ಸ್ತೋತ್ರವ ಮಾಡಿದ ‖218‖ |
| ಅಂಗಾರವರ್ಮನೆಂಬ ನಾಮ ಗಾಂಧರ್ವಗೆ<br>ಅಶ್ವ ಗುರುದಕ್ಷಿಣೆ ಕೊಟ್ಟು ತೆರಳಿ ಹೋದನು ‖219‖ |
| (ಧೌಮ್ಯಾಚಾರ್ರ) ಕೂಡಿಕೊಂಡು ಬಂದರು ಪಾಂಡವರು<br>ಕುಂಬಾರ ಶಾಲೆಯಲ್ಲಿ ಬಿಡಾರ ಬಿಟ್ಟರು ‖220‖ |
| ಭಿಕ್ಷೆ ಬೇಡಿ ಬಕನ ಸೀಳಿ ವಿಪ್ರರ ಒಳಗಿರಲು<br>ಕೃಷ್ಣ ಕರೆದು ತೋರಿಸಿದ ಸಾತ್ಯಕಿಯ ‖221‖ |
| ಬಲರಾಮ ಧನುವ ನೆಗುವೆ ಎನುತಲೆದ್ದು ನಿಂದನು<br>ಗರುಡವಾಹನ ಕೃಷ್ಣ ಅವನ ತಡೆದನು ‖222‖ |
| ಖಡ್ಗ ಹಿಡಿದು ಸಭೆಯೊಳಗೆ ಕುಣಿಯುವ ಸಾತ್ಯಕಿ ಕಂಡು<br>ಫಲ್ಗುಣ ಹೆದೆಯ ಬಿಲ್ಲ ಏರಿಸಿದನು ‖223‖ |
| ಮುಗುಳು ನಗೆ ನಗುತಲಿ ಕಮಲಮುಖಿ ಮಾಲೆಯನ್ನು<br>(ಫಲ್ಗುಣನ) ಕೊರಳಿಗೆ ಹಾಕಿ ನಗುತ ನಿಂತಳು ‖224‖ |
| ಸಿಟ್ಟಿನಿಂದ ರಾಯರು ಎತ್ತಿಕೊಂಡು ಆಯುಧವ<br>ಭಿಕ್ಷುಕರು ಕ್ಷತ್ರಿಯ ಕನ್ನಿಕೆಯ ಒಯ್ವರೇ ‖225‖ |
| ಅದೇ ಬಾಣಗಳ ಕೊಂಡು ಜಗಳಕ್ಕೋದ ಅರ್ಜುನ<br>ಮರನ ಕಿತ್ತು ಭೀಮ ಕೊಂದ ಕೆಲವು ರಾಯರ ‖226‖ |
| ಸೋದರಮಾವನ ಹಾರಿಸಿದ ಗಗನಕೆ<br>ಘಾಸಿ ಆಗದ್ಹಾಂಗೆ ತಾನಾಗಿ ಇಳುಹಿದ ‖227‖ |
| ರವಿಕುಮಾರಗೆ ಬಾಣವನ್ನು ಹೊಡೆಯಲು<br>ಅರ್ಜುನ ದಾರಯ್ಯ ನಿನ್ನ ಸ್ವರೂಪ ತೋರಿಸು ‖229‖ |
| ದಾರಾದರೇನು ನಿನಗೆ ಧೀರ ಉದಾರ ನಿಲ್ಲು<br>ಬ್ರಾಹ್ಮಣರ ಕೂಡೆ ನಿನಗೆ ಕದನವ್ಯಾತಕೆ ‖229‖ |
| ಇಂದುಮುಖಿಯಳ ಕೂಡಿಕೊಂಡು ಬಂದರು ಪಾಂಡವರು<br>ಪರ್ಣಶಾಲೆಯಲ್ಲಿ ಬಿಡಾರ ನಿಂತರು ‖230‖ |
| ಭಿಕ್ಷೆ ಬೇಡಿ ತಂದೆವೆ ಚಿತ್ತಗೊಟ್ಟು ಕೇಳೆ ತಾಯಿ<br>ಇಟ್ಟುಕೊಂಡು ಉಣ್ಣಿ ಐವರು ಎಂದಳು ‖231‖ |

| |
|---|
| ಅನ್ನವಲ್ಲವೇ ಅಮ್ಮ ಕನ್ಯಾರತ್ನ ತಂದೆವೆನಲು<br>ಚೆನ್ನಿಗ ಯಮಪುತ್ರ ನಗುತ ನುಡಿದನು ॥232॥ |
| ನೀವು ಮರೆದು ಮಾತನಾಡಲು ಆ ಬಗೆಯ ಎನಗೆ ತಿಳಿಯದು<br>ಜಗದ ಆಧಾರ ಕೃಷ್ಣ ಬಲ್ಲೆನೆಂದಳು ॥233॥ |
| ಕುಂತಿ ಮುಖದ ವಾಕ್ಯವುಮಂತ್ರ ಪ್ರಯೋಗವು<br>ಸಂತೋಷ ಉಂಟು ಸಂಪತ್ತು ಎಂದರು ॥234॥ |
| ನಮ್ಮಮ್ಮ ನಾಡಿದ ಮಾತು ಅನ್ಯತ್ರವಾಗದು<br>ಹೆಣ್ಣು ನಮ್ಮೈವರಿಗೆ ಸಲ್ಲುದೆಂದರು ॥235॥ |
| ಅಂದಣ ಶೃಂಗರಿಸಿ ಕಂದನ ಮುಂದೆ ಮಾಡಿ<br>ಕೊಂಡು ಬಾ ವಾರ್ತೆಗಳ ಎಂದು ಹೇಳಿದ ॥236॥ |
| ತಂದೆ ಮಾತನೆ ಕೇಳಿ ಬಂದನಾಗ ಧೃಷ್ಟದ್ಯುಮ್ನ<br>ಗಂಭೀರ ನುಡಿಯ ಕೇಳಿ ಸಂಭ್ರಮ ಪಟ್ಟನು ॥237॥ |
| ಹೆಚ್ಚಿನ ನುಡಿಯ ಕೇಳಿ ಕ್ಷತ್ರೇರೆಂದು ಅರಿತನು<br>ಮತ್ತೆ ತಮ್ಮಪ್ಪಗೆ ಬಂದು ಹೇಳಿದ ॥238॥ |
| ಅಂದಣ ಶೃಂಗರಿಸಿ ಕಂದನ ಮುಂದೆ ಮಾಡಿ<br>ಚೆಂದದಿಂದ ಪಾಂಡವರ ಕರೆಯ ಕಳುಹಿದ ॥239॥ |
| ದ್ರುಪದರಾಯ ಮಾಡಿಸಿದ ಗುಪ್ತವುಳ್ಳ ಅರಮನೆಯ<br>ಪುತ್ರಿ ಪ್ರಯೋಗ ಮಾಡಿ ಕೊಟ್ಟನ್ವಿಪ್ರರಿಗೆ ॥240॥ |
| ಅರ್ಜುನ ಹೊಕ್ಕನೆ ಆಯುಧವುಳ್ಳ ಅರಮನೆಯ<br>ಮನದೊಳಗೆ ತಿಳಿದು ರಾಯ ಮಡದಿ ಕರೆದು ಮಾತನಾಡಿದ ॥241॥ |
| ಗಂಡನ ನುಡಿಯ ಕೇಳಿ ಸಂಭ್ರಮಬಟ್ಟಳು<br>ಗಂಗೆಯ ಉದಕ ಹರಿವಾಣ ತಂದಳು ॥242॥ |
| ಪಾಂಚಾಲರಾಯನು ಪಾದ ತೊಳೆಯೊ ಸಮಯದಲ್ಲಿ<br>ಪಂಚಪಾದಗಳ ಕಂಡು ಚಂಚಲಿಸಿದ ॥243॥ |
| ಸಂಕೋಚಬಟ್ಟು ಕೊಳ್ಳೆ ಕಂತುಪಿತಸ್ವಾಮಿ ಬಂದು<br>ಚಂಚಲವ ತೊರೆಸಿ ಧಾರೆ ಎರೆಸಿ ಹೋದನು ॥244॥ |
| ಭೂಸುರರ ಸಭೆಯೊಳಗೆ ವ್ಯಾಸಮುನಿರಾಯ ಬರಲು<br>ಕ್ಲೇಶನಾಶದಿಂದ ಐಶ್ವರ್ಯ ಹೆಚ್ಚಿತು ॥245॥ |
| ರಾಯರ ಮಗಳು ನಿಮ್ಮ ರಾಯರಿಗೆ ಆದಳೆಂದು<br>ಬಹಳ ಹರುಷದಿಂದ ವಿದುರ ಅಣ್ಣಗ್ಹೇಳಿದ ॥246॥ |

| |
|---|
| ಸಂಕೋಚಬಟ್ಟು ತನ್ನ ವಂಚನೆಯ ಮುಚ್ಚಿಕೊಂಡು<br>ಪಂಚ ಪಾಂಡವರ ಕ್ಷೇಮ ಕೇಳುತ್ತಿದ್ದನು ‖247‖ |
| ಪಾಂಚಾಲರಾಯನ ಪಂಚ ಪಾಂಡವರು ಕಟ್ಟಿ ಕೊಟ್ಟರೆ<br>ಗುರುದಕ್ಷಿಣೆ ಎಂದು ಕೃಷ್ಣಗೆ ಹೇಳೋರು ‖248‖ |
| ವೃಷ್ಟಿ ಹೋಗಿ ದುರುಭಿಕ್ಷ ಹೆಚ್ಚಲು ರಾಜ್ಯದಲ್ಲಿ<br>ಅಕ್ರೂರ ಇಲ್ಲವಂದು ಮಂತ್ರಿಗಳು ನುಡಿದಳು ‖249‖ |
| ನಮ್ಮಣ್ಣನಿಲ್ಲದ ಕಾರಣವೇನು ಕೇಳಲು<br>ಪನ್ನಂಗಶಯನ ಅವನ ಕರೆಯ ಕಳುಹಿದ ‖250‖ |
| ಕೃಷ್ಣ ಬಾಹೋ ಸುದ್ದಿಯ ದುಷ್ಟ ಶತಧನ್ವ ಕೇಳಿ<br>ಅಕ್ರೂರ ಎನ್ನ ರಕ್ಷಿಸಂದು (ಮರೆಯ) ಹೊಕ್ಕನು ‖251‖ |
| ಶ್ರೀ ಹರಿಯ ಕೂಡೆ ವಿರೋಧವ ದಾರಾದರು ಮಾಡುವರೆ<br>ಅನಾದಿಕಾಲದಿಂದ ಜೀವರಿಗೆ ಪ್ರೇರಕ ‖252‖ |
| ಕೆಟ್ಟನೆಂದೆನುತಲಿ ದುಷ್ಟ ಅಸುರ ಓಡಿ ಹೋದ<br>ಕೃಷ್ಣ ಚಕ್ರದಿಂದ ತಲೆಯ ಕುಟ್ಟಿ ಹಾಕಿದ ‖253‖ |
| ವ್ಯರ್ಥವಾಯಿತೋ ಅಣ್ಣ (ಹತ್ರೇಲಿ)ರತ್ನವಿಲ್ಲದಿರಲು<br>ಕುಟಿಲದಿಂದ ಮಿಥಿಳಪುರಕೆ ತೆರಳಿ ಹೋದನು ‖254‖ |
| ಸರ್ವಜ್ಞ ಶಿಖಾಮಣಿ ಸರ್ವರ ಮನಸು ತಿಳಿವಿ<br>ದಾನಪತಿ ಮಣಿ ನಿನಗೆ ಯೋಗ್ಯವೆಂದನು ‖255‖ |
| ದಾನಪತಿ ಸಭೆಯೊಳಗೆ ಮಣಿಯ ತೆಗೆದು ತೋರಿಸಿದಿ<br>ಸರುವರ ಸಂಶಯ ಪರಿಹರಿಸಿ ಹೋಯಿತು ‖256‖ |
| ಕೃಷ್ಣ ಪರಿವರವನ್ನು ಕೊಟ್ಟು ಪಾಂಡವರಿಗೆ<br>ಕೃಷ್ಣೆಗೆ ಕೊಟ್ಟ ವಿಚಿತ್ರ ಕೋಶವ ‖257‖ |
| ಕೃಷ್ಣ ಧರ್ಮರು ಕೂಡಿ ಕೊಟ್ಟ ಸಾಮ್ರಾಜ್ಯವ<br>ಶಕ್ರಪುರದೊಳಗಿಟ್ಟು ಕೃಷ್ಣ ಹರುಷಬಡಿಸಿದ ‖258‖ |
| ಕೃಷ್ಣ ಧರ್ಮರಾಯ ಕೂಡಿ ಪೊಕ್ಕರೆ ಮಂದಿರವ<br>ಕೃಷ್ಣೆಯ ಕಂಡು ದುಃಖಬಟ್ಟ ದುರ್ಜನ ‖259‖ |
| ಬಲದೇವರ ಭಗಿನಿ ತನ್ನ ಮಡದಿ ಆಗಬೇಕೆಂದು<br>ಸುಯೋಧನ ಗದೆಯನೆವನದಲಿ ಬಂದನಲ್ಲಿಗೆ ‖260‖ |
| ಮುನಿವೇಷ ಧರಿಸಿ ಪಾರ್ಥ ವನದೊಳಗೆ ನಿಂದಿರಲು<br>ಬಲರಾಮ ಕಂಡು ಮನೆಗೆ ಕರೆದು ತಂದನು ‖261‖ |

| |
|---|
| ಮುನಿಯ ಸೇವೆಗಾಗಿ ತನ್ನ ಅನುಜಳಿಗಾಜ್ಞೆಯನಿತ್ತು<br>ವನಭೋಜನ ನೆವನಕ್ಕಾಗಿ ಹೋದರೆಲ್ಲರು ॥262॥ |
| ಅರ್ಜುನ ಜಟಾ ಧರಿಸಿ ಬರಲು ಸುಭದ್ರೆಯ ಸೇವೆಗಿಡಲು<br>ಸುಭದ್ರೆ ಎತ್ತಿಕೊಂಡು ಅರ್ಜುನ ಓಡಿ ಹೋದನು ॥263॥ |
| ದ್ವಾರಕಾಪುರದವರು ಯುದ್ಧಕ್ಕೆ ಬಂದರು<br>ಯುದ್ಧ ಮಾಡಿ ಸೋಲಿಸಿ ಅರ್ಜುನ ಓಡಿ ಹೋದನು ॥264॥ |
| ಅತ್ತೆಮಕ್ಕಳ ಕೂಡೆ ಹತ್ತಿದನೆ ರಥವನು<br>ಸತ್ಯಭಾಮೆ ಸಹಿತ ಕೃಷ್ಣ ಬೇಟೆಗ್ಹೋದರು ॥265॥ |
| ತಂಗಿಯ ಕೂಡಿಕೊಂಡು ವೃಂದಕ್ಕೆ ರಂಗ ಬಂದ<br>ಅಂಬುಗಳಿಂದ ಅಂಜಿಸುವ ಇಂದ್ರನು ॥266॥ |
| ಇಂದ್ರಾಣಿಪತಿ ವನವ ತಿಂದೆನೆಂದು ಬರ(ಲು)<br>ಅಂಬುಗಳಿಂದ ಮನೆ ಮಾಡಿ ಅರ್ಜುನ ॥267॥ |
| ಭಿಕ್ಷುಕನಾಗಿ ಪೋಗಿ ಕೃಷ್ಣ ಕಿರೀಟಿಗೆ<br>ಎನ್ನ ಹೊಟ್ಟೆಬೇನೆ ಉಳುಹೊ ಎಂದು ಮದ್ದು ಬೇಡಿದ ॥268॥ |
| ಗೆಳೆಯನ ಮಾತ ಕೇಳಿ ಪಾಲ್ಗಡಲೊಡೆಯ ನುಡಿದನು<br>ಕೊಡು ನಿನ್ನ ವನವೆಂದು ಗುಡಾಕೇಶಗ್ಹೇಳಿದ ॥269॥ |
| ಮತ್ತಾರಿಗೆತ್ತದ ಧನುವು ಅಕ್ಷಯ ಬಾಣವಿರ(ಲು)<br>(ಉತ್ತಮ) ಕುದುರೆ ಬಿಟ್ಟ ಮಖದ ದೇವತೆ ॥270॥ |
| ಕೃಷ್ಣಪಾರ್ಥರು ಕೂಡಿ ಬಿಟ್ವಾರು ಕೆಲವು ಜೀವರ<br>ಪಾವಕನ ಮೊರೆಯ ಪೊಕ್ಕ ಒಬ್ಬ ವೈರಿ ಸರ್ಪನು ॥271॥ |
| ಕಂದನ ಪರಾಕ್ರಮ ಕಂಡು ದೇವೇಂದ್ರನು<br>ಸಂಭ್ರಮದಿಂದ ಗಾಂಡೀವಿ ಎಂದು ಕರೆದನು ॥272॥ |
| ಸ್ಯಂದಣದೊಳಗೆ ಇಂದುಮುಖಿಯಳ ಕೂಡಿಕೊಂಡು<br>ವಾರಿಜಾಕ್ಷ ದ್ವಾರಕಾಪುರಕೆ ಬಂದನು ॥273॥ |
| ದ್ವಾರಕಾಪುರದವರು(ಮಾನಿನಿಯರೆಲ್ಲರು)<br>ಆರತಿಯ ತಂದರೆ ಶ್ರೀಹರಿಯ ಎಂದುರಿಗೆ ॥274॥ |
| ದ್ವಾರಕಾಪುರದೊಳಗೆ ವಾರಿಜಾಕ್ಷ ಇರುತಿರಲು<br>ಭೀಷ್ಮೆಯ ತೊಡೆಯ ಮೇಲೆ ಕೊಂಡು ಕುಳಿತನು ॥275॥ |
| ಅಂಬರದಿಂದ ಇಳಿದು ಬಂದ ನಾರದನು<br>ಇಂದುವದನೆ ಕೊಂಡಾದಿ ತಂದಿತ್ತ ಕುಸುಮವ ॥276॥ |

| |
|---|
| ಮಾನ್ಯ ಮಾನ್ಯರ ಒಳಗೆ ನಿನ್ನ ಸವತಿಗೆ ಮುನಿ<br>ಮನ್ನಿಸನೆಂದು ಕನ್ನೆಯರು ಬಂದು ಹೇಳಲು ॥277॥ |
| ಹೆಣ್ಣು ಜನ್ಮ ಸುಡಲಿ ಎಂದು (ಪನ್ನಂಗಶಯನನ<br>ಇನ್ನು) ಮೊರೆ ನೋಡಿದರೆ ನಮ್ಮಮ್ಮನಾಣೆ ಎಂದಳು ॥278॥ |
| ತನ್ನ ಪ್ರಾಣದ ಪ್ರಿಯಳು ಆಡಿದ ವಾರ್ತೆಯ ಕೇಳಿ<br>ರಮಾರಾಮಣ ರಾಮ ಬಂದು ವಿಚಾರ ಮಾಡಿದ ॥279॥ |
| ಗಡಗಡನೆ ನಡುಗುತ ಮಡದಿಯ ಮನೆಗೆ ಬಂದ<br>ತೀವ್ರದಿಂದ ಕೋಪ  ಒದಗಿ ಮೋರೆದೋರಳು ॥280॥ |
| ಏನಾಯಿತೊ ಎನ್ನ ಪ್ರಾಣದ ವಲ್ಲಭೆಗೆ<br>ಮುನಿದ ಕಾರಣವೇನು ಹೇಳಿರೆಂದನು ॥281॥ |
| ಇದಕ್ಕೆ ಉಪಾಯವನ್ನು ಕಾಣೆನೆಂದು ಜಗದೊಳಗೆ<br>ಪಾದದೆಡೆಯಲ್ಲಿ ಬಂದು ನಿಂತ ನೀಲವರ್ಣನು ॥282॥ |
| ಮರುಗುತ್ತ ಎದ್ದಳು ಪರಿಯಂಕ ಇಳಿದಳು<br>ತೀವ್ರದಿಂದ ಕೋಪ ಒದಗಿ ಮೊರೆದೋರಳು ॥283॥ |
| ಅತ್ತತ್ತ ಸಾರು ನಿನ್ನ ಕಪಟದ ಮಾತು ಸಲ್ಲ<br>ಅತಿ ಕ್ರೋಧದಿಂದ ನೋಡಿದಳು ದೇವನ ॥284॥ |
| ಜಿಗಳಿನ ಮಾಲಿಕೆಯ ಕೊರಳಿಗೆ ಹಾಗಿದ<br>ಲಲನೆಯನು(ಆಲಿಂಗಿಸಿದ) ಮಾಯ ಪುರುಷನು ॥285॥ |
| ತಾಯಿ ತಂದೇರ ಆಣೆ ಬಾಲೆ ನಿನ್ನ ಕರೆದೊಯ್ದು<br>ಪಾರಿಜಾತ ತರುವ ತಂದು ಬಾಗಿಲಲ್ಲಿ ನಿಲಿಸುವೆ ॥286॥ |
| ನರಲೋಕದಿಂದ ನಕಾಸುರನು ಕೊಂಡೊಯ್ದನೆಂದು<br>ಸುರಪತಿಯು ಬಂದು ಹರಿಗೆ ಮೊರೆಯಿಟ್ಟನು ॥287॥ |
| ಗರುಡನ ಹೇಗಲನೇರಿ ಗಗನದಿಂದ ಹರಿ ಬರಲು<br>ಮುರನ ಶಿರವ ತರಿದ ಮುರಾರಿ ಮೂರುತಿ ॥288॥ |
| ಥುಡ ಥುಡದ ಕೋಟೆಯ ಇಂದಿರೇಶ ಖಂಡಿಸಿ<br>ಕೊಂದು ನರಕಾಸುರನ ಮಂದಿರವ ಹೊಕ್ಕನು ॥289॥ |
| ಕಂಜಾಕ್ಷಿ ತನ್ನ ಕಂದನ ಕಂಡು ಕರೆದೊಯ್ದು<br>ಕಂಜನಾಭನ ಪಾದಕೊಂದಿಸಿದಳು ॥290॥ |
| ಕರವಿಡಿದು ಎತ್ತಿದ ಹರಿ ನುಡಿದ ಅವನ ಕುರಿತು<br>ನಿನ್ನ ಹಡೆದವನ ರಾಜ್ಯ ನಿನಗೆ ಕೊಡುವೆನೆಂದನು ॥291॥ |

| |
|---|
| ಇಂದ್ರದೇವನು ಬಂದು ವಂದಿಸಿ ಕರೆದು ತಂದು<br>ಚೆಂದದಿಂದ ಅರ್ಘ್ಯಪಾದ್ಯ ಪೂಜೆ ಮಾಡಿದ ‖292‖ |
| ರತ್ನದಿಂದ ಕೆತ್ತಿಸಿದ ಮುತ್ತಿನ ವಾಲೆಯ<br>ಸತ್ಯಭಾಮೆ ಅತ್ತೆಗಿಟ್ಟು ನಮಸ್ಕರಿಸಲು ‖293‖ |
| ಮುತ್ತೈದೆಯಾಗೆಂದು ಕೊಟ್ಟಳೆ ಹರಕೆಯ<br>ಸಾಕ್ಷಾತ್ ಲಕ್ಷ್ಮಿ ಎಂಬೋದನರಿಯದೆ ‖294‖ |
| ಅಸುರರಾವೇಶದಿಂದ ಸೊಸೆ ಎನ್ನುತ ಹರಿಸಿದಳು<br>ಕುಶಲವಾಗಲಿ ನಿನ್ನ ಪತಿಗೆ ಎಂದಳು ‖295‖ |
| ಇಂದ್ರನಿಂದ ಪೂಜಿಸಿಕೊಂಡು ನಂದನ ವನಕೆ ಬರೆ<br>ಚೆಂದವಾದ ಕುಸುಮವಾಘ್ರಾಣಿಸಿದುವು ‖296‖ |
| ಪತ್ರಿ ಪಚ್ಚೆ ತೆನೆಗಳು ಮುತ್ತಿನ ಫಲಗಳು<br>ಕೃಷ್ಣ ನನಗೆ ಕೊಟ್ಟು ಸತಿಯರೊಳಗೆ ಹೆಚ್ಚಿಸೋ ‖297‖ |
| ಮುತ್ತಿನ ಕಟ್ಟೆ ಮೇಲೆ ಸೃಷ್ಟೀಶ ನಿನ್ನ ಒಡಗೊಂಡು<br>ಲೆತ್ತವನು ಆಡಲಿ ಕಾಂತೇರು ನೋಡಲಿ ‖298‖ |
| ಬೇಡವೇ ಭಾಮಕೀ ಪೌಲೋಮಿ ತರುವಿದು<br>ಸಮರೋಷದಿಂದ ಅಮರರು ಜಗಳಕ್ಕೆ ಬಾಹೋರು ‖299‖ |
| ಅವರ ಮರವು ಇಳಿಯಬೇಕು ಗರ್ವದಿಂದ ಬಗಿಯಲಿಲ್ಲ<br>ಮದನ ಮೂರುತಿ ಎನ್ನ ಬಿರುದ ನಡೆಸು ಎಂದಳು ‖300‖ |
| ಅತ್ಯಂತ ಪ್ರಿಯಳು ಎಂದು ಸಕಲ ಲೋಕದಲ್ಲಿ (ಮೆರೆದೆ)<br>ಚಿಕ್ಕಂದಿನಿಂದ ಬಲ್ಲೆ ನಿನ್ನ ಬಾಯ ಮಾತನು ‖301‖ |
| ನಿನ್ನ ಮನೆಯ ಮಾನಭಂಗದಲಿ ಹೋದಕಿಂತ<br>ಅರಣ್ಯವಾಸ ಲೇಸು ಎಂದಳು ‖302‖ |
| ಪಟ್ಟಣಕ್ಕೆ ಹೋದರೆ ಲೆಕ್ಕಿಸರು ಅವರು ಎನ್ನ<br>ಬಿಟ್ಟೆನೋ ಪ್ರಾಣ ನಿನ್ನ ಪಾದದೆಡೆಯಲಿ ‖303‖ |
| ಡೊಂಕು ಮಾತುಗಳ ಕೇಳಿ ಕಂತುಪಿತನಪ್ಪಿದ<br>ಬಿಂಕದ ಭಾಮೆ ನಿನಗೆ ಮುನಿಸು ಯಾತಕೆ ‖304‖ |
| ಚುಂಬನವನೆ ಕೊಟ್ಟನು ಬಿಂಬಾಧರನು ಮಡದಿಗೆ<br>ನಂದನವನದ ತರುವ ತೆಗೆದುಕೊಂಡರು ‖305‖ |
| ಬೇಡ ಬೇಡೆಂದು ವನಪಾಲಕರು ತರುವನು<br>ಮಾನವರು ಒಯ್ದರೆಂದು ಪೌಲೋಮಿಗ್ಹೇಳೋರು ‖306‖ |

| |
|---|
| ರೋಷದಿಂದ ಕೇಶ ಕೆದರಿ ಪಾಕಶಾಸನಾ ಮಡದಿ<br>ವಸುಧೆ ಮೇಲೆ ಸುರತರು ಉಂಟೆ ಎಂದಳು ॥307॥ |
| ವಂದಿಸಿ ಕರೆದು ತಂದು ಚೆಂದದಿಂದ ಪೂಜೆಗೊಂಡು ಉಂಡು ನಿನ್ನ ಮನೆಯ ಕೊಂಡ<br>ಗಂಡಸತನವೆಲ್ಲಿ ॥308॥ |
| ಹೆಂಡತಿಯ ನುಡಿಯ ಕೇಳಿ ಕಂಗೆಡುತ ಎದ್ದನು<br>ಕಂಗಳಲ್ಲಿ ಕೆಂಡ ಉದುರುವಂತೆ ತೋರಿದ ॥309॥ |
| ಗಗನದ ಭೇರಿ ಬಡಿಯೆ ಒದಗಿ ದಿಕ್ಕು ಪಾಲಕರು<br>ಗಗನದ ಗಲಭೆ ತೋರಿದನು ಮಡದಿಗೆ ॥310॥ |
| ಹೆದಿಯ ಹಿಡಿಯಲಾರೆನೆ ಒದಗವು ಬಾಣಗಳು<br>ಮಡದಿ ಹ್ಯಾಗೆ ಮಾಡಲೆ ಧೈರ್ಯ ಸಾಲದು ॥311॥ |
| ಮುಗುಳು ನಗೆ ನಗುತಲಿ ತೆಗೆದಳೆ ಬಾಣವನ್ನು<br>ಧನಾಧಿಪತಿಯ ಹೊಡೆದು ಓಡಿಸಿದಳು ॥312॥ |
| ಶೂಲಪಾಣಿ ರುದ್ರನು ಯುದ್ಧಕ್ಕೆ ಬಂದನು<br>ಚಕ್ರಪಾಣಿ ಅವನ ಕೈಯ ಸ್ತೋತ್ರಗೊಂಡನು ॥313॥ |
| ವಾಹನಕ್ಕೆ ಬಾಣ ಹಾಕೆ ಆಯುಧವು ಕೆಳಗೆ ಬೀಳೆ<br>ಪಾದಚಾರಿಯಾಗಿ ಇಂದ್ರ ಕಡೆಗೆ ನಿಂತನು ॥314॥ |
| ಗರ್ವದಿಂದ ಮಾತನಾಡಿ ಭಾವನವರೆ ಬಂದಿರಿ<br>ವದನ ಕೆಳಗೆ ಮಾಡಿದರೆ ಮಡದಿ ನಗುವಳು ॥315॥ |
| (ತರುವ) ತೆಗೆದುಕೊಳ್ಳದೆ ತಿರುಗಿ ಊರಿಗೆ ಹೋದರೆ<br>ನಿಮ್ಮ ಮಡದಿ ನಿಮ್ಮ ಕೈಲಿ ಮಾತನಾಡಳು ॥316॥ |
| ಬಾಲಕರ ಮಾತುಗಳ ತಾಯಿ ಪಾಟಿ ಮಾಡುವೋಳೆ<br>ಕರುವು ಗುಮ್ಮೆ ಮೊಲೆಯ ಉಂಡು ನಗುತಲಿ ಹೋದುದು ॥317॥ |
| ಸ್ತ್ರೀಪುರುಷರಿಬ್ಬರ ಪ್ರೀತಿಯಿಂದ ಸ್ತೋತ್ರಗೊಂಡು<br>ಮಾತೆಯ ಚರಣಕೆರಗಿ ತೆರಳಿ ಪೋದನು ॥318॥ |
| ಪಂಚವರ್ಣದ ಹಕ್ಕಿ ಮೇಲೆ ಮಿಂಚು ಮೇಘ ಹೊಳೆದಂತೆ<br>ಸಂಪನ್ನೆ ಕೂಡಿಕೊಂಡು ದ್ವಾರಾವತಿಗೆ ಬಂದನು ॥319॥ |
| ಕೆಂಚಕ್ಕಿ ಕಳಶವು ಸಂಪಿಗೆ ಮಾಲಿಕೆಯಿಂದ ಚಂಚಲಾಕ್ಷಿ ವೈಕುಂಠಪತಿಯ ಎದುರುಗೊಂಡರು ॥320॥ |
| ಕನಕ ಭಂಡಾರದರಸು ಹೊಕ್ಕನೆ ಪಟ್ಟಣವನ್ನು<br>ಅನುಕೂಲ ವನಿತೆಯರ ಮನೆ ಮನೆಗೆ ಬಂದನು ॥321॥ |
| ಹತ್ತು ಒಂದು ಮಕ್ಕಳ ಒಬ್ಬೊಬ್ಬ ಕನ್ನಿಕೆಂದ<br>ಪುತ್ರರ ಪಡೆದನೆ ಕೃಷ್ಣರಾಯನು ॥322॥ |

| |
|---|
| ಸತ್ಯಭಾಮೆ ಮನೆಯ ಮುಂದೆ ತರುವ ತಂದು ನಿಂದಿರಿಸಿ<br>ಸುಧರ್ಮವೆಂಬ ಸಭೆಯೊಳಗೆ ಬಂದು ಕುಳಿತನು ‖323‖ |
| ಹಂಸವಾಹನಗೆ ಹಂಸ ಡಿಭಿಕರ್ಹೇಳಿ ಕಳುಹಿದರು<br>ಅಶ್ವಮೇಧ ಯಜ್ಞ ಕರ್ಮಣ ಹೇರಿ ಕಳುಹಿಸು ‖324‖ |
| ಕುಸುಮನಾಭ ಹರುಷದಿಂದ ಅಸುರಗ್ಹೇಳಿ ಕಳುಹಿದ<br>ನಿನ್ನ ಅಸುವ ತೆಗೆದು ಕಪ್ಪವನ್ನು ಕೊಡುವೆನೆಂದನು ‖325‖ |
| ಅಂದಣದೊಳಗೆ ಇಂದುಮುಖಿಯರ ಕೂಡಿಕೊಂಡು<br>ತಂದೆ ಮಾತು ಕೇಳಿದವನ ಕ್ಷೇತ್ರಕ್ಕೆ ಬಂದರು ‖326‖ |
| ವಶಿಷ್ಟ ವಿಶ್ವಾಮಿತ್ರ ಜಮದಗ್ನಿ ಪರಾಶರಗಳು<br>ಭೃಗು ಭಾರದ್ವಾಜ ಅಂಗೀರಸ ನಾರದ ‖327‖ |
| ಗೌತಮಾಗಸ್ತ್ಯ ಸುಮಂತು ಅತ್ರಿ ಕಶ್ಯಪ<br>ಯಜ್ಞಕೌಶಲ್ಯ ಸೂತ ಕಾವ್ಯ(?) ಬಂದರು ‖328‖ |
| ಪಂಚಪಾಂಡವರು ಕುಂತಿ ಕೃಷ್ಣೆಯ ಕೂಡಿಕೊಂಡು<br>ಕೃಷ್ಣನ ಅದ್ಭುತ ಮಹಿಮೆ ನೋಡಬಂದರು ‖329‖ |
| ಧರ್ಮರಾಯನ ಕಂಡು ದೇವ ಮಾತನಾಡಿದ<br>ಕ್ಷೇಮವೇ ರಾಯನೆಂದು ಕೇಳುತಿದ್ದನು ‖330‖ |
| ದೇವನ ಮಾತಿಗೆ ರಾಯ ಮಾತನಾಡಿದ<br>ನಿಮ್ಮ ನಾಮ ಬಲವು ಮಾಂಗಲ್ಯ ಕ್ಷೇಮವು ‖331‖ |
| ಕೃಷ್ಣ ಪತ್ನೇರ ಕುರಿತು ಕೃಷ್ಣೆ ಮಾತನಾಡಿದಳು<br>ಅಚ್ಯುತ ನಿಮ್ಮ ತಂದ ಕ್ರಮವ ಹೇಳಿರೆಂದಳು ‖332‖ |
| ಭೀಷ್ಮ ಹೋಳುತ್ತಿದ್ದಳು ಭೂಪಾಲರು ನೆರೆದು<br>ಶಿಶುಪಾಲಗೆ ಎನ್ನನು ನೇಮಿಸಿದರು ‖333‖ |
| ಸತ್ರಾಜಿದನ ಸಂಶಯವನ್ನು ಸತ್ಯಭಾಮೆ ಹೇಳಿದಳು<br>ಪಶ್ಚಾತ್ತಾಪದಿಂದ ಎನ್ನ ಕೊಟ್ಟ ಕೃಷ್ಣಗೆ ‖334‖ |
| ಲಕ್ಷಣವಂತಿ ಹೇಳಿದಳು ರಕ್ಷೆ ಏಳನೆ ಇಟ್ಟು<br>ಲಕ್ಷ್ಮೀಪತಿ ತಂದ ತನ್ನ ಪಾದಸೇವೆಗೆ ‖335‖ |
| ಭದ್ರವಂತಿ ಹೇಳಿದಳು ನಮ್ಮ ಅಗ್ರಜರೈವರು<br>ಗುಣಸಮುದ್ರ ಕೃಷ್ಣಗೆ ಎನ್ನ ಕೊಟ್ಟು ಕರವ ಮುಗಿದರು ‖336‖ |
| ಮಿತ್ರವಂತಿ ಹೇಳಿದಳು ಕೃಷ್ಣಗೆ ಅತ್ತೆ ಮಗಳು ನಾನು<br>ನಮ್ಮಪ್ಪ ಕರೆದು ಎನ್ನ ಕೊಟ್ಟು ಕರವ ಮುಗಿದನು ‖337‖ |

| |
|---|
| ಕಾಳಿಂದಿ ಹೇಳುತ್ತಿದ್ದಳು ಯಮುನೆಯ ತೀರದಲ್ಲಿ<br>ನರನು ನೋಡಿ ಬಂದು ಹೇಳೆ ಮದುವೆಯಾದನು ॥338॥ |
| (ನಮ್ಮ ನಮ್ಮ) ತಂದ ಕ್ರಮದ ಸಂಭ್ರಮದಿಂದ ಹೇಳಿದೆವು<br>(ಅತ್ತಿಗೆ) ನಿಮ್ಮ ತಂದ ಕ್ರಮವ ಹೇಳಿರೆಂದಳು ॥339॥ |
| ಉಕ್ಕೋ ಎಣ್ಣೆಯೊಳಗೆ ಮೀನ ನೋಡಿ ಪಾರ್ಥ ಬಾಣ ಎಸೆದ<br>ಗಕ್ಕನೆ ಮಾಲೆ ಅವನ ಕೊರಳಿಗ್ಹಾಕಿದ ॥340। |
| ಕಾಸಿದೆಣ್ಣೆಯೊಳಗೆ ಮೀನ ನೋಡಿ ಪಾರ್ಥ ಬಾಣ ಎಸೆದ<br>ಮಾಲೆ ಅವನ ಕೊರಳಿಗ್ಹಾಗಿ ನಗುತ ನಿಂತೆನು ॥341॥ |
| ನಿಮ್ಮ ನಿಮ್ಮ ತಂದ ಕ್ರಮದ ಹೆಮ್ಮೆಯಿಂದ ಹೇಳಿದಿರಿ<br>ಧನ್ಯ ದ್ರೌಪದಿಯ ನುಡಿಯಕೇಳಿರೆಂದನು ॥342॥ |
| ಮಾನ್ಯದೊಳಗೆ ಸಂಶಯವಿಲ್ಲ ಮನದೊಳಗೆ ಅಹಂಕಾರವಿಲ್ಲ<br>ಧರ್ಮನರಸಿ ನುಡಿದ ನುಡಿಯ ಕೇಳಿರೆಂದನು ॥343॥ |
| ವಸುದೇವ ಯಜ್ಞಕರ್ಮವ ಮಾಡಿ ದ್ರವ್ಯ ಬ್ರಾಹ್ಮಣರಿಗೆ ಕೊಟ್ಟು<br>ತ್ರಿರೂಪ ಕಂಡು ತ್ರಿಲೋಕ್ಯ ತ್ರಿತಾಪ ಕಳೆದನು ॥344॥ |
| ಮಹತ್ತತ್ವ ಅಹಂಕಾರ ವೈಕಾರಿಕ ಮನದ ಬುದ್ಧಿ<br>ಮಹಾಭೂತಗಳ ನಿರ್ಮಾಣ ಮಾಡಿಸಿ ॥345॥ |
| ಅವ್ಯಕ್ತ ತತ್ವಗಳಲ್ಲಿ ವ್ಯಾಪಕನೆ ನೀನು<br>ಪರಿಪೂರ್ಣ ಸ್ವಪ್ನ ಸುಷುಪ್ತಿ ಜಾಗೃತಿ ಪ್ರೇರಕ ॥346॥ |
| ನಿಗಮಾಗಮಗಳಿಂದ ಬುಧರು ನಿನ್ನ ಸ್ತುತಿಸಲು<br>ರಮಾ ಬ್ರಹ್ಮಾದಿಗಳ ಒಡೆಯನಲ್ಲವೇ ॥347॥ |
| ಮಗನೆಂಬ ಅಜ್ಞಾನ ತೊರೆದು ಪರಮ ಪುರುಷನೆಂದು ತಿಳಿದು<br>ವಸುದೇವ ಹರಷದಿಂದ ಸ್ತೋತ್ರ ಮಾಡಿದ ॥348॥ |
| ಬಂದ ರಾಯರನೆಲ್ಲ ಇಂದಿರೇಶ ಮನ್ನಿಸಿ<br>ಅವರವರಿಗೆ ಬಹುಮಾನ ಕೊಟ್ಟು ಪುರಕೆ ಕಳುಹಿದ ॥349॥ |
| ಬಂದ ಮುನಿಗಳನೆಲ್ಲ ಇಂದಿರೇಶ ಮನ್ನಿಸಿ<br>ಅವರವರಿಗೆ ಬಹುಮಾನ ಕೊಟ್ಟು ಪುರಕೆ ಕಳುಹಿದ ॥350॥ |
| ಬಂದ ಗಂಧರ್ವರನೆಲ್ಲ ಇಂದಿರೇಶ ಮನ್ನಿಸಿ<br>ಅವರವರಿಗೆ ಬಹುಮಾನ ಕೊಟ್ಟು ಪುರಕೆ ಕಳುಹಿದ ॥351॥ |
| ಗೋಕುಲದ ನಾರಿಯರ ಕೃಷ್ಣ ಲೋಕದಲ್ಲಿ ಕಂಡು<br>ಏಕಾಂತದಲ್ಲಿ ಹೋಗಿ ಅವರ ಮಾತನಾಡಿದ ॥352॥ |

| |
|---|
| ಅಮ್ಮಮ್ಮ ಹೆಣ್ಣ ಮಾಯಗಾಯಕತನವು ತಿಳಿಯದು<br>ನಿಮ್ಮಣ್ಣನ ವಂಚಿಸಿ ಎನಗೆ ವಾಲೆ ಬರಿವರೇ ॥353॥ |
| ದೇಶಕರ ಮಗಳು ನೀನು ದೇಶ ನಮಗಿಲ್ಲವು<br>ಪರದೇಶಿ ಕೈಯ ಹಿಡಿವರೆ ಹೋಗು ಎಂದನು ॥354॥ |
| ರಾಯರ ಮಗಳು ನೀನು ರಾಯರಾಯರನೆ ಬಿಟ್ಟು<br>ಆವು ಕಾವ ಗೋವಳಗೆ ವಾಲೆ ಬರಿವರೇ ॥355॥ |
| ಆಲದ್ದಣ್ಣುಗಳ ಮೆದ್ದು ನೀರೊಳಗೆ ಮನೆಯ ಮಾಡಿ<br>ಅರಣ್ಯವಾಸಿ ಕೂಡೆ ಸವಿದುದೂಟವೇ ॥356॥ |
| ಆಂಗೇನೇರು ತಾಯಿ ತಂದೆ ಭೂಮಂಡಲ ಪಂಡಿತರೊಳಗೆ<br>ಮುದಲಿ ಹರೆಯದ ಕೊಂಡುಕೊಳ್ಳೆ ಬುದ್ಧಿಯ ॥357॥ |
| ಗಂಡನ ನುಡಿಯ ಕೇಳಿ ಬೆಂಡನೆ ಬೆರಗಾಗಿ<br>ಕಂಗಳ ಜನವು ತುಂಬಿ ಕುಂಭಿನಿಯ ಮೇಲೆ ಬಿದ್ದಳು ॥358॥ |
| ಕಮಲ ಮುಖವು ಬಾಡಿತು ಸ್ತನಗಳು ಕುಂದಿದವು<br>ಚಕ್ರಧರನು ಮುತ್ತಿನ ಮುಡಿಯ ಬಿಗಿದು ಕಟ್ಟಿದ ॥359॥ |
| ಇಷ್ಟು ಸುಕುಮಾರಿ ಎಂದು ಒಂದಿಷ್ಟು ತಿಳಿಯಲಿಲ್ಲ<br>ವಿನಯದಿಂದ ಸರಸವಾಡಿದರೆ ಬಳಲಿ ಮೂರ್ಛೆಗೈವರೆ ॥360॥ |
| ಚಿಕ್ಕಂದಿನಿಂದ ಅಭಿಮಾನಿ ಕಣ್ಣೆತ್ತಿ ನೋಡಳೊಬ್ಬರ<br>ಒತ್ತಿ ಮಾತ ತಾಳಲಾರಳೆಂದು ಧಾತ್ರಿ ನುಡಿದಳು ॥361॥ |
| ಸುಮ್ಮನೆ ಬಂದು ಮಾತಾಡಿದರೆ ಗಮ್ಮನೆ ಮುನಿವರೆ<br>ಚಿನ್ನದ ಗೊಂಬೆ ಬಣ್ಣದ ಖನಿಯೆ ಬಾರೆ ಎಂದನು ॥362॥ |
| ಮುಗುಳು ನಗೆ ನಗುತಲಿ ಕಮಲಮುಖಿ ಎದ್ದು ಬಂದು<br>(ಶ್ರೀಧರನ) ತೊಡೆಯ ಮೇಲೆ ಬಂದು ಕುಳಿತಳು ॥363॥ |
| ಪ್ರಚಂಡ ಪರಾಕ್ರಮಗಳಿಂದ ಪಂಡಿತರ ಭೀತಿ ಉಂಟೆ<br>ಕಂಡುಕೊಂಡೆ ನಿಮ್ಮ ಪದಾಂಬುಜದ ನಿಜಸೇವೆಯ ॥364॥ |
| ದೇಶಕರ ಮಗಳು ಎಂದು ಆದಿದೇವ ನುಡಿದಿರಿ<br>ಪರವರಿಗೆ ಪರದೇಶಿ ಪರಮಾತ್ಮನಲ್ಲವೇ ॥365॥ |
| ರಾಯರ ಮಗಳು ಎಂದು ಆದಿದೇವ ನುಡಿದಿರಿ<br>ಸರ್ವ ರಾಯರುಗಳು ನಿಮ್ಮ ಹೃದಯದಲ್ಲಿಹೋರು ॥366॥ |
| ಶ್ರೀವತ್ಸಧರನ ಶ್ರೀದೇವಿ ಸ್ತೋತ್ರವನೆ ಮಾಡಿ<br>ಅನುರಾಗದಿಂದಲಾವಾಗ ಬಳಿಯಲ್ಲಿಹೋಳು ॥367॥ |

| |
|---|
| ಪಂಕಜಾಕ್ಷನ ಚರಿತ್ರೆಯ ಅಂಕಜಾತ ನೋಡಬಂದ<br>ಅನೇಕ ಸ್ತ್ರೀಯರನೆ ಸಂತೈಸುವನೆಂದು ॥368॥ |
| ಒಂದು ಮಂದಿರಕೆ ಬರಲು ಗಂಧ ಪರಿಮಳವ ಪೂಸಿ<br>ಮಂದಾರ ಮಾಲೆ ಕೊರಳಿಗ್ಹಾಕಿ ನಗುತ ನಿಂತಿಹ ॥369॥ |
| ಮೂರನೆಯ ಮನೆಗ ಬರಲು ನಾರಿ ಉದ್ಧವನ ಒಡಗೊಂಡು ದಾಯವನಾಡಿ ಸೋಲಿಸಿ ನಗುತ<br>ನಿಂತಿಹ ॥370॥ |
| ಐದನೆಯ ಮನೆಗೆ ಬರಲು ಅಳುವ ಮಕ್ಕಳೆತ್ತಿಕೊಂಡು<br>ಕಾಂತೇರ ಕರೆಯಂತ ತೊಟ್ಟಿಲ ತೂಗುತ ॥371॥ |
| ಕುದುರೆಯ ಕುಣಿಸುತ ಚತುರಂಗವಾಡುತ<br>ಕರೆದು ಮಕ್ಕಳಿಗೆ ಅಸ್ತ್ರವಿದ್ಯೆ ಕಲಿಸುತ ॥372॥ |
| ಸ್ನಾನ ದಾನ ಮೌನ ಮಂತ್ರ ದೇವರಪೂಜೆ ಅಗ್ನಿಹೋತ್ರ<br>ವಾರಿಗಿ ಸ್ತ್ರೀಯರ ಕೂಡೆ ಜಲಕ್ರೀಡೆಯ ॥373॥ |
| ಪುರಾಣ ವ್ಯಾಖ್ಯಾನಗಳನು ಹೇಳುತ ಕೇಳುತ<br>ಮಾನ್ಯೇರ ಕರೆದು ಏಕಾಂತವಾಡುತ ॥374॥ |
| ಕನ್ಯಾದಾನ ಮಾಡುತ ಕನ್ನಡಿಯ ನೋಡುತ<br>ಮಾನ್ಯೇರ ಕರೆದು ಏಕಾಂತವಾಡುತ ॥375॥ |
| ಬ್ರಹ್ಮಭೋಜನ ಮಾಡಿಸುತ ಗಂಧ ವೀಳ್ಯ ಕೊಡುತಲಿ<br>ವಂದಿಸಿ ಜನ್ಮ ಸಾಫಲ್ಯವೆನುತಲಿ ॥376॥ |
| ವಂದಿಸಿ ರಾಯರ ದಂಡಿಸಿ ಚೋರರ<br>ವಂದಿಸಿ ಗುರುಗಳ ಅದಂಣವನೇರಿಸಿ ಹೋದನು ॥377॥ |
| ಅಪಾರಮಹಿಮನೆಂದು ಪೊಗಳುತ ನಾರದ<br>ಶ್ರೀವೀಣೆ ಕೊಂಡು ತೀವ್ರದಿಂದ ತೆರಳಿ ಹೋದನು ॥378॥ |
| ಯಮಲೋಕಗಳಿಗಾಗಿ ಬಂದ ನಾರದನು<br>ಪಾಂಡುವನೇಕ ನರಕ ಭೋಗಿಸೋದು ಕಂಡ ನಾರದ ॥379॥ |
| ನಾರದ ನೀನು ಕೇಳು ಧರ್ಮರಾಯಗೆ ಹೋಗಿ ಹೇಳು<br>ಧರ್ಮ ರಾಜಸೂ(ಯ)ಯಾಗ ಮಾಡಿದರೆ ನಾ ಸ್ವರ್ಗಸ್ಥನಾಗುವೆ ॥380॥ |
| ನಾರದ ನೀನು ಕೇಳು ಎನ್ನ ಬಾಲರಿಗೆ ಹೋಗಿ ಹೇಳು<br>ಧರ್ಮ ರಾಜಸೂಯ ಯಾಗ ಮಾಡಿದರೆ ನಾ ಸ್ವರ್ಗವೇರುವೆ ॥381॥ |
| ಅಂದ ಮಾತನು ಕೇಳಿ ಬಂದನಾಗ ನಾರದ<br>ಪಾಂಡುವನೇಕ ನರಕ ಭೋಗಿಸೋದು ಬಂದು ಹೇಳಿದ ॥382॥ |

| |
|---|
| ರಥವನೇರಿ ಶ್ರೀಕೃಷ್ಣ ಶಕ್ರಪುರಕೆ ತೆರಳಿದ<br>ಧರ್ಮನು ಕಂಡು ನಮಸ್ಕಾರ ಮಾಡಲು ॥383॥ |
| ಕುಂತಿಯ ಚರಣಕ್ಕೆ ವೈಕುಂಠಪತಿ ಎರಗಿದ<br>ಭೀಮ ತನ್ನ ಬಾಹುವಿನಂದಾಲಿಂಗಿಸಿಕೊಂಡನು ॥384॥ |
| ಪಾರ್ಥ ಬಂದು ದೇವರಿಗೆ ಪೊಡಮಟ್ಟು ಹರುಷದಿಂದ<br>ನಕುಲ ಸಹದೇವರು ಬಂದು ಪೊಡವಂಟರು ॥385॥ |
| ಬಡನಡು ಬಳುಕುತ ಮುಡಿದ್ದೂವು ಉದುರತ<br>ಅಣ್ಣನ ಪಾದಕ್ಕೆರಗಿ ಸ್ತೋತ್ರ ಮಾಡಲು ॥386॥ |
| ಪೊಡಮಟ್ಟ ತಂಗಿಯರ ಪಿಡಿದೆತ್ತಿ ತಕ್ಕೈಸಿ<br>ಕಡೆಗಣ್ಣಿನಿಂದ ನೋಡಿ ಧೂಳ ಕೊಡವುತಿದ್ದನು ॥387॥ |
| ನಾರದನ ಮಾತು ಧರ್ಮರಾಯ ಹೇಳುತಿದ್ದನು<br>ಮುಗುಳು ನಗೆಯಿಂದ ದೇವ ಕೇಳುತಿದ್ದನು ॥388॥ |
| ರಾಯನ ಮಾತಿಗೆ ದೇವ ಮಾತನಾಡಿದ<br>ಮಗಧರಾಜ ಪ್ರಬಲನು ಯಜ್ಞಮಾಡಲಾಗದು ॥389॥ |
| ಭೀಮ ಅರ್ಜುನರ ಕಳುಹಿ ಜರೆಯ ಸುತನ ಮಡುಹಿದರೆ<br>ರಾಜಸೂಯಯಾಗ ಪೂರ್ಣವಾಗೋದೆಂದನು ॥390॥ |
| ನಯನ ಮನವು ಹೋದರೆ ತನುವು ನಿಲ್ಲಲಾಪುದೆ<br>ಘನಮಹಿಮ ಕೃಷ್ಣ ಯಜ್ಞಸಾಕು ಎಂದನು ॥391॥ |
| ರಾಯನ ಮಾತಿಗೆ ದೇವ ಮಾತನಾಡಿದ<br>ಭೀಮ ಅರ್ಜುನರ ತಂದು ನಿನಗೆ ತೋರುವೆ ॥392॥ |
| ಕೃಷ್ಣನ ದೃಷ್ಟಿ ಮುಂದೆ ಕುಟ್ಟಿ ಹಾಕುವೆನು ಅವನ<br>ಸೃಷ್ಟಿಪತಿ ಅಪ್ಪಣೆಯ ಪಾಲಿಸೆಂದನು ॥393॥ |
| ಅನುಜಗಾಜ್ಞೆಯ ಕೊಟ್ಟು ಅನುವರ್ಧನನಮುಖವ ನೋಡಿ<br>ಅವನ ಶಿರವನಳಿಯಲಿಕ್ಕೆ ಇವನ ಬಾಹು ಎಂದನು ॥394॥ |
| ದೇವರ ಕೂಡಿಕೊಂಡು ಆಲೋಚನೆಯ ಮಾಡಿ<br>ದ್ವಿಜರ ವೇಷ ಧರಿಸಿ ಮಗಧ ದೇಶಕ್ಹೋದರು ॥395॥ |
| ಈಶ್ವರನ ಸೀಳುತ ಭೇರಿ ಚೂರ್ಣ ಮಾಡುತ<br>ಬೀದಿ ಸೂರೆಮಾಡಿ ಗೋಡೆ ಒಡೆದು ಹೊಕ್ಕರು ॥396॥ |
| ಲಿಂಗಾಕಾರವಾದ ಪರ್ವತದ ಗೊಡೆ ಒಡೆದರು<br>ವೈರಿ ಸಾಮರ್ಥ್ಯದಿಂದ ಬಂದು ನಿಂತರು ॥397॥ |

| |
|---|
| ವೈರಿಯ ಧ್ವನಿಯ ಕೇಳಿ ಜರೆಯ ಸುತನು ನಡುಗಿದ<br>ಏನು ಬೇಡುವೆ ಬೇಡು ಕೊಡುವೆನೆಂದನು ‖398‖ |
| ಶ್ರೀ ಹರಿ ಕೊಟ್ಟ ಐಶ್ವರ್ಯ ಪರಿಪೂರ್ಣವಾಗಿದೆ<br>ಯುದ್ಧ ಭಿಕ್ಷ ಬೇಕೆಂದು ನುಡಿದ ಭೀಮನು ‖399‖ |
| ಇವನು ಗೋವಳನು ಪಾರ್ಥ ಸಣ್ಣವನು<br>ಭೀಮನ ಕೂಡೆ ಯುದ್ಧ ಮಾಡುವೆನೆಂದನು ‖400‖ |
| ಪಟ್ಟಣದ ಹೊರಗೆ ಹೋಗಿ ಗೆರೆಯ ಮಂಡಲ ಬರೆದು<br>ದ್ವಂದ್ವ ಯುದ್ಧಕ್ಕೆ ಅವರು ಪ್ರಾರಂಭಿಸಿದರು ‖401‖ |
| ಹದಿನೆಂಟು ದಿನಗಳಲ್ಲಿ ಗೆರೆಯ ಮಂಡಲ ಬರೆದು<br>ದ್ವಂದ್ವ ಯುದ್ಧಕ್ಕೆ ಅವರು ಪ್ರಾರಂಭಿಸಿದರು ‖402‖ |
| ತೃಣದ ಕೊನೆಯ ಹಿಡಿದು ಕೃಷ್ಣ ತಿರುಗಿ ಮುರುಗಿ ತೋರಿಸಿದ<br>ಭೀಮ ತನ್ನ ಬಾಹುವಿಂದ ಅವನ ಮಡುಹಿದ ‖403‖ |
| ವಿಪ್ರರು ಭೋಜನಕ್ಕೆ ಕೂತು ಭೋಜನಕ್ಕೆ ತಡವಾಯಿತೆಂದು<br>ಜರಾಸಂಧ ಮೃತನಾದನೆಂದು ನುಡಿದರು ‖404‖ |
| ರಾಯರಾಯರನೆ ಬಿಡಿಸಿ ಅಭ್ಯಂಜನೆಯ ಮಾಡಿಸಿ<br>ವಸ್ತ್ರ ಅಲಂಕಾರದಿಂದ ಅವರ ಒಡಂಬಡಿಸಿದ ‖405‖ |
| ಹಿಡಿದು ಹಾಕಿದ ಕಾರಣದಿಂದ ಸ್ವಾಮಿ ನಿಮ್ಮ ಕಂಡೆವು<br>ಜರಾಸಂಧನು ನಮಗೆ ಇದ ದಯಮಾಡಿದ ‖406‖ |
| ನಿಮ್ಮಪ್ಪಗೆ ಉತ್ತರ ಪಾರ್ಶ್ವವೆಲ್ಲವ ಮಾಡಿ<br>ಪಿಂಡ ಪ್ರದಾನ ಮಾಡಿ ಉದ್ಧರಿಸು ಎಂದರು ‖407‖ |
| ಮಗನೆ ಅಭಿಷೇಕವ ಮಾಡಿ ಮಗಳ ಮದುವೆಮಾಡಿಕೊಂಡು<br>ಭಂಡಾರ ಮನೆ ಒಡೆದು ಆನೆ ಕುದುರೆ ಹೇರಿದರು ‖408‖ |
| ಇಂದ್ರಪ್ರಸ್ಥದ ಮುಂದೆ ಕೊಂಬುಗಳ ಧ್ವನಿಯು ಕೇಳಿ<br>ಬಂದರೆಂದು ತಿಳಿದು ಧರ್ಮ ಯಜ್ಞಸಂಭಾರ ಹೂಡಿದ ‖409‖ |
| ಅಂದು ತ್ರಿದಂಡಿ ಹೋಗಿ ಕೊಂಡು ತಂದ ಸುಭದ್ರೆಯ<br>ಚಂದ್ರ ಬಿಂಬದಂತೆ ಬಂದಳಿಂದುವದನಳು ‖410‖ |
| ಅಷ್ಟು ಮಂದಿ ಸ್ತ್ರೀಯರೊಳಗೆ ಕೃಷ್ಣೆ ಮುಖ್ಯವಾಗಿರಲು<br>ಕಟ್ಟಿದರು ಸತ್ಯದೀಕ್ಷೆ ಪದವಿಗ್ಯೋಗ್ಯಳು ‖411‖ |
| ಅಗ್ರಪೂಜೆ ಯಾರಿಗೆಂದು ಎದ್ದು ಕುರುಪತಿಯು ಕೇಳಲು<br>ಉದ್ಯೋಗದಿಂದ ಕೃಷ್ಣಪಾದ ತೊಳೆದು ಪೂಜಿಸು ‖412‖ |

| |
|---|
| ಶಿಶುಪಾಲ ರೋಷದಿಂದ ಸಭೆಯೊಳಗೆ ಎದ್ದು ನುಡಿದ<br>ಅವನಿ ಮೇಲೆ ರಾಜ ಋಷಿಗಳು ಅಳಿದು ಹೋದರೇ ‖413‖ |
| ಕುಲವು ಇಲ್ಲ ಗೋತ್ರವಿಲ್ಲ ಮೊಲೆಯನುಂಡು ಅವಳ ಕೊಂದ<br>ಇಂಥ ಕಿಡಿಗೇಡಿಗೆ ಅಗ್ರಪೂಜೆ ಹ್ಯಾಗೆ ದೊರೆವುದ ‖414‖ |
| ನಿಷ್ಠುರ ವಾಕ್ಯಗಳ ದುಷ್ಟನಿಂದ ಕೇಳಿದ<br>ಕುಂತಿ ಸತುನು ಕೋಪದಿಂದ ತುಟಿಯ ತಿರುವಿದ ‖415‖ |
| ಪ್ರತ್ಯಕ್ಷದಿಂದ ಕೇಳಿದಾನು ಕುಟ್ಟಿ ಹಾಕುವೆನು ಅವನ<br>ಅಪರೋಕ್ಷ ಶ್ರವಣ(ಕೆ) ನಾಲಿಗೆಯ ಮೆಟ್ಟಿ ಸೀಳುವೆ ‖416‖ |
| ಕಣ್ಣು ಕೆಂಪಗೆ ಮಾಡಿ ಸನ್ನದ್ಧನಾಗಿ ಭೀಮ<br>ಸಣ್ಣಭಗಿನಿಯ ಮಗನ ಕೊಲುವೆನೆಂದನು ‖417‖ |
| ಮುತ್ಯ ಬಂದು ತೆಕ್ಕಿಯಿಂದ ಘಟ್ಯಾಗಿ ಪಿಡಿದನು<br>ಕೊಂದಾನು ಕಂದ ಕೃಷ್ಣ ತಿರುಗೊ ಹಿಂದಕೆ ‖418‖ |
| ಕುಸುಮನಾಭ ಹರುಷದಿಂದ ಶಿರವ ತೆಗೆಯಲು ಅವನ<br>ತೇಜಸ್ಸು ಹೋಗಿ (ವಾಸುದೇವನೊಳಗೆ) ಕೂಡಿತು ‖419‖ |
| (ಯಜ್ಞಾಂತದಲ್ಲಿ) ಸರ್ವ ನದಿಯ ಸ್ನಾನವನ್ನು ಮಾಡಿ<br>ವಜ್ರಪಾಣಿಯಂತೆ ಧರ್ಮ ಸಭೆಯಲೊಪ್ಪಿದ ‖420‖ |
| ಬಹಳ ಮಂದಿ ಋಷಿಗಳಿಗೆ ರಾಯ ಪ್ರಶ್ನೆ ಮಾಡಿದ<br>ಸೋಜಿಗವೇನೆಂದು ಧರ್ಮ ಕೇಳುತ್ತಿದ್ದನು ‖421‖ |
| ಮೊದಲ ಜನ್ಮದಲ್ಲಿ ಹಿರಣ್ಯಾಕ್ಷ ಹಿರಣ್ಯ ಕಶ್ಯಪರು<br>ಎರಡನೆಯ ಜನ್ಮದಲ್ಲಿ ರಾವಣ ಕುಂಭಕರ್ಣರು ‖422‖ |
| ಮೂರನೆಯ ಜನ್ಮದಲ್ಲಿ ಶಿಶುಪಾಲ ದಂತವಕ್ರರಾಗಿ<br>ಗೋವಳನ ಕೈಲಿ ವಧನಾದನೆಂದರು ‖423‖ |
| ರುದ್ರವೀಣೆಯ ಕೊಂಡು ಉದ್ಯೋಗದಿಂದ ನಾರದ<br>ಉದ್ಯೋಗದಿಂದ ಕೂಡಿ (ದ್ವಾರಾವತಿಗೆ) ಬಂದನು ‖424‖ |
| ಅಂದು ಸ್ವಯಂವರದಲ್ಲಿ ಬಂಧನವ ಮಾಡಿ ಸಾಂಬನ<br>ಬಂಧನವನ್ನು ಬಿಡಿಸಬಂದ ಬಲರಾಮನು ‖425‖ |
| ಸುರನದಿಯಿಂದ ಉದಕ ನೇಗಿಲಿಂದ ಉರುಳಿಸಲು<br>ಕೌರವರು ಮೊರೆ ಹೊಕ್ಕರೆ ಬಲರಾಮಗೆ ‖426‖ |
| ಇಬ್ಬರೊಂದಾಗಿ ಕೂಡಿ ಮಾರ್ಗದಲ್ಲಿ ಬರುತಿರಲು<br>ಉದಂಕ ಕೃಷ್ಣನ ಕಂಡು ಸ್ತೋತ್ರ ಮಾಡಿದ ‖427‖ |

| |
|---|
| ವರವ ಕೊಟ್ಟನೊ ನಿನಗೆ ಅಮೃತಪಾನ ಮಾಡಿಸೆಂದು<br>ವಾಸುದೇವ ವಾಶಿಗ್ಗೇಳಿ ಧರ್ಮದಿಂದ ತೆರಳಿದ ‖428‖ |
| ಶಂಬರಾಸುರನ ಸೀಳಿಕೊಂಡು ಬಂದು ಪ್ರದ್ಯುಮ್ನ ರತಿಯ<br>(ರುಕ್ಮವತಿಯ ಕೊಟ್ಟ ರುಕ್ಮ ರುಕ್ಮಿಣಿಯ) ಕುಮಾರಗೇ ‖429‖ |
| ಮಗನ ಮಗಳ (ಮದುವೆಯೊಳಗೆ) ನೇಗಿಲಧರನು<br>ಜೂಜನಾಡುತ ಬೀಗನ ಪ್ರಾಣವ ಸೆಳೆದನು ‖430‖ |
| ಮಡದಿ ಸೋದರನು ಮಡಿಯೆ ಜಗದ ಆಧಾರ ಕೃಷ್ಣ<br>ಮುಗುಧನಾಬಿ ಸಭೆಯೊಳಗೆ ತೋರುತ್ತಿದ್ದನು ‖431‖ |
| ತನ್ನ ಪತಿಯಗ್ರಜಗೆ ತಲೆಬಗ್ಗಿದಂತೆ ತೋರಿದಳು<br>ನುಗ್ಗು ಮಾಡುವಳು ಬ್ರಹ್ಮವೈರಿ ಖಡ್ಗದಿಂದ ರುದ್ರನ ‖432‖ |
| ಮಾಯಾ ಪುರುಷರ ಮಾಯ ಮೋಹಿಸಿತು ಮಂತರಿಗೆ(?)<br>ಮಾಯಾದೇವಿ ಇವಳೆ ಎಂದು ವೇದ ನುಡಿಯಿತು ‖433‖ |
| ಗೋದಾನದಲ್ಲಿ ಸಕಲ ದೇಶವು ತುಂಬಿರಲು<br>ಹೀನ ಯೋನಿಯಿಂದ ಹಾಳು ಬಾವಿಯೊಳಗೆ ಬಿದ್ದನು ‖434‖ |
| ಕೃಷ್ಣನ ದೃಷ್ಟಿ ಬೀಳೆ ಉತ್ತಮ ಪುರುಷನಾಗಿ<br>ಕೆಟ್ಟ ಯೋನಿ ನಷ್ಟವಾಗಿ ಸ್ತೋತ್ರವ ಮಾಡಿ ತೆರಳಿದ ‖435‖ |
| ಬೆಳಗಿನ ಜಾವದಲ್ಲಿ ಶ್ರೀದೇವಿಯಾಲಿಂಗಿಸಿ<br>ಭೂದೇವಿ ಮುದದಿಂದ ಸ್ತೋತ್ರಗೊಂಬಳು ‖436‖ |
| ಆಲದೆಲೆ ಛತ್ರ ಚಾಮರ ಬಹುರೂಪವಾದಳು<br>ಶ್ರೀಧರನ ಪರಿಪರಿಯಿಂದ ಸೇವಿಸುವಳು ‖437‖ |
| ಬಾಲಿಕೇರು ಬದಿಯಲ್ಲಿ ಚಾಮರವ ಬೀಸುತಿರಲು<br>ನಾರಿಯರು ನಕ್ಕರವನ ಜೀರ್ಣ ವಸ್ತ್ರಕೆ ‖438‖ |
| ತಾನು ಪರದೇವತೆ ಸೋಜಿಗವ ನೋಡಿರೋ<br>ಶ್ರೀದೇವೇರೊಡನೆ ಹರಿಯು ರಮಿಸುತಿದ್ದನು ‖439‖ |
| ಬೇಗದಿಂದ ಎದ್ದು ಬಂದು ಪಾದದ ಮೇಲೆ ಬಿದ್ದು<br>ಆಲಿಂಗಿಸಿ ಕರವ ಪಿಡಿದು ಕರೆದು ತಂದನು ‖440‖ |
| ವರ ಆಸನದ ಮೇಲೆ ಹರಿಯು ತಾನು ಕುಳ್ಳಿರಲು<br>ಕರಗಳಿಂದ ಚರಣ ತೊಳೆದು ಶಿರದಲ್ಲಿ ಧರಿಸಿದ ‖441‖ |
| ನಮ್ಮತ್ತಿಗೆ ಪ್ರೀತಿಯಿಂದ ಮತ್ತೆ ಏನು ಕಳುಹಿದಳು<br>ಕೃಷ್ಣರಾಯ ನಗುತ ಗಂಡ ಹುಡುಕುತಿದ್ದನು ‖442‖ |

| |
|---|
| ಮುಷ್ಟಿ ತುಂಬ ಅವಲಕ್ಕಿ ಮುಕ್ತಿ ಮೋಕ್ಷದೈಶ್ವರ್ಯ ಕೊಟ್ಟು<br>ಮತ್ತೆ (ಬೇಡೆ) ಪಟ್ಟದ ರಾಣಿ ಕೈಯ ಹಿಡಿದಳು ॥443॥ |
| ಮಡದಿಗೆ ಹೇಳಿದ ಕರಿಯೆ ನಿನ್ನ ಭಾವನ<br>ಕಡು ಬೇಗದಿಂದ ಎಡೆಯ ಮಾಡು ಎಂದನು ॥444॥ |
| ಕಮಲ ಮುಖಿಯು ಎದ್ದು ಮುಗುಳು ನಗೆಗಳಿಂದ ನೀರು ಬೆರಸಿ<br>ಥಳಥಳಿಪ ಆಭರಣವ ಇಡ(ಲು) ಕೊಟ್ಟಳು ॥445॥ |
| ಬಟ್ಟ ಮುತ್ತು ಹೊಲುವ ಬಟ್ಟವಿ ಪಾಯಸ<br>ಮಿತ್ರೆ ರುಕ್ಮಿಣಿ ತಂದು ಎಡೆಗೆ ಬಡಿಸುತ್ತಿದ್ದಳು ॥449॥ |
| ಸಾಲು ಮತ್ತು ಹೋಲುವ (ಶಾವಿಗೆ) ಪಾಯಸ<br>ನಾರಿ ರುಕ್ಮಿಣಿ ತಂದು ಎಡೆಗೆ ಬಡಿಸುತ್ತಿದ್ದಳು ॥447॥ |
| ಉಂಡು ತಾಂಬೂಲವ ಕೊಂಡು ಒಂದು ಪರಿಯಂಕದಿ<br>ವಂಡೋಢ್ವದಿಂದ ನಿದ್ರೆಗೈದು ಎದ್ದು ಕುಳಿತನು ॥448॥ |
| ಎಂದೆಂದಿನ ಮಾತುಗಳು ಚೆಂದದಿಂದ ಆಡುತ್ತಿರಲು<br>ಹಿಂದೆ ನಮ್ಮ ತಾಯಿ ವೃಂದ್ಯಕ್ಕೆ ಕಳುಹಲು ॥449॥ |
| ಬಂದಿತು ಸಿಡಿಲು ಮಿಂಚು ಅಂಧಕಾರವಾಯಿತು<br>ಅಂಬುಜನಾಭನ ಕಾಣದೆ ಅಂಬು ತುಂಬಿತು ॥450॥ |
| ಕೋಮಲ ಹೃದಯರಾದ ಗುರುಗಳಿಗೆ ಬೆಳಗು ಆಗ(ಲು)<br>ಅರಣ್ಯದೊಳಗೆ ಆಲಸ್ಯವಾಯಿತು ॥451॥ |
| ಕಟ್ಟಿಸಿದ ಬಡಿಗ ವಿಚಿತ್ರ ಮುತ್ತು ಕೆತ್ತಿಸಿದ<br>ಪಟ್ಟಣಕ್ಕೆ ನಾಲ್ಕು ಕೋಟೆ ಬೀದಿ ಚಾವಡಿ ॥452॥ |
| ಮಂಗಳಾರತಿ ಅಂದಣ ಮುಂದೆ ಭಟರು ಹೊಗಳುತ<br>ಕೊಂಬು ಕಹಳೆ ಕೊಳಲ ಧ್ವನಿಗೆ ಎದುರುಗೊಂಡರು ॥453॥ |
| (ಮುರಹರನ) ಧ್ಯಾನದಿಂದ ಪುರವನಾಳಿದ ಹಿರಿಯನಾಗಿ<br>ಹೇಳಿದನು ಕೃಷ್ಣರಾಯ ಸಾಧು ಜನರಿಗೆ ॥454॥ |
| ಸಕಲ ದೋಷ ಪರಿಹಾರ ಸಂತಾನ ಲಾಭಗಳುಂಟು<br>ಮುಕ್ತಿ ಕೊಡುವ ಶಕ್ತಿ ಕೊಡುವ ಪುರಂದರವಿಠಲ ॥455॥ |
| ಮುರಹರನ ಧ್ಯಾನದಿಂದ ಪುರವನಾಳಿದ ಹಿರಿಯನಾಗಿ<br>ಸ್ವಜನರಿಂದ ಏರಿದನು ಪರಲೋಕವ ॥456॥ |
| (ಚಿತ್ರಲೇಖೆ)ಬರೆದು ಕೊಟ್ಟು ಎತ್ತಿ ಒಯ್ಯೆ ಮಾರಪುತ್ರನ<br>ಹತ್ತು ತೋಳು ಕತ್ತರಿಸಿ ಕೃಷ್ಣ ತಂದ ಮೊಮ್ಮಗನ ॥457॥ |

| |
|---|
| ಆರು (ಮೋರೆಯವ) ಕಾಲ ವಾಯು ಯಮ ರುದ್ರರು<br>ಶ್ರೀಕೃಷ್ಣನ ಯಾಗಕ್ಕಾದಿ ಬರುತಲಿದ್ದರು ॥458॥ |
| ಯಜ್ಞವ ಮಾಡಬೇಕೆಂದು ಕರೆಸಿ ವಶಿಷ್ಠನ<br>ಒಂದು ಘಳಿಗೆ ಧರಣಿ ಕುದುರೆ ತಿರುಗಿ ತಂದನು ॥459॥ |
| ಕಲ್ಲು ಹೊತ್ತು ಹುಲ್ಲು ಕಚ್ಚಿ ಅಲ್ಲಿಗೆ ಬಂದ ಬ್ರಾಹ್ಮಣ<br>ಸೊಲ್ಲು ಕೇಳಿ ಬಾಲಕರ ರೂಪ ಕಾಣೆನೆಂದನು ॥460॥ |
| ಬಲ್ಲಿದ ಪಾರ್ಥ ತಾನು ಬಿಲ್ಲು ತೆಗೆದುಕೊಂಡು ಬಂದು<br>ಎಲ್ಲಿ ನಿನ್ನ ಭವನ ಎನಗೆ ತೋರಿಸೆಂದನು ॥461॥ |
| ವೃಷ್ಣಿಕುಲದಲ್ಲಿ ಹುಟ್ಟಿದರು ರಾಮಕೃಷ್ಣರು<br>ಅತಿ ಪರಾಕ್ರಮಿಗಳು ಅವರ ಕೈಯಲಾಗಲಿಲ್ಲವು ॥462॥ |
| ಅಂಧಕರ ಕುಲಕೆ ಸರಿ ತಂದಿ ಎನ್ನನ್ನು<br>ಹಿಂದೆ ಖಾಂಡವವನ ದಗ್ಧ ಮಾಡಲಿಲ್ಲವೇ ॥463॥ |
| ತಲೆಯ ತಗ್ಗಿಸಿಕೊಂಡು ನುಡಿದ ಪ್ರತಿಜ್ಞೆಗೆ<br>ಬಾಲಕರ ಸಹಲದಿದ್ದರೆ ನಾ ಹೋಗುವೆ ಪಾವಕ ॥454॥ |
| ಪ್ರದ್ಯುಮ್ನ ಸಾಂಬಾದಿಗಳ ಮತ್ತೆ ಮಿಕ್ಕ ಹಿರಿಯರ<br>ಹೋಗಬೇಡಿರೆಂದು ಕೃಷ್ಣ ಸಂಜ್ಞೆ ಮಾಡಿದ ॥465॥ |
| ವಿಪ್ರನ ಮಕ್ಕಳನು ರಕ್ಷಿಸಬೇಕೆಂದೆನುತ<br>ಗಟ್ಟಿ ದಿಕ್ಕುಗಳನೆ ಪ್ರಸವಕಾಲ ನೋಡಿದ ॥466॥ |
| ಮಂತ್ರ ವಿಧಾನದಿಂದ ಯಂತ್ರ ಬಂಧನವ ಮಾಡಿ<br>ವಂಚನೆಯ ಕಂಡು ಭೀಭತ್ಸು ನಾಚಿದ ॥467॥ |
| ಸುಡು ನಿನ್ನ ಜನ್ಮ ಪರಾಕ್ರಮ ತೋರಿದ್ದಿಲ್ಲವೆ<br>ಧಿಕ್ಕಾರ ಮಾಡಿದಿ ಕಮಲಮುಖದ ಸ್ವಾಮಿಯ ॥468॥ |
| ಹೀನದಿಂದ ನಾನಾಬಗೆ ಹೀನ ಮಾತುಗಳನೆ ಕೇಳಿ<br>ಅಭಿಮಾನದಿಂದ ವಹ್ನಿಯೊಳಗೆ ಬೀಳಬಂದನು ॥469॥ |
| ಚೆನ್ನಿಗ ಕೃಷ್ಣ ತನ್ನ ಕನ್ನೆ ಮೊಮ್ಮಗನ ಸುತನ<br>ಕೈಹಿಡಿದು ಕರೆದು ರಥದ ಮೇಲೆ ಏರಿಸಿದನು ॥470। |
| ಸಪ್ತದೀಪ ಸಾಗರ ಹೇಮದುರ್ಗ ಪರ್ವತ<br>ಕೃಷ್ಣ ಪ್ರೀತಿಯಿಂದ ಪಾರ್ಥಗೆ ತೋರಿದ ॥471॥ |
| ಹರಿಗುರುಗಳ ಹರಿಭಕ್ತರ ದ್ವೇಷ ದ್ವೇಷ ಮಾಡಿ ಮಾಡಿ<br>ಪಾಪಸ್ಥಳವ ಬಿಟ್ಟು ಚಕ್ರ ಅತ್ತ ಸಾರಿದ ॥472॥ |

| |
|---|
| ಹರಿಗುರುಗಳ ಹರಿಭಕ್ತರ ದ್ವೇಷವ ಮಾಡಿ ಮಾಡಿ<br>ವಾರಿಗ ದುಃಖ ಮುಳುಗಿ ಕೆಲವರ ಕಂಡನು ॥473॥ |
| ಅಸುರರ ಭಾವರ ಅಸುರಭಾವವನ್ನು ಬಿಡಿಸಿ<br>ಋಷಿಕುಮಾರರೆಂದು ವಾಸುದೇವ ಕರೆಸಿದ ॥474॥ |
| ಯಜ್ಞ ಶಾಲೆಗೆ ಬಂದು ಗುರುಗಳ ಪ್ರಶ್ನೆ ಮಾಡಿದ<br>ಸೀಮೆ ಮೀರಿ ಹೊದನೆಂದು ಪ್ರಯಶ್ಚಿತ್ತವ ಕೊಂಡನು ॥475॥ |
| ವಸಿಷ್ಠ ಕೃಷ್ಣಗೆ ಅಧ್ವರ್ಯನಾಗಿ (ನಡೆಸುತಿರಲು)<br>ಕೋಟಿ ದ್ರವ್ಯದಿಂದ ಯಜ್ಞ ದಕ್ಷಿಣಯೆ ಕೊಟ್ಟನು ॥476॥ |
| ಗೋವುದಾನ ಹಿರಣ್ಯ(ದಾನ) ದಶದಾನ(ವ)<br>ದೇಶದೇಶದ ಋಶಿಗಳಿಗೆ ವಾಸುದೇವ ಕೊಟ್ಟನು ॥477॥ |
| ಮೂರು ರೂಪ ಕೂಡಿ (ತೋರಿದರು) ಭೂಮಿ ಮೇಲೆ<br>ಎಂದು ನಾರದ ಹೇಳಿದನು ಸಾಧು ಜನರಿಗೆ ॥478॥ |
| ಯಜ್ಞವ ಮಾಡಿ ಯಜ್ಞವರಾ ಕರವ ಮುಗಿದಳು<br>ಯಜ್ಞಪತ್ನಿ ಕರೆಸಿದಳು ವೃದ್ಧ ಸತಿಯರ ॥479॥ |
| ಕಾಲು ತೊಳೆದು ಕಾಜಳ ಹಚ್ಚಿ ಸುದ್ರವ್ಯದಿಂದ ಅಲಂಕರಿಸಿ<br>ಮಾಣಿಕ್ಯ ಹಾಕಿ ಮೊರದ ಬಾಗಿಣವ ಕೊಟ್ಟಳು ॥480॥ |
| ಮಂಗಳಾದೇವಿ ನಮ್ಮ ಮಂಗಳಸೂತ್ರಕೆ<br>ಭಂಗ ಬೇಡವೆಂದು ತಾಯಿಗೊಂದಿಸಿದರು ॥481॥ |
| ಅಂಗನೇರ ಮಾತು ಕೇಳಿ ಇಂದಿರಾದೇವಿ ತಾನು<br>ಮಾತನಾಡದೆ ಮೌನದಿಂದ ಕುಳಿತಳು ॥482॥ |
| ಕಂದನ ಪರಾಕ್ರಮ ಕಂಡು ಏನ ಬೇಡಲೆಂದು<br>ಮನದಲ್ಯೋಚಿಸುತ್ತ ಮಗನ ಬಳಿಗೆ ಬಂದಳು ॥483॥ |
| ವಿಪ್ರನ ಮಕ್ಕಳನು ತಂದು ನೀನು ತೋರಿಸಿದಿ<br>ಎನ್ನ ಮಕ್ಕಳನೆ ತಂದು ತೋರಿಸೆಂದಳು ॥484॥ |
| ಮಕ್ಕಳ ತೊಡೆಯ ಮೇಲೆ ಇಟ್ಟು ಮೊಲೆಯ ಕೊಟ್ಟಳು<br>ಶ್ರೀಕೃಷ್ಣನುಚ್ಚಿಷ್ಟ ಉಂಡು ಸದ್ಗತಿಗೆ ಹೋದರು ॥485॥ |
| ವೇದಮೂರುತಿ ರಥಕೆ ವೇದದ ಕುದುರೆ ಕಟ್ಟ<br>ಮೇಘಪುಷ್ಪ ಬಲಾಹಕ ಸುಗ್ರೀವನೆನುತ ಕರೆದನು ॥486॥ |
| ಅಂಗನೇರ ಅಂದಣಕ್ಕೆ ಭಂಗಾರದ ಮಾಲಿಕೆ<br>ಇಂದಿರೇಶ ನಡುವೆ ನಿಂತು ಕರೆದ ಇಂದುಮುಖಿಯರ ॥487॥ |

| |
|---|
| ಅಲ್ಲಲ್ಲಿ ಮಾತನಾಡುತ ಎಲ್ಲರ ಕರೆವುತ<br>ಮುಗುಳು ನಗೇ ನಗುತ ಕಿರೀ ಬೆವರು ಬೆವರುತ ॥488॥ |
| ಗಂಗಾದೇವಿಯ ಒಳಗೆ ಪಾಂಡುರಂಗ ಇಳಿದ<br>ಅಂಗನೇರ ಸೀರೆಗಳ ಮೂಟೆ ಕಟ್ಟಿದ ॥489॥ |
| ವಾರಿಜನಾಭ ಬಾಯಿಯೊಳಗೆ ನೀರು ತುಂಬಿಕೊಂಡು<br>ಅವರ ಮೋರೆಯ ಮೇಲೆ ನೀರ ಉಗುಳುತ್ತಿದ್ದನು ॥490॥ |
| ರಂಗ ಅಂಗೈಯ ಒಳಗೆ ತಾಂಬೂಲವ ತುಂಬಿಕೊಂಡು<br>ಮಂಗಳಾಂಗೇರ ಮುಖದ ಮೇಲೆ ಚಿಮ್ಮುತ್ತಿದ್ದನು ॥491॥ |
| ಅಂಬರದ ಅಂಗೇನೇರು ಶ್ರೀರಂಗನ ಕ್ರೀಡೆ ಕಂಡು<br>ಅಂಗದಿಂದ ಇಂಥ ಗಂಡನ ಬಯಸುತಿದ್ದರು ॥492॥ |
| ಸುರನಾರಿಯರು ನರಹರಿಯ ಕ್ರೀಡೆಯ ಕಂಡು<br>ಆದಿ ಮಲ್ಲಿಗೆ ಜಾಜಿ ಕುಸುಮದ ಮಳೆಯ ಕರೆದನು ॥493॥ |
| ವಾರಸ್ತ್ರೀಯರು ಮಾರನಯ್ಯನ ಕ್ರೀಡೆ ಕಂಡು<br>ಮೂರು ಲೋಕ ಮೀರಿದಂತೆ ತೋರಿ ಜನರಿಗೆ ॥494॥ |
| ಅನಂತ ಮೂರುತಿ ಕಾಂತೇರ ಸೆರಗ ಗಂಟನ್ಹಾಕಿ<br>ಅನಂತ ಮೂರುತಿ ಸ್ನಾನವನ್ನೆ ಮಾಡುತಿದ್ದನು ॥495॥ |
| ಅವಭೃತವಾದ ಸ್ನಾನವನ್ನೆ ಖಗವಾಹನನಿಂದು ಮಾಡೆ<br>ಮೃಗವಾಹನ ಮಂದದಿಂದ ಬಂದು ಬೀಸಿದ ॥496॥ |
| ತನ್ನ ಮುಖದಿಂದ ಹುಟ್ಟಿದವರ ಪಾದಕ್ಕೆರಗಿದ<br>ಸುವರ್ಣ ಗೋದಾನ ಅಲಂಕಸಿಸಿ ಕೊಟ್ಟನು ॥497॥ |
| ಹರಿವ ಹಾವು ಹಿಡಿಯಬಹುದು ಉರಿವ ಕಿಚ್ಚು ಪಿಡಿಯಬಹುದು<br>ಮರಳು ಅಲ್ಲ ಮಾತು ನಿಶ್ಚಯ ಮಾಡಿಕೊಳ್ಳಿರೋ ॥498॥ |
| ಕೃಷ್ಣವೇಣಿಯಸ್ನಾನ ಕೃಷ್ಣ ಭೃತ್ಯರ ಸಂಗವನ್ನು<br>ಕೃಷ್ಣಶಾಸ್ತ್ರಶ್ರವಣ ಕೃಷ್ಣಪಾದ ದರುಶನ ॥499॥ |
| ಇಷ್ಟು ಈ ಜನ್ಮದಲ್ಲಿ ಕೊಟ್ಟು ರಕ್ಷಿಸು ಕೃಷ್ಣ<br>ಕೃಷ್ಣೆ ಕಷ್ಟ ಬಿಡಿಸಿದ ಶ್ರೀಕೃಷ್ಣ ಮೂರುತಿ ॥500॥ |
| ಬಂಧುಗಳ ಕೊಂದಾವ ಕೊಂದೇನೆನುತಲಿ<br>ಸಂಭ್ರಮದಿಂದ ದಂತವಕ್ರ ದಂಡೆತ್ತಿ ಬಂದನು ॥501॥ |
| ನಿಲ್ಲು ನಿಲ್ಲು ಗೋವಳ ಎಲ್ಲರ ಕೊಂದ್ಹಾಗೆ ಅಲ್ಲ<br>ಕೊಳ್ಳೊ ಎನ್ನ ಅಸ್ತ್ರ ನಿನ್ನ ಕೊರಳಿಗ್ಹಾಕುವೆ ॥502॥ |

| |
|---|
| ಸಾಗರದ ಮೊರೆಯತ್ತ ವೈರಿ ಸೈನ್ಯದ ಮೇಲೆ<br>ಸಿಂಹನೋಟ ನೋಡಿ ಶ್ರೀಕೃಷ್ಣ ತಿರುಗಿದ ॥503॥ |
| ಕುಸುಮನಾಬ ಹರುಷದಿಂದ ಶಿರವ ತೆಗೆಯಲು ಅವನ<br>ತೇಜಸ್ಸು ಹೋಗಿ ವಾಸುದೇವನೊಳಗೆ ಸೇರಿತು ॥504॥ |
| ಚಿತ್ರಚಾವಡಿಗೆ ಬರಲು ಮುಕ್ತಸುರರ ಕೈಗಳಿಂದ<br>ಎತ್ತಿಸುವ ಯತ್ನ ಭೃತ್ಯರಾಡಿಕೊಳ್ಳಿರೋ ॥505॥ |
| ಬಂದು ದೇವಕಿದೇವಿ ನಿಂದು ಮಗನ ಬೇಡಿದಳು<br>ಕಂದ ನಿನ್ನ ಬಾಲಲೀಲೆ ನೋಡುವೆನೆಂದಳು ॥506॥ |
| ತೊಟ್ಟ ಕುಪ್ಪಸವ ಬಿಚ್ಚಿ ಟೊಂಕಕೆ ಸುತ್ತಿದ<br>ಕೃಷ್ಣರಾಯ ತೋಳ ತಿದ್ದಿ ಸದ್ದು ಮಾಡಿದ ॥507॥ |
| ಗಂಡ ಭೇರುಂಡ ಕಾರುಂಡ ಗಿಳಿ ಕಂಗಳಿಂದ<br>ರಮಣ ಪಕ್ಷಿಯಂತೆ ಕುಣಿದನೆ ಜನನಿ ಎದುರಿಗೆ ॥508॥ |
| ಬಂದು ರುಕ್ಮಿಣಿದೇವಿ ನಿಂದು ನೋಡಿದಳು ಆಗ<br>ಇಂದು ಈ ರೂಪ ಎನಗೆ ಬೇಕು ಎಂದು ಬೇಡಿಕೊಂಡಳು ॥509॥ |
| ಏಳುನೂರ ಎಪ್ಪತ್ತು ಬಾಲಲೀಲೆ ಕಥೆಗಳನ್ನು<br>ವಾದಿರಾಜರು ಮಾಡಿದರು ಒಂದರ್ತತಿಯಿಂದಲಿ ॥510॥ |
| ವಾದಿರಾಜರು ಮಾಡಿದ ಬಾಲಲೀಲೆ ಹೇಳಿ ಕೇಳಿದವರಿಗೆ<br>ಸಾಯುಜ್ಯ ಮುಕ್ತಿ ಕೊಡುವ ಹಯವದನನು ॥511॥ |

## ಕಠಿಣ ಪದಗಳಿಗೆ ಅರ್ಥ

| |
|---|
| ಅಂಕಜಾತ – ಬ್ರಹ್ಮನ ತೊಡೆಯಿಂದ ಜನಿಸಿದವ, ನಾರದ |
| ಆರು – ತುಂಟ |
| ಅಟ್ಟುಳಿ – ಹಿಂಸೆ |
| ಅಂತರ – ತೊಂದರೆ |
| ಅನಿಮಿಷರು – ದೇವತೆಗಳು |
| ಅನುವರ್ಧನ – ಅರ್ಜುನ |
| ಅಂಬು – ನೀರು |
| ಅಮ್ಮಿ – ಮೊಲೆ |
| ಅರುಹ – ಅರ್ಹ |
| ಅಳ್ಳ – ? |
| ಆನಕದುಂದುಭಿ – ವಸುದೇವ |
| ಆವಿರ್ಭೂತ – ಹುಟ್ಟಿದ |
| ಹಾವು-ಹಸು ಮುಂತಾದ ಜಾನುವಾರು |

| |
|---|
| ಆಳಿಗಾರ – ವಂಚಕ |
| ಇಪ್ಪಡಿ – ಇಮ್ಮಡಿ |
| ಈರ್ಭಾಗ – ಎರಡು ಭಾಗ |
| ಉದ್ದುಬೇವು ಹಾಕು – ದೃಷ್ಟಿ ನಿವಾಳಿಸು |
| ಉಳುಪು – ಒರಳು |
| ಊರು – ತೊಡೆ |
| ಊರುಜಾತ – ಬ್ರಹ್ಮನ ತೊಡೆಯಿಂದ ಹುಟ್ಟಿದವ, ನಾರದ |
| ಕದಲಾರತಿ – ಕುಂಕುಮದ ನೀರನ್ನು ಹರಿವಾಣದಲ್ಲಿಟ್ಟು ದೃಷ್ಟಿ ತೆಗೆವ ಸಲುವಾಗಿ ಮಾಡುವ ಆರತಿ |
| ಕಡಹ – ಕದಂಬ ವೃಕ್ಷ |
| ಕಣ್ಣಿ - ಹಗ್ಗ |
| ಕ್ರಮುಕ – ಅಡಿಕೆ |
| ಕುಪ್ಪಸ – ಮೇಲಂಗಿ |
| ಕಳ್ಳಿ – ಬತ್ತ (ಕಳವೆ) |
| ಕಂಜಾಕ್ಷಿ – ಭೂದೇವಿ |
| ಕಂಜಸಖಪುತ್ರ – ಸುರ್ಯಪುತ್ರ, ಯಮ |
| ಕುಂಭಿನಿ – ಭೂಮಿ |
| ಕೆಂಚಕ್ಕಿ - ಕೆಂಪು ಅಕ್ಕಿ |
| ಕೆಂಚೆ – ಚೆಲುವೆ |
| ಕೊಳಿಕೆ – ಹಾಲು, ಮೊಸರು ತೂಗುಹಾಗುವ ಸಿಕ್ಕ |
| ಕಾವಡಿ – ಕಂಬಿ |
| ಗಾರುಮಾಡು – ಹಿಂಸೆ ಮಾಡು |
| ಗುಗುರಿ – ಕಡಲೆ, ಹೆಸರು ಮುಂತಾದ ಕಾಳುಗಳಿಂದ ಸಿದ್ಧ ಪಡಿಸಿದ ಉಸಲಿ |
| ಗುಮ್ಮಿ – ಧಾನ್ಯಗಳನ್ನು ತುಂಬಿರುವ ದೊಡ್ಡ ಮಡಕೆ |
| ಗುಳ್ಳೂರಿಗೆ -ಒಂದು ಬಗೆ ಸಿಹಿಭಕ್ಷ್ಯ |
| ಚಟ್ಟು – ಮಣ್ಣ ಕುಡಿಕೆ |
| ಚಿಂತಾಕು – ಕೊರಳ ಆಭರಣ |
| ಚಿತ್ರಚಾವಡಿ – ವೈಕುಂಠ |
| ಚುಮ್ಮಿವಡೆಯು - ಚಿಮ್ಮಲ್ಪಡು |
| ಚೂರ್ಣ – ಹುಡಿ (ಮಣ್ಣಿನ) |
| ಚೊಚ್ಚು – ಮೊದಲ ಬಸಿರು |

| |
|---|
| ಜಂಘೆ – ಕಣಗಾಲು |
| ಜರಿ – ಕುಸಿಯು |
| ತನು -ಸೊಂಪಾದ ಆಹಾರ |
| ತಾಣ ದೀವಿಗೆ – ಸ್ಥಾನ ದೀವಿಗೆ |
| ತಿರುವಿ – ತಿರುಗಿ |
| ತ್ರಿದಂಡಿ – ಸಂನ್ಯಾಸಿ ವೇಷದ ಅರ್ಜುನ |
| ತುದಿಯದು – ಮುಗಿಯದು |
| ಥಂಡ ಥಂಡ – ಬಗೆಬಗೆಯ |
| ದಣಿಯ – ತೃಪ್ತಿಯಾಗುವ |
| ದಂಡಿಸು – ಬಿಟ್ಟುಬಿಡು |
| ದಾಣಿ – ಧಾನ್ಯ |
| ದಾರಿಗೆ – ಅದು ಯಾರಿಗೆ |
| ದಾಳಿ ಹರಿಯು – ಆಕ್ರಮಣಶೀಲತೆ |
| ಧಟ್ಟಿ – ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ |
| ಧನಾಧಿಬತಿ – ಕುಬೇರ |
| ಧೋರ – ತೋರ |
| ನಡು – ಸೊಂಟ |
| ನೀರ ಹೊಳೆಯ ಮಟ್ಟೆ ಪೂಜೆ - ನೀರ ದಂಡೆಯಲ್ಲಿ ಮಾಡುವ ಮೆಟ್ಟಿಲ ಪೂಜೆ |
| ನೀರಗಂಡ – ನೀರಿಂದ ಬರಬಹುದಾದ ಅನಾಹುತ |
| ನೆಗು – ಎತ್ತು |
| ನೆಲುವು – ಪಾತ್ರೆಗಳನ್ನು ಇಡುವುದಕ್ಕ ತೊಲೆಯಿಂದ ಇಳಿಬಿಡುವ ಹಗ್ಗದ ಚಾಳಿಗೆ |
| ಪಂಚಗವ್ಯ – ಹಾಲು, ಮೊಸರು, ತುಪ್ಪ, ಗಂಜಲು ಮತ್ತು ಸೆಗಣಿ ಈ ಐದು ವಸ್ತುಗಳ ಮಿಶ್ರಣ |
| ಪಪ್ಪಳಿ (ಸೀರೆ) – ಚೌಕಳಿ ನಮೂನೆಯಲ್ಲಿ ನೆಯ್ದ ಬಟ್ಟೆ |
| ಪನ್ನಂಗ – ಸರ್ಪ |
| ಪರಿಯಂಕ – ಮಂಚ |
| ಪಾಟಿಮಾಡು – ಲಕ್ಷ್ಯ ಕೊಡು |
| ಪಾಯ್ಬೊಟ್ಟು – ಕಾಲಬೆರಳ ಆಭರಣ |
| ಪಾಲಾಶ – ಮುತ್ತುಗದ ಗಿಡ |
| ಪಾವಕ – ಅಗ್ನಿ |
| ಪೆಂಡ್ಯ – ಕಾಲಂದುಗೆ |

| |
|---|
| ಪೊಂಬಟ್ಟೆ ತುಂಟಾಟ |
| ಪ್ರಾದುರ್ಭೂತ – ಹುಟ್ಟಿದ |
| ಬುಟುವಿ – ಕಣಕದ ರವೆ |
| ಬಟ್ವ ಮುತ್ತು – ವೃತ್ತಾಕರದ ಮುತ್ತು |
| ಬಡಿಗ – ದೇವಶಿಲ್ಪಿ, ವಿಶ್ವಕರ್ಮ |
| ಬಾವಲಿ – ಕಿವಿಯ ಒಂದು ಭಾಗ |
| ಬಿರಿದು ಹೋಗು – ಥಟ್ಟನೆ ಮುನ್ನುಗ್ಗು |
| ಭ್ರಮರಪಕ್ಷಿ – ನವಿಲು |
| ಮಣಕ – ಪ್ರಾಯಕ್ಕೆ ಬರುತ್ತಿರುವ ಎಮ್ಮೆ ಕರು |
| ಮೃತ್ತಿಕೆ - ಮಣ್ಣು |
| ಮೃಗವಾಹನ – ಜಿಂಕೆ ವಾಹನವಾಗಿ ಉಳ್ಳವ , ವಾಯು |
| ಮರಣ ಬಾಗಿಣ – ಮೊರದ ಬಾಗಿನ |
| ಮಿಸುನಿ – ಚಿನ್ನ |
| ಮುಂಚ್ಯ – ಮುಂಚಿತವಾಗಿ ಹೋಗು |
| ಮುಂಜುಡಿಗೆ – ಉಪನಯನ ಸಂಸ್ಕಾರದ ಸಂದರ್ಭದ ಧಿರಸು |
| ಮೆಟ್ಟಿಗೆ – ಮೆಟ್ಟಲು |
| ಮೊರ – ಗೆರಸೆ |
| ಮೊಟ್ಟೆಕಟ್ಟು – ಮೂಟೆ ಕಟ್ಟು |
| ಮೋತಿ- ಕೇದಗೆ ಮುಂತಾದವುಗಳ ತೆನೆ |
| ಯಜ್ಞಕರ್ಮಣ – ಕಪ್ಪಕಾಣಿಕೆ |
| ರಾಜದೂರ್ವಿ – ಒಳ್ಳೆಯ ಜಾತಿಯ ಗರಿಕೆ ಹುಲ್ಲು |
| ವತ್ಸಪೈರು -ಎಳೆಯ ಕರುಗಳ ಸಮೂಹ |
| ವರಳು – ರುಬ್ಬು ಕಲ್ಲು |
| ವೃತ್ತಿ – ಉದ್ಯೋಗ |
| ವಡೋಧ್ವ-ಎಡಮಗ್ಗುಲು |
| ವೃಂದಾ – ವನದ ಕಟ್ಟೆಗೆ |
| ವಾರಿಗ – ಓರಗೆಯ |
| ವಿಗಡ – ಭಯಂಕರ |
| ವೈಜಯಂತಿಮಾಲೆ – ವಿಷ್ಣುವಿಹಾರ |
| ಶಾಲ್ಯನ್ನ - ಉತ್ತಮವಾದ ಅಕ್ಕಿಯಿಂದ ಮಾಡಿದ ಅನ್ನ |

| |
|---|
| ಶಿಲುಕ - ಆಯುಧ? |
| ಶ್ರೀವತ್ಸ – ವಿಷ್ಣುವಿನ ಎದೆಯ ಮೇಲಿನ ಮಚ್ಚೆ |
| ಸಂಕರ್ಷಣ – ಬಲರಾಮ |
| ಸೆಳೆಯಪಟ್ಟು – ಸೆಳೆಯಲ್ಪಟ್ಟು |
| ಹಸ್ತಕೆಲಸ – ಕರಕುಶಲ |
| ಹಂಚಿ – ಒಂದು ಬಗೆಯ ಹುಲ್ಲು |
| ಹರದಿ – ಗರತಿ |
| ಹರವಿ – ಗುಡಾಣ |
| ಹಸಗೆಡು – ರೂಪಕೆಡು |
| ಹೆದಿ – ಹೆದೆ, ಬಿಲ್ಲಿನ ಹಗ್ಗ |
| ಹೊಂತತನ – ಚಾತುರ್ಯ |

## ಪೂರ್ವಕಥೆಗಳು ಮತ್ತು ಟಿಪ್ಪಣಿಗಳು

ಪೂರ್ವಾರ್ಧ –

1.ಈ ಕಾವ್ಯ ದ್ವಿಪದಿಯಲ್ಲಿ ರಚಿತವಾಗಿದ್ದು ಇದರಲ್ಲಿ ಅಂಶ ಛಂದದ ಓಟವನ್ನು ಗುರುತಿಸಬಹುದಾಗಿದೆ. ಬಹುತೇಕ ದ್ವಿಪದಿಗಳಲ್ಲಿ ಬ್ರಹ್ಮಗಣದ ಲಯ ಕಾಣಿಸುತ್ತಿದ್ದು ಎರಡನೆಯ ಸಾಲಿನ ಕೊನೆಯ ಗಣ ವಿಷ್ಣುವಾಗಿರುವುದನ್ನು ಗಮನಿಸಬಹುದು. ಉತ್ಸಾಹಲಯ(3 ಮಾತ್ರೆ)ದಿಂದ ಕೂಡಿ ಭೋಗ ಷಟ್ಪದಿಯ ಆಕೃತಿಯನ್ನು ಇಲ್ಲಿ ಗುರುತಿಸಬಹುದು. ಆದರೆ ಬಹುತೇಕ ದ್ವಿಪದಿಗಳು ಛಂದಸಿನ ನಿಯಮವನ್ನು ಮೀರಿರುವುದು ಹಾಡುವ, ದಾಖಲಿಸುವ ಸಂದರ್ಭದಲ್ಲಾದ ಪರಿಣಾಮವಿರಬೇಕು.

2.ತಾರತಮ್ಯ: ಮಾಧ್ವಮತದ ಪ್ರಮೇಯಗಳಲ್ಲಿ ತಾರತಮ್ಯದ ಕಲ್ಪನೆ ಒಂದು, ಲಕ್ಷ್ಮೀದೇವಿ, ಪ್ರಾಣದೇವರು ಸರಸ್ವತಿಯರಿಂದ ತೊಡಗಿ ದೇವಾನುದೇವತೆಗಳಿಂದ ಮನುಷ್ಯರವರೆಗೂ ಆವರೋಹಣ ಕ್ರಮದಲ್ಲಿ ತರತಮಭಾವವನ್ನು ಹೇಳಿದೆ. ಪರಸ್ಪರ ಭಿನ್ನರೂ ಅನಾದಿಕರ್ಮಬದ್ಧರೂ ಆದ ಚೇತನರಲ್ಲಿ ಈ ರೀತಿಯ ತಾರತಮ್ಯ ಮಾಧ್ವಮತದ ಸಿದ್ಧಾಂತಕ್ಕನುಸರಿಸಿ ಹೇಳಿರುವಂತೆ ಕಾಣುತ್ತದೆ. ಸ್ತೋತ್ರ, ಭಜನೆ, ಕಾವ್ಯನಿರ್ಮಾಣ ಎಲ್ಲದರಲ್ಲೂ ಹರಿದಾಸರು ಈ ಕ್ರಮವನ್ನು ಅನುಸರಿಸುವರು.

3.ನ್ಯಾಯಸುಧೆಯ: ಮಧ್ವಾಚಾರ್ಯರ 'ನ್ಯಾಯಸುಧಾ'ಕ್ಕೆ ವ್ಯಾಖ್ಯಾನ ಮಾಡಿದ ರಾಯ ರಾಮಚಂದ್ರರು ಯಾರೆಂಬುದರ ಬಗ್ಗೆ ಜಿಜ್ಞಾಸೆಯಿದೆ. ರಾಘವೇಂದ್ರ ಮಠದ ಮೂಲಪುರುಷ ವಿಬುಧೇಂದ್ರರಿಗೆ ದೀಕ್ಷೆಯಿತ್ತ ಉತ್ತರಾದಿ ಮಠದ ರಾಮಚಂದ್ರತೀರ್ಥರು ಶ್ರೀರಂಗಪಟ್ಟಣದ ಕಾಶೀನಾಥನಿಗೆ 24 ದಿನ ಸುಧಾ ಬೋಧಿಸಿದರು ಎಂದು ಬಿ.ಎಸ್. ಕಮಲಾಪುರ ಅವರು ಬರೆದಿರುವುದನ್ನು ಡಾ. ಎಚ್ ಜಿ. ಲೇಕೂರ ಅವರು ಉದ್ಧರಿಸುತ್ತಾರೆ (1986-142)

| |
|---|
| 12.ಗೋವು ರೂಪ: ದುಷ್ಟರ ಹಿಂಸೆಯನ್ನು ವಿಷ್ಣುವಿಗೆ ತಿಳಿಸಲು ಹೋಗುತ್ತಿದ್ದ ಭೂಮಿದೇವಿಯು ಗೋರೂಪವನ್ನು ಧರಿಸುತ್ತಿದ್ದಳೆಂದು ಭಾಗವತದಲ್ಲಿ ಹೇಳಿದೆ. |
| 18.ಹಾಸಿಗೆಯಾಗಿರುವ ರಾಜನರು ತಾವು ಪ್ರಯಾಣಕ್ಕೆ ಹೊರಡುವ ಮುನ್ನ ತಮ್ಮ ಹಾಸಿಗೆಯನ್ನು ಆಳುಗಳ ಮೂಲಕ ಕಳುಹಿಸುವರು. ಅದರಂತೆ ಶ್ರೀಮನ್ನಾರಾಯಣನು ತನ್ನ ಹಾಸುಗೆಯಾದ ಶೇಷದೇವರನ್ನು ಮೊದಲೇ ಭೂ ಲೋಕದಲ್ಲಿ ಅವತಾರವೆತ್ತುವಂತೆ ಆಜ್ಞಾಪಿಸುವನು (ರುಕ್ಮಿಣೀಶ ವಿಜಯ 1-26) |
| 22. ವಸುದೇವ ಹುಟ್ಟಿದಾಗ ಈತನ ಮನೆಯಲ್ಲಿ ಮುಂದೆ ಭಗವಂತನು ಅವತಾರವೆತ್ತಲಿರುವುದನ್ನು ತಿಳಿದ ದೇವತೆಗಳು ದುಂದುಭಿಯನ್ನು ಮೊಳಗಿಸಿದ ಕಾರಣ ಅವನಿಗೆ ಅನಕದುಂದುಭಿ ಎಂದು ಹೆಸರು ಬಂತು। |
| 24.ಆಯುಧವನಿಟ್ಟು: ಅದರ ಮೇಲಿಂದ ಅಡ್ಡದಾಟಿಸುವುದು ವ್ಯಕ್ತಿಯೊಬ್ಬನನ್ನು ವಿಶ್ವಸಕ್ಕೆ ತೆಗೆದುಕೊಳ್ಳುವ ಬಗೆ – ಒಂದು ಬಗೆಯ ದಿವ್ಯವೆಂದು ಹೇಳಬಹುದು. |
| 24. ಕಂಸ: ಕಂಸ ಉಗ್ರಸೇನನ ಮಗ, ಇವನು ದ್ರುಮಿಲನೆಂಬ ದಾನವನಿಂದ ಉಗ್ರಸೇನನ ಪತ್ನಿಯಲ್ಲಿ ಹುಟ್ಟಿದವನು. ಉಗ್ರಸೇನನ ರಾಣಿ ತನ್ನನ್ನು ಕೂಡಿದವನು ತನ್ನ ಪತಿಯಲ್ಲವೆಂದು ತಿಳಿದು ಕೋಪದಿಂದ ನಿನ್ನ ದುರ್ಬೀಜದಿಂದ ಹುಟ್ಟಿದವನು ಯದುವಂಶೀಯರಿಂದಲೇ ಸಾಯಲಿ ಎಂದು ಶಾಪವಿತ್ತಳು. ಈ ಶಾಪದ ಫಲವಾಗಿಯೇ ಈತನ ಮರಣವು ಶ್ರೀ ಕೃಷ್ಣನಿಂದಾಯಿತು. |
| 37. ಗಾಂಡೀವ : ಅರ್ಜುನನ ಬಿಲ್ಲು. ಇದರಿಂದಾಗಿ ಅರ್ಜುನನಿಗೆ ಗಾಂಡೀವಿ ಎಂಬ ಹೆಸರು ಬಂದಿತು. |
| 38.ಭಾಮೆ ದೇವಕಿ ದೇವಿ: ದೇವಕನ ಮಗಳು. ಈಕೆ ವಸುದೇವನ ಪತ್ನಿ – ಶ್ರೀ ಕೃಷ್ಣನ ತಾಯಿ. ಈಕೆ ಪೂರ್ವಜನ್ಮದಲ್ಲಿ ಅದಿಪತಿಯಾಗಿದ್ದಳು. |
| 51.ರೋಹಿಣಿಯಲ್ಲಿಟ್ಟಿತು... ರೋಹಿಣಿ ವಸುದೇವನ ಪತ್ನಿ. ಬಲರಾಮ ಈಕೆಯ ಮಗ. |
| 52. ಶೇಷನಾಗಿ ಸಂಕರ್ಷಣವೆಂದೆನಿಸಿ ... ಕದ್ರು ಪುತ್ರನಾದ ನಾಗರಲ್ಲಿ ಒಬ್ಬ. ಈತನನ್ನು ಶ್ರೀಮನ್ನಾರಾಯಣನು ಹಾಸುಗೆಯಾಗಿ ಮಾಡಕೊಂಡಿದ್ದನು. ಬಲರಾಮ ಶೇಷನ ಅವತಾರ. ದೇವಕಿಯ ಏಳನೆಯ ಗರ್ಭದಲ್ಲಿ ಶೇಷ ಅವತರಿಸಬೇಕಾಗಿತ್ತು. ಹರಿಯೋಗ ಮಾಯೆಗಾಜ್ಞಾಪಿಸಿ ಆ ಗರ್ಭವನ್ನು ದೇವಕಿಯಿಂದ ಆಕರ್ಷಿಸಿ ರೋಹಿಣಿಯಲ್ಲಿರಿಸಿ ಇದರಿಂದ ಬಲರಾಮನು ಸಂಕರ್ಷಣ (ಸೆಳೆಯಪಟ್ಟವನು) ಎನಿಸಿದ. |
| 57- ಪೂರ್ವಕಾಲದಲ್ಲಿ ಕಾಲನೇಮಿ... ತಾರಕಾಸುರನ ಮರಣಾನಂತರ ಮೂರು ತಲೆಗಳು ಕಾಲನೇಮಿ ದೇವತೆಗಳನ್ನು ಗೆದ್ದು ಇಂದ್ರಪದವಿಯನ್ನು ಅನುಭವಿಸುತ್ತಿದ್ದ. ಮುಂದೆ ವೈಕುಂಠಕ್ಕೆ ಧಾಳಿಯಿಟ್ಟು ವಿಷ್ಣು ಹಾಗೂ ಗರುಡರನ್ನು ತನ್ನಮಹಾಗದೆಯಿಂದ ಹೊಡೆಯಲು ಪ್ರಯತ್ನಿಸಿದಾಗ ಹರಿ ತನ್ನ ಚಕ್ರಾಯುಧದಿಂದ ಅವನ ಸಂಹಾರ ಮಾಡಿದ. |

| |
|---|
| 65.ಶುಕ್ಲ ಶೋಣಿತ ಸಂಬಂಧ... ತಾನು ಎಲ್ಲ ಮಾನವ ಶಿಶುವಿನಂತೆ ಹುಟ್ಟಿಲ್ಲ ಎನ್ನುವುದನ್ನು ತಿಳಿಸುವ ಸಲುವಾಗಿ ಕೃಷ್ಣನು ಶಂಖ,ಚಕ್ರ, ಚತುರ್ಭುಜಗಳಿಂದಲೇ ಅವತರಿಸಿರಬೇಕು (ನೋಡಿ ವಾದರಾಜರ ರುಗ್ಮಿಣೀಶ ವಿಜಯ 1-45-55) |
| 72. ಶಿಶುಪಾಲ ವೈರಿ ನೀನೆ... ಯದುಂಶದ ರಾಜರಲ್ಲಿ ಒಬ್ಬನು. ಈತನ ತಾಯಿ ಕೃಷ್ಣನ ಸೋದರತ್ತೆಯಾದ ಶ್ರುತಶ್ರವ. ಶಿಶುಪಾಲನು ಶಿಶುವಾಗಿದ್ದಾಗ ಶ್ರೀ ಕೃಷ್ಣನು ತನ್ನ ಸೋದರತ್ತೆಯ ಮನೆಗ ಹೋಗಿ ಶಿಶುವನ್ನು ಎತ್ತಿಕೊಂಡಾಗ ಆದನಲ್ಲಿದ್ದ ಹೆಚ್ಚಿನ ಎರಡು ಕೈಗಳು ಬಿದ್ದು ಹೋದವು। ಇದಿರಿಂದ ತನ್ನ ಮಗನಿಗೆ ಕೃಷ್ಣನಿಂದಲೇ ಸಾವು ಬರಬಹುದೆಂದು ತಿಳಿದು ತನ್ನ ಮಗನನ್ನು ಉಳಿಸಿಕೊಡಬೇಕಾಗಿ ಪ್ರಾರ್ಥಿಸಿಕೊಂಡಳು. ಆಗ ಕೃಷ್ಣನು ಶಿಶುಪಾಲನ ನೂರು ಅಪರಾಧಗಳನ್ನು ಮನ್ನಿಸುವುದಾಗಿ ಆಶ್ವಾಸನೆ ನೀಡಿದನು. ಮುಂದೆ ಪಾಂಡವರು ರಾಜಸೂಯಯಾಗದ ಸಂದರ್ಭದಲ್ಲಿ ಅಗ್ರಪೂಜೆಯ ಸಂಬಂಧವಾಗಿ ಕೃಷ್ಣನನ್ನು ಹಳಿದಾಗ ಕೃಷ್ಣನಿಂದ ಆತ ಹತನಾದನು |
| 75.ಕೌಸ್ತುಬ ಹಾರ... ಶ್ರೀಮನ್ನಾರಾಯಣನು ಎದೆಯಲ್ಲಿ ಧರಿಸಿದಿ ರತ್ನ. ಇದು ಸಮುದ್ರಮಂಥನಕಾಲದಲ್ಲಿ ಉದಿಸಿಬಂತು ಎನ್ನಲಾಗಿದೆ. |
| 81. ಹಿಂದಿನಾ ತಪಕ್ಕೆ ಮೆಚ್ಚ ಬಂದೆನೆಂದನು... ಸ್ವಾಯಂಭು ಮನ್ವಂತರದಲ್ಲಿ ಪೃಶ್ನಿ ಹಾಗು ಆಕೆಯ ಪತಿ ಸುತಪ ಹನ್ನೆರಡು ಸಾವಿರ ವರ್ಷ ತಪಸ್ಸನ್ನಾಚರಿಸಿದಾಗ ವಿಷ್ಣು ಪ್ರಸನ್ನನಾಗಿ ಮೂರು ಜನ್ಮಗಳಲ್ಲಿ ನಿನ್ನ ಗರ್ಭದಲ್ಲಿ ಮಗನಾಗಿ ಹುಟ್ಟಿಬರುವುದಾಗಿ ವರವನ್ನು ನೀಡಿದನು. |
| ಮೊದಲಿಗೆ ಪೃಶ್ನಿಗರ್ಭನೆಂಬ ಹೆಸರಿಂದಲೂ, ಎರಡನೇ ಜನ್ಮದಲ್ಲಿ ಅದಿತಿಕಶ್ಯಪರ ಸುತ ವಾಮನನನಾಗಿಯೂ. ಮೂರನೆಯ ಜನ್ಮದಲ್ಲಿ ದೇವಕಿ ವಸುದೇವರಲ್ಲಿ ಕೃಷ್ಣನಾಗಿಯೂ ಜನಿಸಿದನು. |
| 88. ಪೃಶ್ನಿಜನ್ಮದಲ್ಲಿ... ನೋಡಿ ಪ.81. |
| ಅದಿತಿ ಕಶ್ಯಪರಲ್ಲಿ ವಾಮನರಾಗಿ... ಕಶ್ಯಪ ಮರೀಚಿ ಮುನಿಯ ಮಗು ಈತನಿಗೆ ದಿತಿ, ಅದಿತಿ ಮುಂತಾದ ಹದಿಮೂರು ಮಂದಿ ಪತ್ನಿಯರು. ವರುಣನ ಗೋವುಗಳನ್ನು ಇವನು ಎರವಲು ತಂದು ಇಬ್ಬರು ಪತ್ನಿಯರ ಮಾತು ಕೇಳಿ ಹಿಂದೆ ಕೊಡದುದರಿಂದ ವರುಣನ ಶಾಪಕ್ಕೆ ಗುರಿಯಾಗಿ ವಸುದೇವ ದೇವಕಿ ಮತ್ತು ರೋಹಿಣಿಯರಾಗಿ ದ್ವಾಪರ ಯುಗದಲ್ಲಿ ಜನ್ಮವೆತ್ತಿದರು. ಹಸುಗಳನ್ನು ನಿರ್ಬಂಧಿಸಿದ ಸಲುವಾಗಿ ವಸುದೇವನಿಗೆ ಕಾರಾಗೃಹ ವಾಸವಾಯಿತು. ಅದಿತಿ, ದಿತಿಯ ಮಕ್ಕಳನ್ನು ಸಂಹರಿಸಿ ತನನ ಮಕ್ಕಳೂ ಹುಟ್ಟಿದೊಡನೆ ಸಾಯುವಂತೆ ಶಾಪ ಪಡೆದಳು. |
| 97. ಕಾಳಿಂದಿಯ ತೀರದಲ್ಲಿ ನಂದಗೋಪನ ಪಳ್ಳಿ... ಕಾಳಿಯ ಸರ್ಪನು ವಾಸವಾಗಿದ್ದ ಯಮುನಾ ನದಿಯ ಮಡು. ಗರುಡನು ಋಷಿ ಶಾಪದಿಂದಾಗ ಇಲ್ಲಿಗೆ ಬಾರದೆ ಇರುವುದರಿಂದ ಕಾಳಿಯ ಸರ್ಪನು ಕಾಳಿಂದಿ ಮಡುವಿನಲ್ಲಿ ವಾಸವಾಗಿದ್ದ. ಗೋಕುಲ ನಂದಗೋಪನ ವಾಸಸ್ಥಾನ. |
| 116. ಇತ್ತ ಗೋಕುಲದೊಳಗೆ... ಮಧುರೆಗೆ ಸಮೀಪದ ಹಳ್ಳಿ ಗೋಕುಲ. |

| | |
|---|---|
| 122. ಮಧು ಎಂಬ ದೈತ್ಯನ... ಮಧು ಮತ್ತು ಕೈಟಬರು ಸಹೋದರರು. ವಿಷ್ಣುವಿನ ಕಿವಿಯ ಕೆಸರಿಂದ ಹುಟ್ಟಿದವರು. ಇವರ ಪೀಡೆಯಿಂದ ನೊಂದ ಬ್ರಹ್ಮ ಹರಿಯ ನಾಭಿಕಮಲದೊಳಗೆ ಸೇರಿದನು. ಇವರೊಡನೆ ವಿಷ್ಣು ಯುದ್ಧಮಾಡಿ ಸೋಲಿಸಿ ಸಾಯಿಸಿದನು. | |
| 126. ಮತ್ಸ್ಯಗೆ ಕೂರ್ಮಗೆ ವರಾಹಗೆ ನರಹರಿಗೆ ವಾಮನ ಭಾರ್ಗವನೆ... ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಮೊದಲನೆಯದು ಮತ್ಸ್ಯಾವತಾರ ಸೋಮಕನೆಂಬ ರಾಕ್ಷಸನು ವೇದಗಳನ್ನು ಅಪಹರಿಸಲು ವಿಷ್ಣುವು ಮತ್ಸ್ಯಾವತಾರವನ್ನೆತ್ತಿ ಆ ರಕ್ಕಸನನ್ನು ಕೊಂದು ವೇದವನ್ನುದ್ಧರಿಸಿದನು. ಶ್ರೀಮನ್ನಾರಾಯಣನ ಎರಡನೆ ಅವತಾರ ಕೂರ್ಮಾವತಾರ. ಸಮುದ್ರಮಥನ ಕಾಲದಲ್ಲಿ ದೇವತೆಗಳ ಪ್ರಾರ್ಥನೆಯಂತೆ ಮಂದರ ಪರ್ವತವನ್ನು ಸಮುದ್ರದಲ್ಲಿ ಮುಳಗದಂತ ಕೂರ್ಮನಾಗಿ ಹರಿಯು ಎತ್ತಿಹಿಡಿದ. | |
| ಶ್ರೀಮನ್ನಾರಯಾಣನ ಮೂರನೆಯ ಅವತಾರ ವರಾಹಾವತಾರ. ಹಿರಣ್ಯಾಕ್ಷನು ತನ್ನ ಮಹಾಗದೆಯನ್ನು ತೂಗುತ್ತಾ ರಸಾತಲದಲ್ಲಿದ್ದುಕೊಂಡು ಭುವನೋದ್ಧರಣವನ್ನು ಮಾಡಿತ್ತಿರುವ ವರಾಹನೇ ಮಹಾವಿಷ್ಣುವೆಂದು ತಿಳಿದು ಅವನನ್ನು ಯುದ್ಧಕ್ಕೆ ಕರೆಯಲು ಎಡಗಾಲಿನಿಂದ ಅವನು ರಕ್ಕಸನ ಮಹಾಗದೆಯನ್ನು ತುಂಡರಿಸಿ ಅವನ್ನು ಸಂಹರಿಸಿದನು. ನರಹರಿ ಶ್ರೀ ಹರಿಯ ನಾಲ್ಕನೆಯ ಅವತಾರ. ಪ್ರಹ್ಲಾದನ ಮೊರೆಯನ್ನು ಕೇಳಿ ವಿಷ್ಣುವು ಕಂಬದಿಂದ ಅವತರಿಸಿ ಹಿರಣ್ಯಕಶಿಪುವನ್ನು ವಧಿಸಿದನು. | |
| 127. ರಾಮಗೆ ಕೃಷ್ಣಗೆ ಬುದ್ಧಗೆ ಕಲ್ಕಿಗೆ... ಇವು ವಿಷ್ಣುವಿನ ವಿವಿಧ ಅವತಾರಗಳು. | |
| 128. ಶಂಬರಾರಿಪಿತನು... ಶಂಬರಾಸುರ ಮಾಯಾವಿ ದೈತ್ಯ. ಈತನ ವಧೆ ಶ್ರೀಕೃಷ್ಣನ ಪುತ್ರ ಪ್ರದ್ಯುಮ್ನನಿಂದಾಯಿತು. | |
| 142. ಮೂರು ದಿನಗಳ ಕೊಯ್ಲು...'ದೇವರ ಕೊಯ್ಲು' ಉತ್ತರ ಕರ್ನಾಟಕದ ಒಂದು ವಿಶಿಷ್ಟ ಆಚರಣೆ. ಮಗು ಹುಟ್ಟಿದೊಡನೆ ಹೊಕ್ಕುಳ ಹರಿಯನ್ನು ಕೊಯ್ಯಲಾಗುತ್ತದೆ. ಉಳಿದ ಭಾಗ 5-6 ದಿನಗಳಲ್ಲಿ ಉದುರುತ್ತದೆ ಹಾಗೆ ಉದುರಿದ ಹೊಕ್ಲುಳ ಬಳ್ಳಿಯ ತುಂಡನ್ನು ಹಾಗು ಕೊಯ್ದ ಆಯುಧವನ್ನು ಬಾಣಂತಿಯ ಹತನ್ತನೆಯ ದಿನದಂದು ಪೂಜಿಸುವ ಸಂಪ್ರದಾಯವಿದೆ. ಈ ಪೂಜೆಗೆ ನೆನೆಹಾಕಿದ ಕಡಲೆ, ವೀಳ್ಯದೆಲೆ ಹಾಗೂ ಅಡಿಕೆಯನ್ನು ಬಳಸಲಾಗುತ್ತದೆ. ಆಯುಧಕ್ಕೆ ಶಾಂತಿ ತಾಯಿ ಮಗುವಿನ ಗಾಢ ನಂಟಿಗೆ ಕೃತಜ್ಞತೆಯನ್ನು ಸೂಚಿಸುವ ಸಲುವಾಗಿ ಈ ಪೂಜೆ ನಡೆಸಲಾಗುತ್ತದೆ. ಈ ಒಣಗಿದ ಹೊಕ್ಕುಳ ಬಳ್ಳಿಯ ತುಂಡನ್ನು ಮಗುವಿನ ಸೊಂಟದಲ್ಲಿ ಕೈಯಲ್ಲಿ ದಾರದಿಂದ ಕಟ್ಟಲಾಗುತ್ತದೆ. ಇಲ್ಲಿ ಕೃಷ್ಣನಿಗೆ ಸಂಬಂಧಿಸಿದ್ದು ದೇವರ ಕೊಯ್ಲು – ಕೊಯ್ಲು ಪೂಜೆ. | |
| 149.ಪೂತನಿಯ ಪರೆಯ ಕಳುಹಿ... ಕಂಸನ ಪರಿಹಾರಕ್ಕೆ ಸೇರಿದ ಈಕೆ ಕಂಸನ ಆಜ್ಞೆಯಂತೆ ಗೋಕುಲದ ಶಿಶುಗಳಿಗೆ ಹಾಲುಣಿಸುತ್ತಾ ನಂದಗೋಪನ ಮನೆ ಹೊಕ್ಕು ಬಾಲಕ ಕೃಷ್ಣನಿಗೆ ತನ್ನ ವಿಷಪೂರಿತ ಮೊಲೆಯುಣಿಸಲು ತೊಡಗಿದಾಗ ಶ್ರೀ ಹರಿರೂಪಿಯಾದ ಕೃಷ್ಣನು ಆಕೆಯ ಜೀವವನ್ನು ಹೀರಿದನು. ಪೂತನಿಯ ಭಯಂಕರ ರಾಕ್ಷಸಿಯ ಆಕಾರದಿಂದ ಪ್ರಾಣಬಿಟ್ಟಳು. | |

162. ಪೂತನಿಯ ಸುಡುತಿರಲು... ಶ್ರೀ ಕೃಷ್ಣನಿಗೆ ಹಾಲುಣಿಸಿದ ಪುಣ್ಯ ಪ್ರಭಾವದಿಂದ ಅವನ ಅಂಗಸಂಗದಿಂದಾಗಿ ದೇಹವನ್ನು ದಹಿಸಿದಾಗ ಆಕೆಯ ದೇಹದಿಂದ ದಿವ್ಯವಾದ ಜಾಜಿ ಹೂವಿನ ಸುವಾಸನೆ ಹೊರಹೊಮ್ಮಿತು (ಭಾಗವತ ದಶಮಸ್ಕಂಧ) ಶಂಶುಪಾ ವೃಕ್ಷದ ಸುವಾಸನೆ ಹೊರಹೊಮ್ಮಿತು ಎನ್ನುವ ಪಾಠ ಭೇದವೂ ಇದೆ.

167.ಯಶೋದೆಗೆ ಮೊದಲೆ ಎರೆದರು...ಗೋಕುಲದ ಒಡೆಯನಾದ ನಂದನ ಹೆಂಡತಿ. ಶ್ರೀಕೃಷ್ಣನ ಸಾಕುತಾಯಿ.

168. ಯಶೋದೆ ರೋಹಿಣಿ ಬಂದು ಕುಳಿತರು...ವಸುದೇವನ ಪತ್ನಿ. ದೇವಕಿ ಈಕೆಯ ಸವತಿ. ಬಲರಾಮ ಈಕೆಯ ಪುತ್ರ.

170 ಗಾರ್ಗ್ಯಕ ಮೊದಲಾದ...ಯಾದವರ ಪುರೋಹಿತ ಕಾಲ ಯವನ ಇವನ ತಂದೆ.

201.ವಿಶ್ವಕರ್ಮ...ಅಷ್ಟವಸುಗಳಲ್ಲಿ ಒಬ್ಬನಾದ ಪ್ರಭಾಸ ಮತ್ತು ಬೃಹಸ್ಪತಿಯ ತಂಗಿಯಾದ ಯೋಗಸಿದ್ಧಿಯ ಮಗ ಈತ. ವಿರೋಚನೆ ಈತನ ಪತ್ನಿ. ಮಗ ವಿಶ್ವರೂಪಾಚಾರ್ಯ. ಇವನು ಇಂದ್ರಪ್ರಸ್ಥವನ್ನು ನಿರ್ಮಾಣಮಾಡಿದನು. ಸುಂದೋಪಸುಂದರ ನಾಶಕ್ಕಾತಿ ತಿಲೋತ್ತಮೆಯನ್ನು ಸೃಷ್ಟಿಮಾಡಿದನು. ತ್ರಿಪುರಾಸುರನ ವಧೆಗಾಗಿ ಶಿವನಿಗೆ ರಥವನ್ನು ನಿರ್ಮಾಣಮಾಡಿಕೊಟ್ಟನು. ಕೃಷ್ಣ ಜನ್ಮೋತ್ಸವದ ಸಂದರ್ಭದಲ್ಲಿ ಆತನಿಗಾಗಿ ತೊಟ್ಟಿಲು ನಿರ್ಮಿಸಿದವನು ಇವನೇಯ.

210.ಮಂದರೋದ್ಧರ ಹರಿಯ...ದೇವತೆಗಳು-ದೈತ್ಯರು ಒಟ್ಟಾಗಿ ಸಮುದ್ರಮಥನ ಮಾಡಿದ ಸಂದರ್ಭದಲ್ಲಿ ಮಂದರ ಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡರು. ಈ ಮಥನವನ್ನು ಮಾಡುವಲ್ಲಿ ವಿಷ್ಣುವಿನ ನೇತೃತ್ವ. ಆದುದರಿಂದ ಆತನಿಗೆ ಮಂದರೋದ್ಧರ ಹರಿ ಎನ್ನಲಾಗುತ್ತದೆ.

252. ಹೊಸ್ತಿಲೊಳಗೆ ಗಂಡನ್ಹೆಸರ ಹೇಳು ಎಂದರು...ಉತ್ತರ ಕರ್ನಾಟಕ ಪ್ರದೇಶದಲ್ಲಿ ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಬಳಕೆಯಲ್ಲಿರುವ ಒಡಪು ಹೇಳುವ ವಿವರಗಳನ್ನು ಈ ಕಾವ್ಯದಲ್ಲಿ ದಾಖಲಿಸಲಾಗಿದೆ. ಮದುವೆಯ ವಿಧಿ ಆಚರಣಯೆ ಸಂದರ್ಭದಲ್ಲಿ ಗಂಡಾದರೆ ತನ್ನ ಭಾವೀ ಪತ್ನಿಯ ಹೆಸರನ್ನು ಹೆಣ್ಣಾದರೆ ತನ್ನ ಭಾವೀಗಂಡನ ಹೆಸರನ್ನು ಒಡಪುನೊಂದಿಕೆ ಸೇರಿಸಿ ಹೇಳಬೇಕು. ಈ ಕಾವ್ಯದಲ್ಲಿ ಶ್ರೀ ಕೃಷ್ಣನ ನಾಮಕರಣದ ಸಂದರ್ಭದಲ್ಲಿ ಊರ ಮುತ್ತೈದೆ ಹೆಂಗಸರು ಬಂದು ಬಾಲಕೃಷ್ಣನ ತಾಯಿ ದೇವಕಿಯಿಂದ ಒಡಪು ಹೇಳಿಸಿದರಂತೆ.

263. ಆಗ ಕಂಸ ಶಕಟನ ಬೇಗದಿಂದ... ಕಂಸನ ಸೇವಕರಲ್ಲಿ ಒಬ್ಬನು. ಬಂಡಿಯಾಕಾರದಲ್ಲಿ ಗೊಕುಲವನ್ನು ಇವನು ಹೊಕ್ಕು ಶ್ರೀ ಕೃಷ್ಣನ ಮೈಮೇಲೆ ಬೀಳಲು ಅವನು ತನ್ನ ಪುಟ್ಟ ಕಾಲುಗಳಿಂದ ಇವನನ್ನು ಮೆಟ್ಟಿ ಕೊಂದನು.

*280.*ಪಕ್ಷಿವಾಹನನಾಗಿ... ಕಶ್ಯಪಮುನಿಯ ಹಾಗೂ ವಿನತೆಯರ ಪುತ್ರ ಗರುಡ. ಗರುಡನ ಸಾಮರ್ಥ್ಯವನ್ನು ಕಂಡು ವಿಷ್ಣು ಆತನಿಗೆ ಸುಪರ್ಣನೆಂಬ ಹೆಸರನ್ನು ನೀಡಿ ತನ್ನ ವಾಹನವನ್ನಾಗಿಸಿಕೊಂಡನು.

282. ಸುರರಿಗೆ ಸುಧೆಯ ನೀಡಿದ...ಅಮೃತಮಥನದ ವೇಳೆ ಹೊರಬಂದ ಅಮೃತವನ್ನು ಹಂಚುವ ಕಾಲದಲ್ಲಿ ರಾಕ್ಷಸರನ್ನು ವಂಚಿಸಿ ದೇವತೆಗಳಿಗೆ ಮಾತ್ರ ಹಂಚುವ ಸಲುವಾಗಿ ವಿಷ್ಣು ಮೋಹಿನಿಯ ವೇಷ ಧರಿಸಿದ.

285. ಪುತ್ರನೆಂದ ಯಶೋದೆ...ತಾಯಿ ಯಶೋದಾ ದೇವಿ ಬಾಲಕೃಷ್ಣನನ್ನು ತೊಡೆಯ ಮೇಲೆ ಕುಳ್ಳಿರಿಸಿ ಮುದ್ದಿಸಲು ಮಗುವು ಇದ್ದಕ್ಕಿದ್ದಂತೆ ಭಾರವಾಗಿ ಪರ್ವತಗಳ ಸಮೂಹವೇ ತೆಡೆಯಮೇಲೆ ಕುಸಿಯಿತೋ ಎಂಬಂತೆ ಭಾಸವಾಗಿ ಯಶೋದೆ ಸಹಿಸಲಾರದಾದಳು.

360. ನಳಕೂಬರ ಮಣಿಗ್ರೀವರು...ನಳಕೂಬರ, ಮಣಿಗ್ರೀವರು ಕುಬೇರನ ಮಕ್ಕಳು. ಈ ಸಹೋದರರು ಸ್ತ್ರೀಯರೊಂದಿಗೆ ಗಂಗಾನದಿಯಲ್ಲಿ ಜಲಕ್ರೀಡೆಯಾಡುತ್ತಿರಲು ನಾರದ ಮುನಿಗಳು ಬಂದರು. ಅವರನ್ನು ಕಂಡ ಸ್ತ್ರೀಯರು ನಾಚಿಕೆಯಿಂದ ಸೀರೆ ಉಟ್ಟುಕೊಂಡರೆ ಮಧುಮತ್ತರಾದ ಸಹೋದರರು ಜಲಕ್ರೀಡೆಯಲ್ಲೇ ಮಗ್ನರಾದಾಗ ನಾರದರು ಇವರನ್ನು ಕಂಡು ಎರಡು ಮತ್ತಿ ಮರಗಳಾಗಿ ಎಂದು ಶಾಪವನ್ನಿತ್ತರು. ಶ್ರೀ ಕೃಷ್ಣನ ಶರೀರ ಸ್ಪರ್ಶದಿಂದ ಶಾಪವಿಮೋಚನೆಯಾಗುವುದಾಗಿ ವಿಶಾಪವನ್ನು ಪಡೆದರು. ಮುಂದೆ ಅವರಿಬ್ಬರೂ ನಂದಗೋಪನ ಮನೆಯಂಗಳದಲ್ಲಿ ಮತ್ತಿಮರಗಳಾಗಿ ಬೆಳೆದರು. ಶ್ರೀಕೃಷ್ಣನ ತಾಯಿ ಯಶೋದೆ ಮಗನ ತಂಟೆ ಸಹಿಸಲಾರದೆ ಒರಳು ಕಲ್ಲಿಗೆ ಹಗ್ಗ ಹಾಕಿ ಅವನ ಸೊಂಟಕ್ಕೆ ಬಿಗಿದಳು. ಶ್ರೀ ಕೃಷ್ಣನು ಅನ್ನೆಳೆದುಕೊಂಡು ಆ ಮತ್ತಿಮರಗಳೆಡೆಯಿಂದ ಆಚೆಗೆ ನುಸುಳಿದಾಗ ಅತನ ಸ್ಪರ್ಶದಿಂದ ಆ ಮರಗಳೆರಡೂ ಬಿದ್ದು ಈ ಇಬ್ಬರು ಯಕ್ಷರೂ ಶಾಪದಿಂದ ಬಿಡುಗಡೆ ಪಡೆದರು.

370. ಪೂತನಿ ಶಕಟ ತೃಣಾವರ್ತ ಕೇಶಿಯನ್ನೆ... ಶಕಟ ಕಂಸನ ಸೇವಕ ಬಂಡಿಯಾಕಾರದಿಂದ ಗೋಕುಲವನ್ನು ಹೊಕ್ಕು ಶ್ರೀ ಕೃಷ್ಣನ ಮೇಲೆ ಬೀಳಲು ಅವನು ತನ್ನ ಪುಟ್ಟ ಕಾಲುಗಳಿಂದ ಇವನನ್ನು ತುಳಿದು ಕೊಂದನು.

ತೃಣಾವರ್ತ... ಶ್ರೀ ಕೃಷ್ಣನನ್ನು ಕೊಲ್ಲುವಂತೆ ಕಂಸಾಸುರನಿಂದ ಪ್ರೇರಿತನಾದವನು ತೃಣಾವರ್ತ. ಯಶೋದೆಯು ಮಗುವನ್ನು ಮಲಗಿಸಿ ತನ್ನ ಕೆಲಸ ಕಾರ್ಯಗಳಿಗೆ ಹೋದಾಗ ಈ ರಕ್ಕಸನು ಸುಳಿಗಾಳಿಯ ರೂಪದಲ್ಲಿ ಬಂದು ಮಗುವನ್ನು ತರಗೆಲೆಯಂತೆ ಹಾರಿಸಿಕೊಂಡು ಹೋದನು. ಕೊನೆಕೊನೆಗೆ ಶ್ರೀ ಕೃಷ್ಣನ ಭಾರವನ್ನು ತಡೆಯಲಾರದೆ ಮಗುವನ್ನು ಕೆಳಕ್ಕೆ ಹಾಕಲು ಪ್ರಯತ್ನಿಸಿದಾಗ ಶ್ರೀ ಕೃಷ್ಣನು ರಾಕ್ಷಸನ್ನು ಕುತ್ತಿಗೆಯನ್ನು ಬಲವಾಗಿ ಹಿಡಿದುಬಿಟ್ಟನು. ಇದರಿಂದ ರಾಕ್ಷಸನ ಉಸಿರು ನಿಂತು ಹೋಗಿ ಮೃತನಾದನು.

ಕೇಶಿ...ಕಂಸನ ದುಷ್ಟಪರಿವಾರದ ರಾಕ್ಷಸರಲ್ಲಿ ಒಬ್ಬನು. ಕುದುರೆಯಾಕಾರದ ಈತನು ಗೋಕುಲವನ್ನೆಲ್ಲ ಪೀಡಿಸುತ್ತಿರಲು ಶ್ರೀ ಕೃಷ್ಣನು ಈತನನ್ನು ಕೊಂದು ಕೇಶವನೆಂಬ ಹೆಸರನ್ನು ಪಡೆದನು.

312. ಕರುವಿನಂತೆ ಬಂದ ಒಬ್ಬ ಕಳ್ಳ ಅಸುರನು.. ಕಂಸನ ಸೇವಕನಾದ ಧೇನುಕಾಸುರನು ಕತ್ತೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದ. ಇವನು ಬೃಂದಾವನ ಸಮೀಪದ ತಾಳವನದಲ್ಲಿ ವಾಸಮಾಡುತ್ತಿದ್ದನು.

ಗೋಪರು ಶ್ರೀ ಕೃಷ್ಣ ಬಲರಾಮರೊಂದೆಗ ತಾಳೆ ಹಣ್ಣುಗಳನ್ನು ಉದುರಿಸಿ ತಿನ್ನುತ್ತಿದ್ದಾಗ ಕತ್ತೆಯ ರೂಪದಲ್ಲಿ ಬಂದು ಬಲರಾಮನ ಮೇಲೆ ಬಿದ್ದನು. ಬಲರಾಮನು ಅದರ ಹಿಂಗಾಲುಗಳನ್ನು ಹಿಡಿದು ಗರಗರನೆ ತಿರುಗಿಸಿ ತಾಳೆಯ ಮರಕ್ಕೆ ಹೊಡೆದು ಕೊಂದನು.

ಇನ್ನೊಂದು ಪಾಠ ಕೃಷ್ಣನನ್ನು ಕೊಲ್ಲಲೆಂದು ಯಮುನಾ ತೀರದಲ್ಲಿ ದನಗಳ ಮಂದೆಯಲ್ಲಿ ಕರುವಿನ ಆಕಾರದಲ್ಲಿ ಸೇರಿಕೊಂಡ ಇವನನ್ನು ಕೃಷ್ಣ ಅದರ ಬಾಲ ಮತ್ತು ಹಿಂದಿನ ಕಾಲುಗಳನ್ನು ಒಂದಾಗಿ ಗಿರಗಿರನೆ ತಿರುಗಿಸಿದನು.

387.ಪಕ್ಷಿರೂಪವನ್ನು ಧರಿಸಿ...ಶ್ರೀ ಕೃಷ್ಣನು ದನಗಳನ್ನು ಮೇಯಿಸುತ್ತ ಅವುಗಳಿಗೆ ನೀರುಣಿಸಲೆಂದು ಯಮುನಾ ನದಿಯ ಮಡುವಿಗೆ ಬಂದಾಗ ಅಲ್ಲಿ ಬೃಹತ್ ಗಾತ್ರದ ಬಕಪಕ್ಷಿಯು ಗೋಚರಿಸಿತು. ಇವನೇ ಬಕಾಸುರ. ಇವನು ಕೃಷ್ಣನನ್ನು ತನ್ನ ಕೊಕ್ಕಿನಿಂದ ಹಿಡಿದಾಗ ಆತನ ದವಡೆಗಳೆರಡು ಬೆಂಕಿಯಂತೆ ಸುಡಲಾರಂಭಿಸಿತು. ಆಗ ಕೃಷ್ಣನನ್ನು ಕಚ್ಚಿ ಕೊಕ್ಕಿನಿಂದ ಕೊಕ್ಕಿ ಕೊಲ್ಲುವ ಪ್ರಯತ್ನ ನಡೆಸಲು ಕಂಸನ ಸ್ನೇಹಿತನಾದ ಆ ರಾಕ್ಷಸನನ್ನು ಶ್ರೀ ಕೃಷ್ಣನು ಎರಡು ಸೀಳಾಗಿ ಸೀಳಿಬಿಟ್ಟನು.

486. ಕಾಳಿಂಗ ಕಮಲನಾಭನ...ಕಾಳಿಂಗ ಸರ್ಪವು ಗೋಪರ ಗೋವುಗಳಿಗೂ, ಗೋಪರಗಳಿಗು, ಗೋಪರಿಗೂ ತನ್ನ ವಿಷಜ್ವಾಲೆಯಿಂದ ಹಿಂಸಿಸಲು ಅವರ ಪ್ರಾರ್ಥನೆಯಂತೆ ಶ್ರೀ ಕೃಷ್ಣನು ಕಾಳಿಯನನ್ನು ಮರ್ದಿಸಿ ಪಾತಾಳಕ್ಕಟ್ಟಿದನು.

492. ಕಿಚ್ಚಿನ ರೂಪಿನಿಂದ ಬಂದು ಸುತ್ತ...ಕಾಳಿಂಗನ್ನನ್ನು ಅರ ಪರಿವಾರ ಸಮೇತ ರಮಣಕ ದ್ವೀಪಕ್ಕೆ ಕಳುಹಿಸಿದ ಕೃಷ್ಣನು ಯಮುನಾತೀರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಕಾಡ್ಗಿಚ್ಚು ಕಾಣಿಸಿಕೊಂಡಿತು. ಗೋಕುಲದ ಜನರೆಲ್ಲರೂ ಕೃಷ್ಣ, ಬಲರಾಮರನ್ನು ಸ್ತುತಿಸಲು ಶ್ರೀ ಹರಿಯು ದಾವಾಗ್ನಿಯನ್ನು ಪಾನಮಾಡಿದನು.

586.ಇಂದ್ರನಿಂದ ನಿನಗೆ ಕ್ಷೇಮ... ಯಮುನಾ ತೀರದ ಪರ್ವತ ಗೋವರ್ಧನಗಿರಿ. ಗೋಪಾಲಕರ ಗೋವುಗಳಿಗೆ ಹುಲ್ಲನ್ನೊದಗಿಸುವ ಪರ್ವತ. ಇಂದ್ರ ಯಜ್ಞವನ್ನು ತಪ್ಪಿಸಿ ಗೋವರ್ದನ ಯಜ್ಞವನ್ನು ಹವಣಿಸಿದ ಶ್ರೀ ಕೃಷ್ಣನು ಈ ಪರ್ತವನ್ನೇ ಎತ್ತಿ ಹಿಡಿದು ಮಳೆಯಿಂದ ಗೋವಳರನ್ನು ರಕ್ಷಿಸಿದನು.

674. ಕಾಡದೆ ನಮ್ಮ ಕೂಡೆ ಕರುಣಿಸಿ ರಾಸಕ್ರೀಡೆ... ತನ್ನಲಿ ಮಾಡಿದ ಭಕ್ತಿಯಿಂದ ಪ್ರಸನ್ನನಾದ ಭಗವಂತ ಯಾವ ಪ್ರಕಾರವೇ ಭಕ್ತನ ಆನಂದಾನುಭವಕ್ಕೆ ಕಾರಣ ಹೊರತು ಬೇರಾವುದೋ ಕಾರಣವಲ್ಲವೆಂದು ಕಾಣಿಸಲು ಆ ಭಗವಂತನು ಗೋಪಿಯರೊಡನೆ ರಾಸಕ್ರೀಡೆಯಾಡಲು ಸಂಕಲ್ಪಿಸುತ್ತಾನೆ (ಶ್ರೀ ಹರಿಕಥಾಮೃತ ಸಿಂಧು ಶ್ರೀ ಅಚ್ಯುತದಾಸ) ಸಮತಲವಾದ ಹುಲ್ಲಿಲದಿರುವ ಸ್ಥಳದ ಮಧ್ಯೆ ಗೇಣುದ್ದದ ಒಂದು ಗೂಟವನ್ನ ಸ್ಥಾಪಿಸಿ ಅದರ ಸುತ್ತಲೂ ಎಲ್ಲರೂ ಕಾಲನ್ನೂರಿ ವೃತ್ತಾಕಾರವಾಗಿ ನಿಂತು ಒಬ್ಬಳ ಎಡಕೈಯನ್ನು ಹತ್ತಿರವಿರುವ ಇನ್ನೊಬ್ಬರ ಬಲದ ಕೈಯಿಂದ ಹಿಡಿದುಕೊಂಡು ತಮ್ಮ ಶಕ್ತಿಗನುಗುಣವಾಗಿ ಚಕ್ರದಂತೆ ವರ್ತುಲಾಕಾರವಾಗಿ ಸುತ್ತುವ ಕ್ರೀಡೆಗೆ ರಾಸಕ್ರೀಡೆ ಎಂದು ಹೆಸರು. (ಅದೇ ಅಚ್ಯುತದಾಸ)

712. ಆತನ ಮಂತ್ರಿಗಳು ಬೇಗ ಅಕ್ರೂರನ ಕರೆಸಿದರೆ... ಅಕ್ರೂರನು ವೃಷ್ಣಿಪುತ್ರನಾದ ಶ್ವಫಲ್ಕನ ಮಗ. ಇವನ ತಾಯಿ ಗಾಂಧಿನಿಯು ಕಾಳಿದೇಶದ ರಾಜನ ಮಗಳು. ಅಕ್ರೂರ ದಾನಶೀಲನೆಂದೇ ಹೆಸರು ಪಡೆದಿದ್ದ. ಹರಿಭಕ್ತ. ಕ್ರೂರಿಯಾದ ಕಂಸ ಬಿಲ್ಲಹಬ್ಬದ ನೆಪದಲ್ಲಿ ಬಲರಾಮ ಕೃಷ್ಣರನ್ನು ಕರೆಸಿ ಕೊಲ್ಲಿಸಬೇಕೆಂದು ಆಲೋಚಿಸಿದ. ಅಕ್ರೂರನನ್ನು ಆ ಕೆಲಸಕ್ಕೆ ನಿಯೋಜಿಸಿದ. ಅಂತೆಯೇ ರಾಮಕೃಷ್ಣರನ್ನು ಮಧುರೆಗೆ ಕರೆದುಕೊಂಡ ಹೋಗುವಾಗ ಯಮುನಾ ತೀರದಲ್ಲಿ ಶ್ರೀ ಕೃಷ್ಣನು ಇವನಿಗೆ ತನ್ನ ದಿವ್ಯರೂಪವನ್ನು ತೋರಿಸಿದ.

798. ರಾಯನ್ನೊದಿವ ಹೊದಿಕೆಯನ್ನು ರಜಕನಾನೆಯ ಮೇಲೆ...ಕಂಸನ ಭೃತ್ಯನಾದ ಅಗಸನು ರಾಜಬೀದಿಯಲ್ಲಿ ಉದ್ಧಟನಂತೆ ವರ್ತಿಸುತ್ತಾ ಬರುತ್ತಿರಲು ಎದುರಾದ ಕೃಷ್ಣ ಬಲರಾಮರು ನಮಗೆ ಉಡಲು ತೊಡಲು ಯೋಗ್ಯವಾದ ಎರಡೆರಡು ವಸ್ತ್ರಗಳನ್ನು ಕೊಡು, ಇಲ್ಲವಾದರೆ ಎದುರಾಗಬಹುದಾದ ದುರಂತಕ್ಕೆ ನೀನೆ ಹೊಣೆಗಾರ ಎಂದು ಹೇಳುತ್ತಾನೆ. ಇದಕ್ಕೆ ಒಪ್ಪದ ಅಗಸನ ಶಿರವನ್ನು ಕೃಷ್ಣ ಕತ್ತರಿಸಿ ಅಲ್ಲಿರುವ ರತ್ನ ಖಚಿತ ರೇಷ್ಮೆಯ ಉಡುಪು ತೊಡುಪುಗಳನ್ನು ತರಿಸಿ ಸಹೋದರರು ಉಟ್ಟುಕೊಂಡರು.

809. ಗಾಜಿನ ಬಟ್ಟಲಲ್ಲಿ ಗಂಧವನ್ನು ತೆಗೆದುಕೊಂಡು... ಕುಬ್ಜೆ ಕಂಸನ ಅಂತಃಪುರದ ದಾಸಿ. ಬಲರಾಮ ಕೃಷ್ಣರು ಕಂಸನ ಆಮಂತ್ರಣದಂತೆ ಬಿಲ್ಲ ಹಬ್ಬಕ್ಕಾಗಿ ಮಥುರಾ ಪಟ್ಟಣಕ್ಕೆ ಬರಲು, ಆಕೆ ಮಾರ್ಗಮಧ್ಯದಲ್ಲಿ ಬಟ್ಟಲನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಬಲರಾಮ ಕೃಷ್ಣರು ಆ ಗಂಧದ ಬಟ್ಟಲನ್ನು ಆಕೆಯಿಂದ ಪಡೆದು ಆಕೆಯ ಗೂನು ಬೆನ್ನನ್ನು ಹೋಗಲಾಡಿಸುವುದಕ್ಕಾಗಿ ಆಕೆಯ ಪಾದವನ್ನು ಮೆಟ್ಟಿ ಗದ್ದ ಹಿಡಿದು ಮೇಲಕ್ಕೆತ್ತಲು ಆಕೆಯ ದೇಹದ ಡೊಂಕುಗಳು ಹೋಗಿ ನೇರವಾದವು.

860. ಮುಷ್ಟಿಕ ಚಾಣೂರರೆಂಬ ಜಟ್ಟಿಗಳು...ಮುಷ್ಟಿಕ ಕಂಸನ ಆಸ್ಥಾನದಲ್ಲಿದ್ದ ಜಟ್ಟಿ. ಬಿಲ್ಲಹಬ್ಬಕ್ಕೆಂದು ಮಥುರೆಗೆ ಹೋದ ಶ್ರೀಕೃಷ್ಣನಿಂದ ಇವನು ಹತನಾದನು. ಚಾಣೂರನು ಕಂಸನ ಸೇವಕ ಒಬ್ಬ ಜಟ್ಟಿ. ಬಿಲ್ಲಹಬ್ಬಕ್ಕೆಂದು ಬಂದ ಶ್ರೀ ಕೃಷ್ಣನಿಂದ ಹತನಾದ.

881. ಕೃಷ್ಣ ಉಗ್ರಸೇನರಾಯಗೆ ಪಟ್ಟವ ಕಟ್ಟಿದ... ಕಂಸನ ತಂದೆ ಇವನನ್ನು ಭೋಜರಾಜನೆಂದು ಕರೆಯುತ್ತಾರೆ. ಕಂಸನ ಮರಣಾನಂತರ ಈತನಿಗೆ ರಾಜ್ಯಾಭಿಷೇಕವನ್ನು ಕೃಷ್ಣನು ಮಾಡಿಸಿದನು.

ಉತ್ತರಾರ್ಧ:

5. ಅಂದು ಸಾಂದೀಪನನಲ್ಲಿ ಗಂಭೀರದ್ವಾಕ್ಯವ... ಸಾಂದೀಪನಿ ಶ್ರೀ ಕೃಷ್ಣ ಬಲರಾಮರ ವಿದ್ಯಾಗುರುಗಳು. ಒಮ್ಮೆ ಸಾಂದೀಪನಿ ತನ್ನ ಪತ್ನೀ ಪುತ್ರರೊಂದಿಗೆ ಪ್ರಭಾಸಕ್ಷೇತ್ರಕ್ಕೆ ಹೋದಾಗ ಈತನ ಮಗನನ್ನು ಪ್ರಹ್ಲಾದನ ತಮ್ಮ ಸಂಹ್ಲಾದನ ಮಗನಾದ ಪಂಚಜನನು ಎತ್ತಿಕೊಂಡು ಸಮುದ್ರವನ್ನು ಪ್ರವೇಶಿಸಿದನು. ಇತ್ತ ಶ್ರೀಕೃಷ್ಣನು ಗುರು ಸಾಂದೀಪಿನಿಯಲ್ಲಿ ವಿದ್ಯಾಭ್ಯಾಸ ಮಾಡಿ ಕೊನೆಯಲ್ಲಿ ಗುರುದಕ್ಷಿಣೆ ಕೇಳುವಂತೆ ಗುರುಗಳಲ್ಲಿ ವಿನಂತಿಸಿಕೊಂಡ ಗುರು (ಗುರುಪತ್ನಿ) ಮೃತಪುತ್ರನನ್ನು ಯಾಚಿಸಿದನು. ಶ್ರೀ ಕೃಷ್ಣನು ಸಮುದ್ರನಿಂದ ಸೂಚನೆಯನ್ನು ಪಡೆದು ಪಂಚಜನನು ಇರುವ ಸ್ಥಳವನ್ನು ತಿಳಿದು ಸಮುದ್ರವನ್ನು ಹೊಕ್ಕು ಪಂಚಜನನನ್ನು ಕೊಂದನು. ಆದರೆ ಅಲ್ಲಿ ಗುರುಪುತ್ರನನ್ನು ಕಾಣದೆ ಇರಲು ಆ ರಾಕ್ಷಸನ

ಮೂಳೆಯಿಂದ ಪಾಂಚಜನನವೆಂಬ ಶಂಖವನ್ನು ನಿರ್ಮಿಸಿ ಯಮಲೋಕಕ್ಕೆ ಹೋಗಿ ಅಲ್ಲಿದ್ದ ಗುರುಪುತ್ರನ್ನನು ತಂದು ಗುರುವಿಗೊಪ್ಪಿಸಿ ಗುರುದಕ್ಷಣೆ ಸಲ್ಲಿಸಿದನು.

17. ಕೃಷ್ಣ ಉದ್ಧವನ ಕರೆದು...ಯಾದವ ವೀರರಲ್ಲಿ ಒಬ್ಬ. ಶ್ರೀ ಕೃಷ್ಣನ ಮಂತ್ರಿ. ವಸುದೇವನ ತಮ್ಮ ದೇವಭಾಗನ ಮಗ. ಈತನು ಶ್ರೀಕೃಷ್ಣನ ಮಂತ್ರಿ. ಈತನು ಶ್ರೀಕೃಷ್ಣನಿಂದ ಜ್ಞಾನೋಪದೇಶವನ್ನುಪಡೆದು ಆತನ ಭಕ್ತನಾಗಿದ್ದ. ಕೃಷ್ಣನು ಉದ್ಧವನನ್ನು ಕರೆದು ಗೋಕುಲದಲ್ಲಿ ತನ್ನ ತಂದೆತಾಯಂದಿರು ಗೋಪಿಕಾಜನರು ಹೇಗಿದ್ದಾರೆ ಎಂದು ತಿಳಿದು ಬರುವುದಕ್ಕೆ ಹೋಗಿ ಬರುವಂತೆ ಹೇಳಿದ.

32.ಅಸ್ತಿ ಪ್ರಾಸ್ತೇರು ಬಂದು... ಅಸ್ತಿಪ್ರಾಸ್ತಿಯರು ಕಂಸನ ಹೆಂಡಂದಿರು. ಜರಾಸಂಧನ ಮಕ್ಕಳು. ಬಲರಾಮ ಕೃಷ್ಣರು ಕಂಸನನ್ನು ಕೊಂದಾಗ ತನ್ನ ಮಕ್ಕಳಿಗಾದ ವೈಧವ್ಯವನ್ನು ಕಂಡು ಕೋಪದಿಂದ ಕುದಿದು ಇದಕ್ಕೆ ಕಾರಣರಾದ ಯಾದವರನ್ನೂ, ಅವರ ರಾಜಧಾನಿಯಾದ ಮಥುರೆಯನ್ನೂ ನಾಶಮಾಡುವುದಾಗಿ ಇಪ್ಪತ್ತುಮೂರು ಅಕ್ಷೋಹಿಣಿ ಸೇನೆಯೊಂದಿಗೆ ಆಕ್ರಮಿಸಿದನು.

35. ಮಧುರೆಗೊಂದು ಗಾವುದ ಹಡೆದವಳು...ಜರಾಸಂಧನು ತನ್ನಲ್ಲಿದ್ದ ಗದೆಯನ್ನು ಮಥುರೆಯ ಮೇಲೆ ಎಸೆದು ಅಲ್ಲಿನ ನಿವಾಸಿಗಳನ್ನು ನಾಶಮಾಡಲು ಬಯಸಿದ್ದ. ಅದಕ್ಕಾಗಿ ನಾರದನನ್ನು ಕೇಳಿದನಂತೆ. ನೂರೊಂದು ಯೋಜನ ದೂರ ಎಂದು ನಾರ ಹೇಳಿದುದನ್ನು ತಪ್ಪಾಗಿ ನೂರು ಎಂದು ಕೇಳಿಸಿಕೊಂಡು ಜರಾಸಂಧ ತನ್ನ ಗದೆಯನ್ನು ನೂರು ಯೋಜನ ದೂರಕ್ಕೆ ಅಳವಡಿಸಿ ಎಸೆದಾಗ ಅದು ಜರಾಸಂಧನ ತಾಯಿ ಜರೆಯ ಮೇಲೆ ಬಿದ್ದು ಆಕೆ ಸತ್ತು ಹೋದಳು.

43.ಇಬ್ಬರೊಂದಾಗಿ... ವೃದ್ಧಬ್ರಾಹ್ಣ ಕಂಡು... ಕೃಷ್ಣ ಬಲರಾಮರು ಕೊಂಚಕಾಲ ಮಥುರೆಯನ್ನು ತ್ಯಜಿಸಿ ಸಾಮಾನ್ಯರಿಗೆ ಪ್ರವೇಶಿಸಲಾಗದ ದುರ್ಗಮವಾದ ಗೋಮಂತಗಿರಿಗೆ ಹೋಗುವುದಾಗಿ ಹೇಳಿ ಮುನ್ನಡೆಯುತ್ತಿರುವಾಗ ದಾರಿಯಲ್ಲಿ ವೃದ್ಧಬ್ರಾಹ್ಮಣರೂಪದ ಪರಶುರಾಮನನ್ನು ನೋಡಿದರು. ಈ ಗೋಮಂತ ಪರ್ವತಕ್ಕೆ ರೈವತವೆಂದೂ ಹೆಸರಿದೆ.

44. ಒಬ್ಬ ಎಂಬೋದೆ ಸಿದ್ಧ... ಅದ್ವೈತವಾದಿಗಳಿಗೆ ಬಲರಾಮ ಕೃಷ್ಣರು ವಾಸ್ತವವಾಗಿ ಒಬ್ಬರೇ. ಹೊರಗಿನ ಕಣ್ಣಿಗೆ ಬೇರೆಯಾಗಿ ಕಾಣಿಸಿಕೊಂಡಿದ್ದಾರೆ.

48. ಪಂಚವರ್ಣದ ಮುಕುಟ ದುಷ್ಟ ಅಸುರ... ಒಮ್ಮೆ ಶ್ರೀ ಕೃಷ್ಣನ ತಲೆಯ ಮೇಲೆ ಕಿರೀಟವೊಂದು ಬಂದು ಶೋಭಿಸಿತು. ಅದನ್ನು ಬಲಿಚಕ್ರವರ್ತಿ ಕೃಷ್ಣನು ಯೋಗನಿದ್ರೆಯಲ್ಲಿದ್ದಾಗ ಅಪಹರಿಸಿದನು. ಇದನ್ನು ತಿಳಿದ ಗರುಡನು ಬಲಿಯೊಡನೆ ಹೋರಾಟ ಮಾಡಿ ಗೆದ್ದು ಆ ಕಿರೀಟವನ್ನು ಕೃಷ್ಣನ ತಲೆಯ ಮೇಲೆ ತಂದಿರಿಸಿ ಅವನೇ ನಾರಾಯಣನೆಂಬುದಾಗಿ ತಿಳಿದು ಸ್ತೋತ್ರ ಮಾಡಿದ.

55. ಕರವೀರಪುರಕೆ ಬಂದು...ಶೃಗಾಲವಾಸುದೇವ ಕರವೀರ ಪುರದ ರಾಜ. ವಸುದೇವನಿಗೆ ದೈತ್ಯಸ್ತ್ರೀಯೊಬ್ಬಳಿಂದ ಹುಟ್ಟಿದವನು ಅವನು. ಶೃಗಾಲ ತನ್ನ ಹೆಸರಿನ ಜತೆಗೆ ವಾಸುದೇವ ಪದವನ್ನೂ ಸೇರಿಸಿಕೊಂಡ. ತಂದೆ ವಸುದೇವ ಶೃಗಾಲ ಮದುವಿದ್ದಾಗಲೇ ಹೆಂಡತಿಯನ್ನು ತವರು ಮನೆಯಲ್ಲಿ ಬಿಟ್ಟು ಮಥುರೆಗೆ ಹಿಂದಿರುಗುತ್ತಾನೆ. ಶೃಗಾಲನು ತನ್ನ ತಾಯಿಯನ್ನು ಮತ್ತೆ ಪಡೆಯದೇ ತಿರಸ್ಕಾರ

ಮಾಡಿದ ತಂದೆ ವಸುದೇವನಲ್ಲಿ ಮತ್ತು ಯಾದವರಲ್ಲಿ ದ್ವೇಷ ಸಾಧಿಸುತ್ತಿದ್ದ. ಅವನನ್ನು ಕೊಲ್ಲಲು ಶ್ರೀ ಭಾರ್ಗವ ರಾಮನು ಶ್ರೀ ಕೃಷ್ಣನನ್ನು ಕೇಳಿಕೊಳ್ಳುತ್ತಾನೆ. ಶ್ರೀ ಕೃಷ್ಣನು ತನ್ನ ಚಕ್ರಾಯುಧದಿಂದ ಅವನನ್ನು ಸಾಯಿಸುತ್ತಾನೆ.

57. ನಕ್ಕರು ಯಾದವರು ಚಿಕ್ಕ ಬುದ್ಧಿಯನೆ ಮಾಡಿ...ಗರ್ಗಾಚಾರ್ಯ ಯಾದವರ ಪೋರೋಹಿತರು. ಈತನನ್ನು ಯಾದವರು ಪರಿಹಾಸ ಮಾಡಿದುದರಿಂದ ಕೋಪಗೊಂಡು ಶಿವನ ಅನುಗ್ರಹದಿಂದ ಕಾಲಯವನನೆಂಬ ಮಗನನ್ನು ಪಡೆದನು.

58. ಉಕ್ಕಿನ ಪುಡಿಯ ಮುಕ್ತಿ... ಕಾಲಯವನನು: ಗರ್ಗಮುನಿಯು ಶಿವನ ಅನುಗ್ರಹದಿಂದ ಒಬ್ಬ ಅಪ್ಸರೆಯಲ್ಲಿ ಈತನನ್ನು ಪಡೆದನು. ಯಾದವರು ತಮ್ಮ ಕುಲಪುರೋಹಿತ ಗರ್ಗನನ್ನು ಅಪಹಾಸ್ಯ ಮಾಡಿದುದರಿಂದ ಕೋಪಾವಿಷ್ಟನಾಗಿ ಯಾದವರನ್ನು ಹಿಂಸಿಸಬಲ್ಲ ಮಗನನ್ನು ಪಡೆಯುವ ಸಂಕಲ್ಪ ಮಾಡಿದನು. ಇವನನ್ನು ಶ್ರೀ ಕೃಷ್ಣನೂ ಎದುರಿಸಲಾರದೆ ಓಡಿ ಹೋಗಿ ಒಂದು ಗವಿಯಲ್ಲಿ ಅಡಗಿದನು. ಕೃಷ್ಣನನ್ನು ಬೆನ್ನಟ್ಟಿ ಬಂದ ಕಾಲಯವನನು ಇಂದ್ರನ ಸೂಚನೆಯಂತೆ ನಿದ್ರೆಯಲ್ಲಿದ್ದ ಮುಚುಕುಂದನನ್ನು ಕೃಷ್ಣನೆಂದು ಭಾವಿಸಿ ಕಾಲಿನಿಂದ ತುಳಿಯಲು ಎಚ್ಚೆತ್ತ ಅವನ ದೃಷ್ಟಿಪಾತದಿಂದ ಕಾಲಯವನನು ಬೂದಿಯಾಗಿ ಬಿದ್ದನು.

63. ಚಕ್ಷುಸ್ಸು... ಕೃಷ್ಣನ ಕಂಡು ರಾಯ ಸ್ತೋತ್ರ ಮಾಡಿದ: ಮುಚುಕುಂದ ಮಾಂಧಾತನ ಮಗ. ದೈತ್ಯರನ್ನು ನಾಶಮಾಡುತ್ತಾ ದೇವತೆಗಳನ್ನು ರಕ್ಷಿಸಿದ. ಇಂದ್ರನ ಶ್ರೀರಕ್ಷೆಯಲ್ಲಿದ್ದ ಈತ ಯುದ್ಧಾಯಾಸ ಪರಿಹಾರಕ್ಕಾಗಿ ಗುಹೆಯೊಳಗೆ ನಿದ್ರೆಯಲ್ಲಿದ್ದನು. ನಿದ್ರೆಯಿಂದ ಎಚ್ಚರಗೊಳಿಸದವರು ತನ್ನ ಕಣ್ಣುರಿಗೆ ನಾಶವಾಗುವರೆಂದು ಹೇಳಿಕೆ ಹೇಳಿದ್ದ. ಮಲಗಿದ್ದ ಮುಚುಕುಂದನನ್ನು ತುಳಿದು ಎಚ್ಚರಗೊಳಿಸಿದ ಫಲವಾಗಿ ಕಾಲಯವನ ನಾಶವಾದ. ಆಗ ಅಲ್ಲಿಗೆ ಬಂದ ಕೃಷ್ಣನನ್ನು ಕಂಡು ಮುಚುಕುಂದನು ಕೃಷ್ಣನ ಸ್ತುತಿ ಮಾಡಿದ. ಮುಚುಕಂದನ ಸ್ತೋತ್ರದಲ್ಲಿ ರಾಜರು ಸ್ತ್ರೀವ್ಯಾಮೋಹದಿಂದ ಭವ ಎಂಬ ಭಾವಿಯೊಳಗೆ ಬೀಳುವರೆಂದೂ, ದೇಹವ್ಯಾಮೋಹಕ್ಕೆ ಒಳಗಾದ ಮಾನವ ಸಜ್ಜನರ ಸಂಗವನ್ನು ಮಾಡಬೇಕೆಂದು ಹೇಳಿದ.

70. ಆನಂದ ಭರಿತನಾದ ಗಂಗೆಯ ಮೊಮ್ಮಗನು... ಈ ಸಾಲು ಧೃತರಾಷ್ಟ್ರನನ್ನು ಸೂಚಿಸುತ್ತದೆ.

72. ಬ್ರಹ್ಮನ ಸಭೆಗೆ ಹೋಗಿ ರಾಯ.. ಎಂದು ವಿಧಿಯ ಕೇಳಿದ. ರೈವತರಾಜನು ತನ್ನ ಮಗಳು ರೇವತಿಗೆ ತಕ್ಕ ವರನಾರು ಎಂದು ಕೇಳಲು ಬ್ರಹ್ಮನಲ್ಲಿಗೆ ಹೋದಾಗ ಅಲ್ಲಿನ ಗಂಧರ್ವರ ಗಾನವನ್ನು ಕೇಳುತ್ತಲೇ ನಾಲ್ಕು ಯುಗಗಳು ಸಂದವು. ಕೊನೆಗೆ ಬ್ರಹ್ಮನು ಆಕೆಗೆ ಬಲರಾಮನೇ ಸೂಕ್ತ ವರನೆಂದು ತಿಳಿಸಿದನು. ರೇವತಿ ಬಲರಾಮನಿಗಿಂತ ಎತ್ತರವಾಗಿದ್ದಳು. ಬಲರಾಮ ತನ್ನ ಹಲಾಯುಧದಿಂದ ಆಕೆಯನ್ನು ತನಗೆ ಸರಿಯಾಗುವಂತೆ ಮಾಡಿಕೊಂಡನು.

76. ಆನೆ ಮೇಲೆ ಭೇರಿ ಹಾಕಿ... ಭೀಷ್ಮಕರಾಯ ಸಾರಿದ... ಸುಮಾರು ನೂರು ದ್ವಿಪದಿಗಳಲ್ಲಿ ಕೃಷ್ಣ ರುಕ್ಮಿಣಿ ವಿವಾಹ ಸನ್ನಿವೇಶವನ್ನು ವರ್ಣಿಸಲಾಗಿದೆ. ವಿದರ್ಭ ದೇಶದ ಅರಸ ಭೀಷ್ಮಕನಿಗೆ ರುಕ್ಮಿ, ರುಕ್ಮರಥ, ರುಕ್ಮಬಾಹು, ರುಕ್ಮಕೇಶ, ರುಕ್ಮಮಾಲಿಗಳೆಂಬ ಐವರು ಗಂಡು ಮಕ್ಕಳೂ ರುಕ್ಮಿಣಿ ಎಂದು

| | |
|---|---|
| ಹೆಣ್ಣು ಮಗಳೂ ಇದ್ದರು. ರುಕ್ಮಿಣಿಯ ಅಣ್ಣ ರುಕ್ಮಿ ತಂಗಿ ರುಕ್ಮಿಣಿಯನ್ನು ಶಿಶುಪಾಲನಿಗೆ ಮದುವೆ ಮಾಡಿಕೊಡುವುದಾಗಿ ನಿರ್ಧರಿಸಿದನು. ರುಕ್ಮಿಣಿ ಕೃಷ್ಣನಲ್ಲಿ ಅನುರಕ್ತಳಾಗಿ ತನ್ನನ್ನು ಮದುವೆ ಮಾಡಿಕೊಳ್ಳಬೇಕಾಗಿ ಕೃಷ್ಣನಿಗೆ ಪತ್ರ ಬರೆದು ಸ್ವಯಂವರದ ದಿನ ಬರುವಂತೆ ಆಹ್ವಾನಿಸಿದಳು. ಅಂತೆಯೇ ಸ್ವಯಂವರಕ್ಕೆ ಆಗಮಿಸಿದ ಕೃಷ್ಣ ರುಕ್ಮಿಣಿಯನ್ನು ಅಪರಹಿಸಿ ದ್ವಾರಕೆಗೆ ತಂದು ಮದುವೆ ಮಾಡಿಕೊಂಡ. ರುಕ್ಮಿಣಿಯನ್ನು ಮದುವೆಗೆ ಬಯಸಿದ್ದ ಶಿಶುಪಾಲ ಕೃಷ್ಣನ ಯಾದವ ಸೈನ್ಯವನ್ನು ಎದುರಿಸಿ ಸೋತು ಹೋದನು. ರುಕ್ಮಿಣಿಯನ್ನು ಕೃಷ್ಣನು ಬಲಾತ್ಕಾರದಿಂದ ಕರೆದೊಯ್ದುದನ್ನು ಸಹಿಸದ ಆಕೆಯ ಅಣ್ಣ ರುಕ್ಮಿ ಕೃಷ್ಣನನ್ನು ಕೊಂದು ರುಕ್ಮಿಣಿಯನ್ನು ಬಿಡಿಸಿ ತರದೆ ಊರು ಪ್ರವೇಶಿಸುವುದಿಲ್ಲವೆಂದು ಸೈನ್ಯದೊಂದಿಗೆ ಹೋಗಿ ಕೃಷ್ಣನನ್ನು ಎದುರಿಸಿದನು. ಕೃಷ್ಣನು ರುಕ್ಮಿಣಿಯನ್ನು ಯುದ್ಧದಲ್ಲಿ ಸೋಲಿಸಿ ರುಕ್ಮಿಣಿಯ ಕೈಯ ಕತ್ತಿಯಿಂದಲೇ ಅವನ ತಲೆಬೋಳಿಸಿದನು. ಅವಮಾನಿಸಿದನು. ದ್ವಾರಕಾನಗರಿಯಲ್ಲಿ ಕೃಷ್ಣ ರುಕ್ಮಿಣಿಯರ ವಿವಾಹವು ಅತ್ಯಂತ ವೈಭವದಿಂದ ಜರುಗಿತು. |
| **101.** ಅಕ್ರೂರನ ಕಾಯಿದಿ ಅಜಮಿಳಗೆ ವರವಿತ್ತಿ ಅಕ್ರೂರ. ಅಜಾಮಿಳ ಹೊಲತಿಯೊಬ್ಬಳನ್ನು ಕಂಡು ಮೋಹಿಸಿ ಅವಳನ್ನು ಕೂಡಿ ಹಲವು ಮಕ್ಕಳನ್ನು ಪಡೆದ. ಈತನು ಸಾಯುವ ಕಾಲದಲ್ಲಿ ಯಮದೂತರನ್ನು ಕಂಡು ಭಯದಿಂದ ನಾರಾಯಣನೆಂಬ ತನ್ನ ಕಿರಿಯ ಮಗನ ಹೆಸರನ್ನು ಹಿಡಿದು ಕರೆಯಲು ಆ ಹರಿನಾಮಸ್ಮರಣೆಯಿಂದಲೇ ವೈಕುಂಠ ಲೋಕವನ್ನು ಸೇರಿದನು. |
| **102.** ಅಂಬರೀಷನ ಪೊರೆದಿ ಗಜೇಂದ್ರಗೆ ವರವಿತ್ತಿ : ದ್ವಾದಶಿ ಪಾರಣೆಯ ದಿನ ಬರಬೇಕಾಗಿದ್ದ ದುರ್ವಾಸ ಬಾರದಿದ್ದುದರಿಂದ ಅಂಬರೀಷನು ತೀರ್ಥಸೇವನೆಯನ್ನು ಮಾಡಿಬಿಟ್ಟ. ಇದರಿಂದ ಕ್ರೋಧಗೊಂಡ ದುರ್ವಾಸನು ಅಂಬರೀಷನ ನಾಶಕ್ಕಾಗಿ ಕೃತ್ಯಯನ್ನು ನಿರ್ಮಾಣ ಮಾಡಿಬಿಡಲು ಭಕ್ತವತ್ಸಲನಾದ ಭಗವಂತನು ತನ್ನ ಚಕ್ರಾಯುಧದಿಂದ ಕೃತ್ಯಯನ್ನು ಸಂಹರಿಸಿ ಅಂಬರೀಷನನ್ನು ಕಾಪಾಡಿದನು. |
| ಪಾಂಡ್ಯದೇಶದ ವೈಷ್ಣವರಾಜನಾದ ಈತನು ಅಗಸ್ತ್ಯನ ಶಾಪದಿಂದ ಗಜರಾಜನಾದನು. ಇವನು ಒಂದು ಕೊಳದಲ್ಲಿ ನೀರು ಕುಡಿಯುತ್ತಿರಲು ಮೊಸಳೆಯೊಂದು ಆತನ ಕಾಲ ಹಿಡಿದು ಎಳೆಯಿತು. ಇವನು ಶ್ರೀಹರಿಗೆ ಮೊರೆಯಿಟ್ಟು ಎದುರಾದ ವಿಪತ್ತಿನಿಂದ ಮುಕ್ತನಾದನು. |
| **116.** ಗದಾಗ್ರಜನ ಬಯಸಿ... ಗದಾಗ್ರಜನೆಂದರೆ ಬಲರಾಮನ ಸಹೋದರ. ಸುದೇವನ ಪತ್ನಿಯರಲ್ಲಿ ಹುಟ್ಟಿದವನು ಗದ. ಈತನು ಅರ್ಜುನನಂತೆ ಎರಡೂ ಕೈಗಳಿಂದ ಬಾಣ ಪ್ರಯೋಗ ಮಾಡಬಲ್ಲವಾಗಿದ್ದನು. |
| **136.** ಅಷ್ಟ ಪತ್ರಿಕೆ...? |
| **190-204** ಸಿಂಹ ಬಂದು ಪ್ರಸೇನನ ಸೀಳಿ ಮಣಿಯ ಕೊಂಡು ಒಯ್ದಿತು. ಸೂರ್ಯನನ್ನು ತಪಸ್ಸು ಮಾಡಿ ಸತ್ರಾಜಿತನು ಸ್ಯಮಂತಕ ಮಣಿಯನ್ನು ಪಡೆದನು. ಒಂದು ದಿನ ಸತ್ರಾಜಿತನ ತಮ್ಮನಾದ ಪ್ರಸೇನನೆಂಬುವನು ಬೇಟೆಗೆ ಹೋಗುವಾಗ ರತ್ನವನ್ನು ಕೊರಳಿಗೆ ಧರಿಸಿಕೊಂಡು ಹೋದನು. ಬೇಟೆಯಾಡುತ್ತಿರುವಾಗ ಸಿಂಹವೊಂದು ಆತನ ಮೇಲೆ ಹಾರಿ ಕೊಂದುಹಾಕಿತು. |

| | |
|---|---|
| ಅದು ಅವನ ಕೊರಳಲ್ಲಿದ್ದ ಸ್ಯಮಂತಕ ರತ್ನವನ್ನು ಬಾಯಲ್ಲಿ ಕಚ್ಚಿಕೊಂಡು ಹೋಗುತ್ತ ಒಂದು ಗುಹೆಯನ್ನು ಪ್ರವೇಶಿಸಿತು. ಆ ಗುಹೆಯಲ್ಲಿ ವಾಸವಾಗಿದ್ದ ಒಂದು ಕರಡಿ ಆ ಸಿಂಹದೊಡನೆ ಹೋರಾಡಿ ಅದನ್ನು ಕೊಂದು ಹಾಕಿ ಆ ರತ್ನವನ್ನು ತನ್ನ ಮಗುವಿಗೆ ಆಟವಾಡುವುದಕ್ಕೆ ಕೊಟ್ಟಿತು. ಸತ್ರಾಜಿತನು ತಮ್ಮ ಮರಳದಿರುವುದನ್ನು ಕಂಡು ಕೃಷ್ಣನ ಮೇಲೆ ಸಂಶಯಪಟ್ಟನು. ತನ್ನ ಮೇಲೆ ಬಂದ ಅಪವಾದವನ್ನು ಪರಿಹರಿಸಲೆಂದು ಕೃಷ್ಣನು ಕಾಡಿಗೆ ನಡೆದು ಹೆಜ್ಜೆಗುರುತ ಹಿಡಿದು ಗುಹೆಯನ್ನು ಪ್ರವೇಶಿಸಿದನು. ಅಲ್ಲಿದ್ದ ಕರಡಿ ಮರಿ ಆ ಮಣಿಯೊಂದಿಗೆ ಆಟವಾಡುತ್ತಿದ್ದುದನ್ನು ಕಂಡನು. ಕೃಷ್ಣನು ಆ ಗುಹೆಯೊಳಗಿನ ಜಾಂಬವಂತ (ಕರಡಿ)ನ ಜತ ಹೋರಾಟ ಮಾಡಿ ಅದನ್ನು ಸೋಲಿಸಿದನು. ಜಾಂಬವಂತನು ರತ್ನವನ್ನು, ತನ್ನ ಮಗಳು ಜಾಂಬವತಿಯನ್ನು ಸ್ವೀಕರಿಸುವಂತೆ ಹೇಳಿದನು. ಅಂತೆಯೇ ಕೃಷ್ಣನು ಎರಡನ್ನೂ ಸ್ವೀಕರಿಸಿದನು. |
| 206. ರಕ್ಷೆಯನಿಟ್ಟು ಸೊಕ್ಕಿದ ಗೂಳಿಯ ಕಟ್ಟಿ...ಕೃಷ್ಣನ ಅಷ್ಟ ಮಹಿಷಿಯರಲ್ಲಿ ನೀಲೆ (ಇನ್ನೊಂದು ಹೆಸರು ಸತ್ಯೆ) ಒಬ್ಬಳು. ಈಕೆಯ ತಂದೆ ನಗಜಿತ. ಕೃಷ್ಣನು ಈ ನಗಜಿತು ರಾಜನ ಏಳು ಹೋರಿಗಳಿಗೆ ಏಕಕಾಲದಲ್ಲಿ ಮೂಗುದಾರವನ್ನು ಪೋಣಿಸಿದ ಫಲವಾಗಿ ಆತ ಕೃಷ್ಣನಿಗೆ ತನ್ನ ಮಗಳು ಸತ್ಯಾ ಅಥವಾ ನೀಲೆಯನ್ನು ಮದುವೆ ಮಾಡಿ ಕೊಟ್ಟನು (ಈ ಪ್ರಸಂಗ ಇದೇ ಕಾವ್ಯದ ಪೂರ್ವಾರ್ಧದ 51ರಲ್ಲಿ ಪುರಾವೃತ್ತಿತವಾಗಿದೆ). |
| 207. ಭದ್ರವಂತಿ ಮದುವೆಯಾಗಿ... ಭದ್ರಾ ಶ್ರೀಕೃಷ್ಣನ ಒಬ್ಬಳು ಹೆಂಡತಿ. ಈಕೆಯ ತಾಯಿ ಶ್ರುತಕೀರ್ತಿ. |
| 208. ಮಿತ್ರವಂತಿಯ ಮದುವೆಯಾಗಿ...ಕೃಷ್ಣನ ಸೋದರತ್ತೆ ರಾಜಾಧಿದೇವಿಯ ಮಗಳು. ಕೃಷ್ಣನ ಪತ್ನಿಯರಲ್ಲಿ ಒಬ್ಬಳು. |
| 209. ಯಮುನೆಯ ತೀರದಲ್ಲಿ. ಕಾಳಿಂದಿ ಕೃಷ್ಣನ ಅಷ್ಟಮಹಿಷಿಯರಲ್ಲಿ ಒಬ್ಬಳು. ಶ್ರೀ ಕೃಷ್ಣನನ್ನು ಪತಿಯಾಗಿ ಪಡೆಯಬೇಕೆಂದು ಈಕೆ ತಪಸ್ಸು ಮಾಡಿದಳು. ಕೃಷ್ಣನು ಈಕೆಯನ್ನು ಇಂದ್ರಪ್ರಸ್ಥದ ಮೂಲಕ ದ್ವಾರಕೆದೆ ಒಯ್ದು ಮದುವೆ ಮಾಡಿಕೊಂಡನು. |
| 211. ಹಿಡಿಂಬನ ಕೊಂದ ಹಿಡಿಂಬಿಯ ಮದುವೆಯಾಗಿ... ಹಿಡಿಂಬನನ್ನು ಭೀಮನು ಕೊಂದು ಈತನ ತಂಗಿ ಹಿಡಿಂಬೆಯನ್ನು ವ್ಯಾಸರ ಅನುಮತಿಯಂತೆ ವಿವಾಹವಾದನು. ಇವರಲ್ಲಿ ಜನಿಸಿದವನು ಘಟೋತ್ಕಚ. |
| 212. ಅಕ್ರೂರ ಕೃತವರ್ಮ ಶತಧನ್ವಗೆ ಪ್ರೇರಿಸಿ... ಶ್ರೀಕೃಷ್ಣನ ರಾಣಿ ಸತ್ಯಭಾಮೆಯನ್ನು ತಾನು ವಿವಾಹವಾಗಬೇಕೆಂದು ಶತಧನ್ವನು ಬಯಸಿದ್ದ. ಆದರೆ ಆಕೆಯನ್ನು ಶ್ರೀ ಕೃಷ್ಣನು ವಿವಾಹವಾದುದನ್ನು ಕಂಡು ಶತಧನ್ವನು ಆಶಾಭಂಗದಿಂದ ಸತ್ರಾಜಿತನ ಮೇಲೆ ಸೇಡು ತೀರಿಸಿಕೊಳ್ಳಲು ಬಯಸಿದ. ಅವನ ಈ ದುಷ್ಕೃತ್ಯಕ್ಕೆ ಆತನ ಗೆಳೆಯರಾದ ಅಕ್ರೂರ, ಕೃತವರ್ಮರು ಬೆಂಬಲಿಸುತ್ತಿದ್ದರು. ಸತ್ರಾಜಿತನ ಕೊರಳಲಿರುವ ಸ್ಯಮಂತಕ ಮಣಿಯನ್ನು ಅಪಹರಿಸುವ ಸಲುವಾಗಿ ಗಾಢನಿದ್ರೆಯಲ್ಲಿದ್ದ ಅವನನ್ನು ಕಡಿದು ಕೊಂದರು. |

| |
|---|
| **215.** ಪಂಚಪಾಂಡವರು ಕೂಡಿ ಮಾರ್ಗದೊಳಗೆ... ಅಡ್ಡಕಟ್ಟಿದ ಚಿತ್ರರಥನು ದೇವಗಂಧರ್ವರಲ್ಲಿ ಒಬ್ಬ. ದ್ರೌಪದೀ ಸ್ವಯಂವರಕ್ಕೆ ಹೋರಾಟ ಪಾಂಡವರಲ್ಲಿ ಅರ್ಜುನನಿಗೆ ಸೋತು ತನ್ನಲ್ಲಿದ್ದ ಸಮ್ಮೋಹನಾಸ್ತ್ರವನ್ನು ಉಪದೇಶ ಮಾಡದನು. ರಾಜಸೂಯ ಯಾಗದಲ್ಲಿ ಪಾಂಡವರಿಗೆ ಅನೇಕ ದಿವ್ಯಾಸ್ತ್ರಗಳನ್ನು ಇತ್ತನು. ಅಂಗಾರ ವರ್ಮನೆಂಬ ಇನ್ನೊಂದು ಹೆಸರೂ ಈತನಿಗಿತ್ತು. |
| **220.** ಧೌಮ್ಯಾಚಾರ್ರ ಕೂಡಿಕೊಂಡು... ಧೌಮ್ಯಾಚಾರ್ಯ ಪಾಂಡವರ ಪುರೋಹಿತ. ಈತನು ಪಾಂಡವರಿಗೆ ಸೂರ್ಯನಿಂದ ಅಕ್ಷಯಪಾತ್ರೆಯನ್ನು ಕೊಡಿಸಿದನು. ಅರಣ್ಯವಾಸಕಾಲದಲ್ಲಿ ಪಾಂಡವರ ಜತೆಗಿದ್ದ ಅವರಿಗೆ ಅನೇಕ ಸತ್ಕಥೆಗಳನ್ನು ನಿರೂಪಿಸಿದನು. |
| **249.** ವೃಷ್ಟಿ ಹೋಗಿ ದುರುಭಿಕ್ಷ ಹೆಚ್ಚಲು... ರಾಜ್ಯದಲ್ಲಿ ಮಳೆ ಹೋಗಿ ಬರಬೀಳಲು ಇದಕ್ಕೆ ಕಾರಣವೇನು ಎಂದ ಕೃಷ್ಣ ಕೇಳಿದ. ಅಕ್ರೂರನು ಊರಲ್ಲಿ ಇಲ್ಲದಿರುವುದೇ ಇದಕ್ಕೆ ಕಾರಣವೆಂದು ತಿಳಿದು ಬಂದಿತು. ಸತ್ಯಭಾಮಾ ವಿವಾಹದ ಹಿನ್ನೆಲೆಯಲ್ಲಿ ಶತಧನ್ವನಿಗೆ ಸಹಕರಿಸಿದ ಅಕ್ರೂರ ಕೃಷ್ಣನಿಗೆ ಹೆದರಿ ದ್ವಾರಕೆಯಿಂದ ಓಡಿಹೋಗಿ ತಲೆಮರೆಸಿಕೊಂಡಿದ್ದನು. |
| **260** ಬಲದೇವರ ಭಗಿನಿ ತನ್ನ ಮಡದಿ ಆಗಬೇಕೆಂದು...ವಸುದೇವನ ಮಗಳು ಸುಭದ್ರೆಯನ್ನು ದುರ್ಯೋಧನನಿಗೆ ಕೊಟ್ಟು ಮದುವೆ ಮಾಡುವ ಸುದ್ಧಿ ಕೇಳಿದ ಅರ್ಜುನ ಆಕೆಯನ್ನು ಅಪಹರಿಸುವ ಹಂಚಿಕೆ ಹಾಕಿದ. ಅದಕ್ಕಾಗಿ ಸಂನ್ಯಾಸಿ ವೇಷ ತೊಟ್ಟು ಪ್ರಭಾಸಕ್ಷೇತ್ರಕ್ಕೆ ಬಂದನು. ಜಾತ್ರೆ ನೋಡಲೆಂದು ಕೋಟೆಯಿಂದ ಹೊರಬಂದ ಸುಭದ್ರೆಯನ್ನು ಅರ್ಜುನನು ಎತ್ತಿ ರಥದಲ್ಲಿ ಕುಳ್ಳಿರಿಸಿ ಇಂದ್ರಪ್ರಸ್ಥದ ದಾರಿ ಹಿಡಿದನು. ಬಲರಾಮನು ಈ ಸುದ್ಧಿಯನ್ನು ಕೇಳಿ ತನ್ನ ಯಾದವ ಸೇನೆಯನ್ನು ಕಳ್ಳ ಸಂನ್ಯಾಸಿಯನ್ನು ಹಿಡಿದು ತರಲು ಅಟ್ಟಿದನು. ಅರ್ಜುನನು ಅವರೆಲ್ಲರನ್ನು ಸೋಲಿಸಿದನು. ಬಲರಾಮನು ಇದರಿಂದ ಇನ್ನಷ್ಟು ಸಿಡಿಮಿಡಿಗೊಂಡು ತನ್ನ ಹಲಾಯುಧ ಹಿಡಿದು ಅರ್ಜುನನನ್ನು ಎದುರಿಸಲು ಹೊರಟನು. ಆಗ ಕೃಷ್ಣ ಅವನನ್ನು ತಡೆದು ಸುಭದ್ರೆಯೇ ಅವನನ್ನು ಮೆಚ್ಚಿ ಹೋಗಿರುವಾಗ ಶಿಕ್ಷಿಸುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದ. ಬಲರಾಮ ಒಪ್ಪಿ ಸಂತೋಷದಿಂದ ತಂಗಿಗೆ ಉಡುಗೋರೆಯನ್ನು ಕಳುಹಿಸಿಕೊಟ್ಟ. |
| **265-274...** ಒಂಬತ್ತು ನುಡಿಗಳಲ್ಲಿ ಖಾಂಡವ ವನ ದಹನದ ಇವರ ಇದೆ. |
| **275-373.** ಪಾರಿಜಾತಾಪರಹರಣದ ವೃತ್ತಾಂತವಿದೆ. ಶ್ರೀ ಕೃಷ್ಣನು ರಾಣಿಯಂದಿರಾದ ಸತ್ಯಭಾಮೆ, ರುಕ್ಮಿಣಿಯರ ಜತೆ ಇದ್ದಾಗ ನಾರದರು ಬಂದು ಒಂದು ಪಾರಿಜಾತದ ಹೂವನ್ನು ನೀಡಲು ಕೃಷ್ಣನು ಅದನ್ನು ರುಕ್ಮಿಣಿಗೆ ಕೊಟ್ಟನು.ಇದರಿಂದ ಅಸಹನೆಗೊಂಡ ಸತ್ಯಭಾಮೆಗೆ ಶ್ರೀ ಕೃಷ್ಣನು ಸ್ವರ್ಗದಿಂದ ಪಾರಿಜಾತ ವೃಕ್ಷವನ್ನೇ ತಂದುಕೊಟ್ಟನು. ಅದನ್ನು ಆಕೆ ತನ್ನ ಹಿತ್ತಲಲ್ಲಿ ನೆಟ್ಟಳು. ಆದರೆ ದೇವೇಂದ್ರ ಇದನ್ನು ಸಹಿಸಲಿಲ್ಲ. ಕೃಷ್ಣನು ಸತ್ಯಭಾಮಯೊಡನೆ ನರಕಾಸುರನಲ್ಲಿಗೆ ಹೋಗಿ ಅವನನ್ನು ಸಂಹರಿಸಿ ಅದಿತಿಯ ಕುಂಡಲ ತೆಗೆದುಕೊಂಡು ಇಂದ್ರನಿಂದ ಸತ್ಕೃತನಾದ. ಆದರೆ ಪಾರಿಜಾತ ವೃಕ್ಷ ತೆಗೆದುಕೊಂಡಾಗ ಕದನಕ್ಕೆ ಬಂದ ಇಂದ್ರಾದಿಗಳನ್ನು ಸೋಲಿಸಿದ ಶ್ರೀಕೃಷ್ಣನು ಪಾರಿಜಾತ ವೃಕ್ಷವನ್ನು ಮತ್ತೆ ಇಂದ್ರನಿಗೆ ಮರಳಿಸಿದ. |

**324.** ಹಂಸವಾಹನಗೆ... ಹಂಸ ಡಿಂಬಿಕರು ಸಹೋದರರು. ಹಂಸ ಕರೂಷ ದೇಶದ ರಾಜ. ಈತನನ್ನು ಬಲರಾಮನು ಕೊಂದನು. ಡಿಂಬಿಕ ಜರಾಸಂಧನ ಮಂತ್ರಿ. ಹಂಸನು ಶ್ರೀಕೃಷ್ಣನೊಡನೆ ಯುದ್ಧಮಾಡಿ ಮೂರ್ಛಿತನಾದಾಗ ಡಿಂಬಿಕನು ಹಂಸನು ಸತ್ತನೆಂದೇ ಭಾವಿ, ಯಮುನಾ ನದಿಗೆ ಹಾರಿ ಪ್ರಾಣತ್ಯಾಗ ಮಾಡಿಕೊಂಡನು.

**326.** ತಂದೆ ಮಾತು ಕೇಳಿದವನ... ತಂದೆಯ ಮಾತು ಕೇಳಿದವನೆಂದರೆ ಪರಶುರಾಮ. ಆತ 21 ಬಾರಿ ಭೂಭಾರವನ್ನು ಇಳುಹುವ ಸಲುವಾಗ ರಾಜರುಗಳನ್ನು ಕೊಂದು ಆ ರಕ್ತದಿಂದಾದ ಐದು ಮಡುಗಳೇ ಸ್ಯಮಂತ ಪಂಚಕಗಳು. ಅದುವೇ ಕುರುಕ್ಷೇತ್ರ. ಕೃಷ್ಣ, ಬಲರಾಮಾದಿಗಳು ಖಗ್ರಾಸ ಸೂರ್ಯಗ್ರಹಣದ ದಿನ ಸ್ನಾನಕ್ಕಾಗಿ ದಾನಕಾರ್ಯದ ಸಲುವಾಗಿ ಅಲ್ಲಿ ಬಂದರು.

**333-338.** ಕೃಷ್ಣನ ಅಷ್ಟಮಹಿಷಿಯರಲ್ಲಿ ಕೆಲವರು ತಮ್ಮ ವಿವಾಹವೃ ತ್ತಾಂತವನ್ನು ವಿವರಿಸಿದ್ದಾರೆ.

**339-343.** ದ್ರೌಪದಿ ತಾನು ಅರ್ಜುನನ ವಿವಾಹವಾದ ಪ್ರಸಂಗವನನ್ನು ಹೇಳಿದ್ದಾಳೆ.

**344.** ವಸುದೇವ ಯಜ್ಞಕರ್ಮವ ಮಾಡಿ ದ್ರವ್ಯ ಬ್ರಾಹ್ಮಣರಿಗೆ... ವಸುದೇವನು ಸಕಲ ಪಾಪ ಪರಿಹಾರಾರ್ಥವಾಗಿ ಒಂದು ಸತ್ಕರ್ಮವನ್ನು ಸೂಚಿಸುವಂತೆ ಋಷಿಗಳಲ್ಲಿ ಕೇಳಿದನು. ಅದಕ್ಕೆ ಋಷಿಗಳು (ನಾರದರು) ಮನುಷ್ಯ ಹುಟ್ಟುವಾಗಲೇ ದೇವಋಣ, ಋಷಿಋಣ ಹಾಗೂ ಪಿತೃಋಣ ಹೊತ್ತು ಹುಟ್ಟುತ್ತಾನೆ. ಅಧ್ಯಯನದಿಂದ ಋಷಿಋಣ ತೀರುತ್ತದೆ. ಪುತ್ರಲಾಭದಿಂದ ಪಿತೃಋಣ ತೀರುತ್ತದೆ. ಇವೆರಡನ್ನೂ ಪೂರೈಸಿರುವ ನೀನು (ವಸುದೇವ) ಯಜ್ಞದ ಮೂಲಕ ದೇವಋಣವನ್ನು ತೀರಿಸಬೇಕಾಗಿದೆ ಎನ್ನುತ್ತಾರೆ. ಆ ಪ್ರಕಾರ ವಸುದೇವ ಆ ಸ್ಯಮಂತ ಪಂಚದಲ್ಲೇ ಯಜ್ಞ ಕಾರ್ಯವನ್ನು ನೆರವೇರಿಸಿದನು.

**345-347.** ವಸುದೇವ ಕೃಷ್ಣನನ್ನು ಸ್ತುತಿಸಿ ಆತನ ಅಲೌಕಿಕ ಗುಣಶೀಲಗಳ ಗುಣಗಾನವನ್ನು ಮಾಡಿದ ವಿವರ.

**353-367.** ಈ ನುಡಿಗಳಲ್ಲಿ ಕೃಷ್ಣ ರುಕ್ಮಿಣಿಯರ ಪ್ರೇಮಕಲಹದ ವಿವರ ಬರುತ್ತದೆ.

**368-378.** ನಾರದರು ಶ್ರೀಕೃಷ್ಣನ ದಾಂಪತ್ಯ ಜೀವನದ ಚಿತ್ರವನ್ನು ನೋಡಬಂದ ವಿವರ ಇಲ್ಲಿದೆ. ಒಂದು ಮಂದಿರದಲ್ಲಿ ಶ್ರೀಕೃಷ್ಣ ಶ್ರೀಗಂಧವನ್ನು ಪೂಸಿಕೊಂಡು ಮಂದಾರ ಮಾಲೆಯ ಕೊರಳಿಗ್ಹಾಗಿಕಿ ನಗುತ್ತ ನಿಂತಿದ್ದರೆ, ಇನ್ನೊಂದು ಮಂದಿರದೊಳಗೆ ತನ್ನ ಸತಿಯರೊಂದಿಗೆ ಉದ್ಧವನನ್ನು ಸೇರಿಸಿಕೊಂಡು ಕೃಷ್ಣ ಪಗಡೆಯಾಡುತ್ತಿದ್ದಾನೆ. ಇನ್ನೊಂದು ಕೋಣೆಗೆ ನಾರದರು ಬರುವಾಗ ಕೃಷ್ಣ ಅಳುತ್ತಿರುವ ತನ್ನ ಮುದ್ದುಮಕ್ಕಳೊಡನೆ ಆಟವಾಡುತ್ತಿದ್ದಾನೆ, ತೊಟ್ಟಿಲು ತೂಗುತ್ತಿದ್ದಾನೆ. ಇನ್ನೊಂದೆಡೆ ಆಟಿಕೆಯ ಕುದುರೆಯನ್ನು ಕುಣಿಸುತ್ತಾ ಚದುರಂಗವಾಡುತ್ತಾ ಮಕ್ಕಳಿಗೆ ಅಸ್ತ್ರವಿದ್ಯೆಯನ್ನು ಹೇಳಿಕೊಡುತ್ತಿದ್ದಾನೆ. ಇನೊಂದು ಮಂದಿರಕ್ಕೆ ನಾರದರು ಬಂದರೆ ಅಲ್ಲಿ ಕೃಷ್ಣ ಸ್ನಾನ, ದಾನ, ಮೌನ, ಮಂತ್ರ, ದೇವರ ಪೂಜೆಗಳಲ್ಲಿ ನಿರತನಾಗಿ ಏಕಕಾಲಕ್ಕೆ ಸ್ತ್ರೀಯರ ಜತೆ ಜಲಕ್ರೀಡೆಯಲ್ಲಿ ನಿರತನಾಗಿದ್ದಾನೆ. ಇನ್ನೊಂದು ಮಂದಿರದೊಳಗೆ ಮಾನಿನಿಯರಿಗೆ ಪುರಾಣ ವ್ಯಾಖ್ಯಾನ

ಮಾಡುತ್ತಿದ್ದರೆ, ಇನ್ನೊಂದೆಡೆ ಬ್ರಹ್ಮಭೋಜನ ಮಾಡಿಸುತ್ತ ವಿಳ್ಯ ನೀಡುತ್ತಾ ಜನ್ಮ ಸಾಫಲ್ಯವಾಯಿತೆನ್ನುತ್ತಿದ್ದಾನೆ. ಇಂತಹ ಕೃಷ್ಣನನ್ನು ಅಪಾರ ಮಹಿಮನೆಂದು ನಾರದರು ಸ್ತುತಿಸಿದರು.

**379-382.** ಪಾಂಡುವಿಗೆ ಸ್ವರ್ಗ ಪ್ರಾಪ್ತಿಯಾಗುವ ಸಲುವಾಗಿ ನಾರದರ ಸೂಚನೆಯಂತೆ ರಾಜಸೂಯ ಯಾಗ ಮಾಡಲು ಧರ್ಮರಾಯನಿಗೆ ಸೂಚಿಸಿದ್ದು ಈ ಭಾಗದಲ್ಲಿದೆ.

**390-394.** ರಾಜಸೂಯಕ್ಕಾಗಿ ಕೃಷ್ಣನ ಸಲಹೆ ಪಡೆದು ಪಾಂಡವರು ಸಿದ್ಧರಾದುದು. ಈ ನೆಪದಲ್ಲಿ ಜರಾಸಂಧನ ವಧೆಗೆ ಕೃಷ್ಣನು ಭೀಮಾರ್ಜುನರನ್ನು ಬಳಸಲು ಪ್ರಯತ್ನಿಸಿದನು.

**395-408.** ಜರಾಸಂಧನು ಮಗಧ ದೇಶಕೆ ಹೊರಟ ಸನ್ನಿವೇಶ. ಭೀಮನಿಂದ ಜರಾಸಂಧನನ್ನು ಕೃಷ್ಣ ಕೊಲ್ಲಿಸಿದ.

**412-420.** ರಾಜಸೂಯದ ಅಗ್ರಪೂಜೆಯ ಪ್ರಸ್ತಾವ ಶಿಶುಪಾಲ ವಧಾ ಪ್ರಸಂಗ ಇಲ್ಲಿದೆ.

**425-426.** ಅಂದು ಸ್ವಯಂವರದಲ್ಲಿ... ಜಾಂಬವತಿ ಸುತ ಸಾಂಬನು ದುರ್ಯೋಧನನ ಪುತ್ರಿ ಲಕ್ಷಣೆಯನ್ನು ಅಪಹರಿಸಿ ಕೌರವನಿಂದ ಬಂಧಿತನಾದ. ನಾರದರಿಂದ ಈ ಸುದ್ಧಿಯನ್ನು ಕೇಳಿದ ಬಲರಾಮ ಆತನನ್ನು ಬಿಡಿಸಿಕೊಂಡು ಬರಹೋದಾಗ ಕೌರವರ ಒರಟ ಮಾತುಗಳನ್ನು ಕೇಳಿ ಹಸ್ತಿನಾವತಿಯನ್ನು ಮುಳುಗಿಸಲು ಹಲಾಯುಧದಿಂದ ಗಂಗೆಯನ್ನೆಳೆದನು. ಆಗ ಕೌರವರು ಶರಣುಬಂದರು.

**427-428.** ಇಬ್ಬರೊಂದಾಗಿ ಕೂಡಿ ಮಾರ್ಗದಲಿ... ಭಾರತ ಯುದ್ಧಾನಂತರ ಸುಭದ್ರೆಯೊಂದಿಗೆ ಕೃಷ್ಣ ದ್ವಾರಕೆಗೆ ಮರುಳುತ್ತಿದ್ದ. ಕೃಷ್ಣನು ಸರ್ವನಾಶಕನೆಂದು ಭಾವಿಸಿ ಆತನಿಗೆ ಶಾಪಕೊಡಲು ಸಿದ್ಧನಾದಾಗ ಶ್ರೀಕೃಷ್ಣನು ಅವನಿಗೆ ವಿಶ್ವರೂಪವನ್ನು ತೋರಿ ಆದ ಬಯಸಿದಲ್ಲಿ ನೀರು ದೊರೆಯುವಂತೆ ಅನುಗ್ರಹಿಸಿದನು. ಇಂದ್ರನು ಶ್ರೀಕೃಷ್ಣನ ಆಜ್ಞೆಯಂತೆ ಬಾಯಾರಿದ ಉದಂಕನಿಗೆ ನೀರು ಕೊಡಲು ಚಂಡಾಲ ವೇಷದಿಂದ ಬಂದಾಗ ಆತ ಅದನ್ನು ತಿರಸ್ಕರಿಸಿದ. ಅಮೃತ ಅಸ್ವೀಕೃತವಾಗಿ ಅಮರರಿಗೆ ಉಳಿಯಿತು.

**429.** ರುಕ್ಮವತಿಯ ಕೊಟ್ಟ ರುಕ್ಮಿ ರುಕ್ಮಿಣಿಯ ಕುಮಾರಗೆ... ರುಕ್ಮಿಣಿಯ ಅಣ್ಣ ರುಕ್ಮನು ಮಗಳು ರುಕ್ಮವತಿಯನ್ನು ಸ್ವಯಂವರದಲ್ಲಿ ಅಪಹರಿಸಿದನೆಂದು ತಂಗಿಯ ಮಗ ಪ್ರದ್ಯುಮ್ನನಿಗೆ ಮದುವೆ ಮಾಡಕೊಟ್ಟನು.

**430.** ಮಗನ ಮಗಳ ಮದುವೆಯೊಳಗೆ ನೇಗಿಲಧರನು...ರುಕ್ಮಿಯೂ ಬಲರಾಮನೂ ಪ್ರದ್ಯುಮ್ನನ ವಿವಾಹಕಾಲದಲ್ಲಿ ಜೂಜಾಡುತ್ತಿದ್ದಾಗ ಇಬ್ಬರಲ್ಲೂ ವಾದ ಬೆಳೆದು ಬಲರಾಮನು ರುಕ್ಮಿಯನ್ನು ಕೊಂದನು.

**434-435.** ಗೋದಾನದಲ್ಲಿ ಸಕಲದೇಶವು ತುಂಬಿರಲು. ನೃಗರಾಜನು ಒಮ್ಮೆ ದಾನಮಾಡಿದ ದನವನ್ನು ಪುನಃ ದಾನ ಮಾಡಿದುದರಿಂದ ಮೊದಲು ದಾನ ಪಡೆದವನು ಕೋಪದಿಂದ ರಾಜನಿಗೆ ಜತಿಯಾಗುವಂತೆ ಶಾಪವಿತ್ತನು. ಯಾದವ ಕುಮಾರರು ಕ್ರೀಡೆಯಲ್ಲಿ ನೀರಡಿಸಿ ಆ ಬಾವಿಯ ಬಳಿಗೆ

ಬಂದಾಗ ಅವರ ಕಣ್ಣಿಗೆ ಜತಿಯು ಬಿದ್ದಿತು. ಅವರಿಗೆ ಎತ್ತಲಾಗದೆ ಹೋದಾಗ ಕೃಷ್ಣನು ಅದನ್ನು ಎತ್ತಿದನು. ಆತ ದಿವ್ಯರೂಪಧರಿಸಿ ಹೊರಟು ಹೋದನು.

**436-456.** ಕುಚೇಲನ ಕತೆ ಬೆಳೆದಿದೆ. ಕುಚೇಲ ಕೃಷ್ಣನ ಸಹಪಾಠಿ. ಆತ ಕಡುಬಡವ. ಬಡತನದ ಬೇಗೆಯನ್ನು ತಾಳಲಾರದೆ ಹೆಂಡತಿಯ ಸೂಚನೆಯಂತೆ ಒಂದು ಮುಷ್ಟಿ ಅವಲಕ್ಕಿಯನ್ನು ಗಂಟುಕಟ್ಟಿ ಕಂಕುಳದಲ್ಲಿರಿಸಿಕೊಂಡು ಕೃಷ್ಣದರ್ಶನಕ್ಕೆ ಬಂದನು. ಕೃಷ್ಣನು ಕುಚೇಲನು ತಂದ ಅವಲಕ್ಕಿಯನ್ನು ತಿಂದು ಆತನಿಗೆ ಹೇರಳ ಸಂಪತ್ತನ್ನು ನೀಡಿದನು.

**457** – ಚಿತ್ರಲೇಖೆ ಬೆರೆದುಕೊಟ್ಟು... ಬಾಣಾಸುರ ಶಿವನನ್ನು ಕುರಿತು ತಪಸ್ಸು ಮಾಡಿ ಸಾವಿರ ತೋಳುಗಳನ್ನು ಪಡೆದಿದ್ದ. ಬಾಣಾಸುರನ ಮಗಳು ಉಷೆಯು ಸ್ವಪ್ನದಲ್ಲಿ ಅನಿರುದ್ಧನನ್ನು ಕಲ್ಪಿಸಿಕೊಂಡು ವಿರಹದಿಂದ ಸಂಕಟಪಡುತ್ತಿರಲು ಬಾಣಾಸುರನ ಮಂತ್ರಿ ಕುಂಭಾಂಡಕನ ಪುತ್ರಿ ಚಿತ್ರಲೇಖೆ ಹಲವರ ಚಿತ್ರಗಳನ್ನು ಬರೆದುಕೊಟ್ಟು ಉಷೆಗೆ ತೋರಿಸಿ ಕೊನೆಗೆ ಶ್ರೀಕೃಷ್ಣನ ಮಗನಾದ ಅನಿರುದ್ಧನೇ ಈಕೆಯ ಪ್ರಿಯಕರನೆಂದು ತಿಳಿಸಿ ತನ್ನ ಮಾಯಾಶಕ್ತಿಯಿಂದ ಈತನನ್ನು ದ್ವಾರಕೆಯಿಂದ ಉಷೆಗೆ ತಂದುಕೊಟ್ಟಳು. ಬಾಣನಿಂದ ಬಂಧಿತನಾದ ತನ್ನ ಮೊಮ್ಮಗ ಅನಿರುದ್ಧನ ಬಿಡುಗಡೆಗಾಗಿ ಕೃಷ್ಣನೇ ಬಂದು ಬಾಣನ ನಾಲ್ಕು ತೋಳುಗಳನ್ನು ಉಳಿಸಿ ಉಳಿದವುಗಳನ್ನು ಕತ್ತರಿಸಿಹಾಗಿದನು.

**458-600.** ಕೃಷ್ಣನ ಅಶ್ವಮೇಧ ಯಾಗದ ವಿವರ ಇದೆ, ಕೃಷ್ಣನೊಮ್ಮೆಅಶ್ವಮೇಧ ಯಾಗ ನಡೆಸಿದ. ದೀಕ್ಷೆಯಲ್ಲಿ ಕೃಷ್ಣನಿರಲು ಬಾಯಲ್ಲಿ ಹುಲ್ಲು ಕಚ್ಚಿಕೊಂಡು ಬಂದ ಬ್ರಾಹ್ಮಣ ಶ್ರುತದೇವ, ಹುಟ್ಟಿ ಸಾವನ್ನಪ್ಪುವ ಮಕ್ಕಳನ್ನು ಉಳಿಸಿಕೊಡುವಂತೆ ನಿವೇದಿಸಿಕೊಂಡ. ಅರ್ಜುನ ತನ್ನ ಸಾಮರ್ಥ್ಯದ ಬಗ್ಗೆ ಅತಿವಿಶ್ವಾಸದಿಂದ ಮಕ್ಕಳಿಗೆ ಸಾವು ಎರಗದಂತೆ ಶರಪಂಜರವನ್ನೇ ನಿರ್ಮಿಸಿದ. ಆದರೆ ಮಗು ಆ ಶರಪಂಜರದೊಳಗೆಯೇ ಅದೃಶ್ಯವಾಗಲು ಪ್ರತಿಜ್ಞೆಯಂತೆ ಅರ್ಜುನ ಅಗ್ನಿಪ್ರೇವಶಕ್ಕೆ ಅಣಿಯಾದ. ಕೃಷ್ಣ ಎಲ್ಲರನ್ನೂ ರಥವೇರಿಸಿಕೊಂಡು ಅನಂತಾಸನಕ್ಕೆ ತೆರಳಿ ಪ್ರಾರಬ್ಧ ಭೋಗಾರ್ಥ ಬ್ರಾಹ್ಮಣ ಗರ್ಭದಲ್ಲಿ ಜನಿಸಲು ತಾನೇ ಒಯ್ದಿದ್ದ ಕುಮಾರನನ್ನು ಕರೆಸಿ ತೋರಿಸಿದ. ಆ ಬಳಿಕ ದೀಕ್ಷಾಬದ್ಧನಾದ ತಾನು ಸೀಮೋಲ್ಲಂಘನ ಮಾಡಿದುದರ ಸಲುವಾಗಿ ಪ್ರಾಯಶ್ಚಿತ್ತ ಮಾಡಿಕೊಂಡನು. ಕೃಷ್ಣ ರುಕ್ಮಿಣಿಯರು ದಾನ ಧರ್ಮ ನಡೆಸುತ್ತಿರಲು ದೇವಕಿ ಬಂದು ವಿಪುಸುತನಂತೆ ತನ್ನ ಮಕ್ಕಳಿಗೂ ಸದ್ಗತಿ ನೀಡುವಂತೆ ಕೇಳಿಕೊಂಡಳು.

**506-509.** ಇದು ಉಡುಪಿಯ ಕೃಷ್ಣನ ಮೂರ್ತಿಯ ಮೂಲಕಥೆ. ತಾಯಿ ದೇವಕಿ ಕೃಷ್ಣನ ಬಾಲಲೀಲೆಯನ್ನುನೋಡಬಯಸಿದಾಗ ಆತ ಕುಪ್ಪಸ ತೊಟ್ಟು, ಸೊಂಟಕ್ಕೆ ದಟ್ಟಿ ಸುತ್ತಿ ಕುಣಿದ ನಿಲುವು ರುಕ್ಮಿಣಿಗೆ ಮೆಚ್ಚಿಕೆಯಾಯಿತು. ತನಗೆ ಅಂಥ ಪ್ರತಿಮೆಯನ್ನು ಮಾಡಿಸಿಕೊಂಡಳು. ಅದುವೇ ಮದ್ವರ ಕಾಲದಲ್ಲಿ ಉಡುಪಿಯಲ್ಲಿ ಪ್ರತಿಷ್ಠಾಪನೆಯಾಯಿತೆನ್ನುವದು ಅಂಬೋಣ.

ವಾದಿರಾಜ ಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್।

ಪ್ರೀಣಯಾಮೋ ವಾಸುದೇವಂ ದೇವತಾಮಣ್ಡಲಾಖಣ್ಡಮಣ್ಡನಮ್॥

ಶ್ರೀಕೃಷ್ಣಾರ್ಪಣಮಸ್ತು।